# ಕಮಲ ಪಥ

RNI No.:KARKAN/2023/84034 | ಸಂಪುಟ : 02 | ಸಂಚಿಕೆ : 09 | ಡಿಸೆಂಬರ್ 2024 | ಬೆಂಗಳೂರು | ₹ 10/-



# ಸಂವಿಧಾನ ಸನ್ಮಾನ ಅಭಿಯಾನ



ಮೈಸೂರು ನಗರ




ಚಾಮರಾಜನಗರ




ದಕ್ಷಿಣ ಕನ್ನಡ



ಬೆಳಗಾವಿ ಗ್ರಾಮಾಂತರ



ರಾಯಚೂರು



ವಿಜಯಪುರ




ಹಾವೇರಿ




ಬಳ್ಳಾರಿ

# ಬುದ್ಧಿ ಬರಲಿಲ್ಲವೋ?, ಹತಾಶೆಯೋ?

**'ಕೆಟ್ಟರೂ ಬುದ್ಧಿ ಬರಲಿಲ್ಲ'** ಎಂಬ ಗಾದೆಗೆ ಅನುಗುಣವಾಗಿ ನಡೆದುಕೊಳ್ಳುತ್ತಿರುವ ಸಂಘಟನೆ ಎಂದರೆ ಅದು ಕಾಂಗ್ರೆಸ್. ಇದನ್ನು ಕಾಂಗ್ರೆಸ್ ಸಾಬೀತುಪಡಿಸುತ್ತಲೇ ಇದೆ. ಚುನಾವಣೆಯಿಂದ ಚುನಾವಣೆಗೆ ಕಾಂಗ್ರೆಸ್‌ನ್ನು ಜನತೆ ಸೋಲಿಸುತ್ತಲೇ ಇದ್ದಾರೆ. ಇತ್ತೀಚೆಗೆ ನಡೆದ ಮಹಾರಾಷ್ಟ್ರದ ಚುನಾವಣೆಯಲ್ಲಿ ಕಾಂಗ್ರೆಸ್‌ನ್ನು ಅಲ್ಲಿನ ಜನತೆ ಮೂಲೆ ಗುಂಪು ಮಾಡಿದ್ದಾರೆ. ಜಾರ್ಖಂಡ್‌ನಲ್ಲಿ ಹೇಮಂತ್ ಸೊರೇನ್ ಆಶ್ರಯದಲ್ಲಿ ಅಸ್ತಿತ್ವ ಉಳಿಸಿಕೊಳ್ಳಬೇಕಾದ ಪರಿಸ್ಥಿತಿಯನ್ನು ಎದುರಿಸಬೇಕಾಗಿದೆ. ಆದರೆ ಕಾಂಗ್ರೆಸ್ ಇದಾವುದರಿಂದಲೂ ಪಾಠ ಕಲಿಯಲೇ ಇಲ್ಲ ಎಂಬುದಕ್ಕೆ ಸಂಸತ್ ಅಧಿವೇಶನದಲ್ಲಿ ಕಾಂಗ್ರೆಸ್ ನಡೆದುಕೊಳ್ಳುತ್ತಿರುವ ರೀತಿಯೇ ಸ್ಪಷ್ಟ ಸಾಕ್ಷಿ.

ಸಂಸತ್ತು ಎಂಬುದು ಲೋಕಸಭಾ ಸದಸ್ಯನಿಗೆ ಜನತೆಯ ಸಮಸ್ಯೆಗಳನ್ನು ಪ್ರಸ್ತಾಪಿಸಿ ಪರಿಹಾರ ಕಂಡುಕೊಳ್ಳಲು ಒಂದು ವೇದಿಕೆ. ಆಡಳಿತ ಪಕ್ಷದ ವೈಫಲ್ಯಗಳನ್ನು ಎತ್ತಿ ತೋರಿಸುವ ಮೂಲಕ ಪ್ರಜಾಪ್ರಭುತ್ವದ ಮೌಲ್ಯಗಳನ್ನು ವಿರೋಧಪಕ್ಷವಾಗಿ ಎತ್ತಿ ಹಿಡಿಯಲು ಸಿಗುವ ಒಂದು ಅವಕಾಶ. ಆದರೆ ಕಾಂಗ್ರೆಸ್ ಇದಾವುದರ ಬಗ್ಗೆ ತಲೆಕೆಡಿಸಿಕೊಳ್ಳುತ್ತಿಲ್ಲ. ಮೋದಿ ಮತ್ತು ಬಿಜೆಪಿ ವಿರುದ್ಧ ವಿದೇಶಿ ಶಕ್ತಿಗಳು ಮಾಡಿದ ಆಧಾರ ರಹಿತ ವರದಿಗಳನ್ನೇ ಇಟ್ಟುಕೊಂಡು ಮೋದಿ ಸರ್ಕಾರದ ಮೇಲೆ ಆರೋಪಗಳನ್ನು ಹೊರಿಸುವ ಪ್ರಯತ್ನವನ್ನು ಕಾಂಗ್ರೆಸ್ ಮಾಡುತ್ತಿದೆ. ಆದರೆ ಇವುಗಳೆಲ್ಲವನ್ನು ಸದನದ ಒಳಗೆ ಚರ್ಚಿಸುವುದಕ್ಕಿಂತ ಮಾಧ್ಯಮಗಳಲ್ಲಿ ಪ್ರಚಾರಕ್ಕೋಸ್ಕರ ಮಾಡುತ್ತಿರುವುದು ಅತ್ಯಂತ ದೌರ್ಭಾಗ್ಯದ ಸಂಗತಿ. ಸರ್ಕಾರದ ಮೇಲೆ ಗುರುತರವಾದ ಆಧಾರ ಸಹಿತವಾದ ಆರೋಪಗಳಿದ್ದರೆ ಅದನ್ನು ಚರ್ಚಿಸಲು ಹಾಗೂ ಸರ್ಕಾರವನ್ನು ಹಣಿಯಲು ಸಾಕಷ್ಟು ಅವಕಾಶಗಳಿವೆ. ಆದರೆ ಕಾಂಗ್ರೆಸ್ ಮಿತ್ರ ಪಕ್ಷಗಳು ಇದಾವುದನ್ನೂ ಗಂಭೀರವಾಗಿ ಮಾಡುತ್ತಲೇ ಇಲ್ಲ. ಈ ಹಿಂದೆ **ರಫೇಲ್, ಪೆಗಸಿಸ್, ಇವಿಎಂ** ಪ್ರಕರಣಗಳಲ್ಲಿ ಆರೋಪ ಮಾಡಿ, ರುಜುವಾತು ಪಡಿಸದೆ ವಿಫಲರಾಗಿ, ನ್ಯಾಯಾಲಯಗಳಿಂದ ಛೀಮಾರಿ ಹಾಕಿಸಿಕೊಂಡ ಕಾಂಗ್ರೆಸ್‌ನ್ನು ಈಗಾಗಲೇ ದೇಶದ ಜನತೆ ಇಡೀ ದೇಶದಲ್ಲಿ ನೇಪಥ್ಯಕ್ಕೆ ಸರಿಸಿದ್ದಾರೆ. ಭಾರತ ವಿರೋಧಿ ಸೋರೋಸ್ ಸೃಷ್ಟಿತ ಕಪೋಲ ಕಲ್ಪಿತ ವರದಿಗಳನ್ನೇ ಆಧಾರವಾಗಿಟ್ಟುಕೊಂಡು ಮೋದಿಯವರ ಮೇಲೆ ಆರೋಪ ಮಾಡುವಷ್ಟು ಹಾಗೂ ಸಂವಿಧಾನದತ್ತವಾಗಿ ಗೌರವಾನ್ವಿತ ಪೀಠದಲ್ಲಿರುವ ರಾಜ್ಯಸಭಾ ಸಭಾಪತಿಯವರ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸುವಷ್ಟು ಬೌದ್ಧಿಕ ದಿವಾಳಿತನದ ಹಂತವನ್ನು ಕಾಂಗ್ರೆಸ್ ತಲುಪಿರುವುದು ಅತ್ಯಂತ ದೌರ್ಭಾಗ್ಯದ ಸಂಗತಿ. ಪ್ರಾದೇಶಿಕ ಪಕ್ಷಗಳಿಗಿಂತ ಸಂಖ್ಯಾತ್ಮಕವಾಗಿ ಕೆಳಮಟ್ಟಕ್ಕೆ ಇಳಿಯುತ್ತಿದ್ದರೂ **ಕಾಂಗ್ರೆಸ್‌ಗೆ ಇನ್ನೂ ಬುದ್ಧಿ ಬರದಿರುವುದು ಅದು ಪಳೆಯುಳಿಕೆಯಾಗುವುದರತ್ತ ಸಾಗಿದೆ ಎಂಬುದರ ಸಂಕೇತವಷ್ಟೆ.**

## ಸಂಪಾದಕೀಯ

ಪಾಠ ಕಲಿಯದ ಕಾಂಗ್ರೆಸ್‌ನ ಕಥೆ ಒಂದು ಕಡೆಯಾದರೆ ಬಿಜೆಪಿ ಯಶಸ್ಸನ್ನು ಜೀರ್ಣಿಸಿಕೊಳ್ಳಲಾಗದ ಮೋದಿ ವಿರೋಧಿಗಳ ಹೇಳಿಕೆಗಳು ದೇಶ ವಿರೋಧಿ ಮಾತ್ರವಲ್ಲ, ನಿಜಕ್ಕೂ ಆತಂಕಕಾರಿಯೂ ಹೌದು. ಅದರಲ್ಲೂ ಇತ್ತೀಚೆಗೆ ಮಹಾರಾಷ್ಟ್ರದಲ್ಲಿ ಮೋದಿಯವರ ವಿರುದ್ಧ ಸಿರಿಯಾದ ರೀತಿಯಲ್ಲಿ ಕ್ರಾಂತಿ ನಡೆಯುತ್ತದೆ ಎಂದು ಹೇಳಿರುವ ಸಂಜಯ್ ರಾವುತ್ ಹೇಳಿಕೆ ಖಂಡನೀಯ. ಇದು ಮಹಾರಾಷ್ಟ್ರದ ಜನತೆ ನೀಡಿರುವ ತೀರ್ಪಿನ ಕಾರಣದಿಂದ ವ್ಯಕ್ತವಾದ ಹತಾಶೆಯ ಪ್ರತೀಕ. ಇಂತಹ ಹೇಳಿಕೆಗಳು ಪ್ರಜಾಪ್ರಭುತ್ವಕ್ಕೆ ಮಾಡಿದ ಅವಮಾನ. ಇಂತಹ ಪ್ರಚೋದನಾಕಾರಿ ಹೇಳಿಕೆಗಳೇ ಮಹಾರಾಷ್ಟ್ರದ ಜನತೆಯ ತಿರಸ್ಕಾರಕ್ಕೆ ಕಾರಣವಾಯಿತು ಎಂಬುದನ್ನು ಸಂಜಯ್ ರಾವುತ್ ರಂತವರು ಇನ್ನೂ ಅರಿತಿಲ್ಲವೆಂದು ಕಾಣುತ್ತದೆ.

ರಾಜ್ಯದಲ್ಲಿ ಕಠಿಣ ಪ್ರಯತ್ನಗಳ ನಡುವೆಯೂ ಮೂರೂ ಉಪಚುನಾವಣೆಗಳಲ್ಲಿ ಎನ್‌ಡಿಎ ಸೋಲಬೇಕಾಗಿದೆ. ಕಾಂಗ್ರೆಸ್‌ನ ಆಡಳಿತ, ಹಣ ಬಳಕೆ ಉಪಚುನಾವಣೆಗಳಲ್ಲಿ ಪ್ರಭಾವ ಬೀರಿದ ಕಾರಣದಿಂದ ಕಾಂಗ್ರೆಸ್ ಗೆಲುವು ಸಾಧ್ಯವಾಯಿತೆಂದು ವಿಶ್ಲೇಷಿಸಬಹುದಾದರೂ ಗೆಲುವಿನ ದಡ ಸೇರಲು ವಿಫಲವಾದ ಅಂಶಗಳ ಆತ್ಮಾವಲೋಕನವನ್ನು ನಾವೆಲ್ಲರೂ ಮಾಡಿಕೊಳ್ಳಲೇ ಬೇಕು. ರಾಜ್ಯದಲ್ಲಿ ಹಗರಣಗಳ ಕಾಂಗ್ರೆಸ್ ಸರ್ಕಾರ ನಡೆಯುತ್ತಿದೆ. ಆಡಳಿತ ಪಕ್ಷದಲ್ಲಿ ಅಧಿಕಾರಕ್ಕಾಗಿ ಬೇಗುದಿ ಪ್ರಾರಂಭವಾಗಿದೆ. ಇದೆಲ್ಲದರ ಲಾಭ ಪಡೆಯುವತ್ತ ಬಿಜೆಪಿಯಿಂದ ಸಂಘಟನಾತ್ಮಕ ಹಾಗೂ ರಾಜಕೀಯ ಚಟುವಟಿಕೆಗಳಿಗೆ ಮತ್ತಷ್ಟು ವೇಗ ಕೊಡಬೇಕಾದ ಕಾಲ ಬಂದಿದೆ.

**(ಬಿದರೆ ಪ್ರಕಾಶ್)**
ಸಂಪಾದಕರು

ಕಮಲ ಪಥ

**ಪ್ರಕಾಶಕರು**
ಹೆಚ್.ಎಸ್. ಗೋಪಿನಾಥ್
ಮೊ : 9341231253


**ಸಂಪಾದಕರು**
ಬಿದರೆ ಪ್ರಕಾಶ್
ಮೊ : 9513447961

## ಸುಭಾಷಿತ



**ಭಾರತದ ಜನತೆ ದೇವಸ್ಥಾನಗಳಿಗೆ ಸಾಲುಗಟ್ಟಿ ನಿಲ್ಲುವಂತೆ ಗ್ರಂಥಾಲಯಗಳಿಗೆ ಸಾಲುಗಟ್ಟಿ ಯಾವಾಗ ನಿಲ್ಲುತ್ತಾರೋ, ಅಂದು ಭಾರತ ಜಗತ್ತಿನ ಗುರುವಾಗಲಿದೆ.**

**- ಡಾ. ಬಿ.ಆರ್. ಅಂಬೇಡ್ಕರ್**




**ಕಮಲ ಪಥ ಪತ್ರಿಕೆಗಾಗಿ ಸಂಪರ್ಕಿಸಿ :**
☎ : 08022041976, 23569999
ಅಜಿತ್‌ಶೆಟ್ಟಿ ಹೆರಂಜೆ 97430 91999
ಪದ್ಮಾವತಿ ಜೋಷಿ : 95380 20388
email : bjpkamalapatha@gmail.com

#7/6, 4ನೇ ತಿರುವು, ಸಿ.ಸಿ. ರಸ್ತೆ,
ಸರ್ವಜ್ಞನಗರ, ಕಾಕ್ಸ್ ಟೌನ್,
ಬೆಂಗಳೂರು 560 005

## ಈ ಸಂಚಿಕೆಯಲ್ಲಿ



06 **ವಕ್ಫ್ ಮಂಡಳಿ ಭೂ ಕಬಳಿಕೆ ನೀತಿ ವಿರುದ್ಧ ಬಿಜೆಪಿ ಸಮರ**




11 **ಜಿ-20 ಶೃಂಗ ಸಭೆಯಲ್ಲಿ ಪ್ರಧಾನಿ**

- **ದೀವಟಿಗೆ : ದೃಷ್ಟಿ ಮತ್ತು ಧ್ವನಿಯ ಸಾಮರಸ್ಯದ ಪ್ರತೀಕ** ........ 05
- ಸಂವಿಧಾನ ತಿದ್ದುಪಡಿ - ಕಾಂಗ್ರೆಸ್ ಮತ್ತು ಬಿಜೆಪಿ ........ 16
- ಗೋವಿಂದ ಪೈ ಎಂಬ ಸರ್ವಋತು ಬಂದರು ........ 19
- ಲ್ಯಾಂಡ್ ಜಿಹಾದ್ ವಿರುದ್ಧ ಸಿಡಿದೆದ್ದ ರಾಜ್ಯ ಬಿಜೆಪಿ ........ 23
- ಮಹಾ ಪರಿನಿರ್ವಾಣ ದಿವಸ ........ 26
- ಸಂಘಟನಾ ಪರ್ವ ವಿಶೇಷ ಸಭೆ ........ 27
- ಸಂವಿಧಾನ ದಿನಾಚರಣೆ ........ 28
- ಚುನಾವಣಾ ಫಲಿತಾಂಶಗಳ ಆತ್ಮಾವಲೋಕನ ಹಾಗೂ ಸಿಂಹಾವಲೋಕನ ........ 29
- **ಹಿರಿಯ ಕಾರ್ಯಕರ್ತರ ಪರಿಚಯ ಮಾಲೆ:** ನಾರಾಯಣರಾವ ಮನ್ನಳ್ಳಿ ........ 31
- ಮಾಸದ ಮಾಧುರ್ಯ 92ನೇ ಕಾರ್ಯಕ್ರಮದಲ್ಲಿ 'ದೀಪಧಾರಿಣಿ' ........ 33
- **ಮನ್ ಕಿ ಬಾತ್**- ಯುವ ರಾಜಕಾರಣ ........ 34



## ದೃಷ್ಟಿ ಮತ್ತು ಧ್ವನಿಯ ಸಾಮರಸ್ಯದ ಪ್ರತೀಕ

# ಅಟಲ್‌ಜೀ ಮತ್ತು ಅಡ್ವಾಣಿಜೀ

ಡಾ. ಹರೀಶ್ ಆತ್ರೇಯ
ಕಾರ್ಯಕರ್ತರು

**ಬಿ**ಜೆಪಿಯಿಂದ ಆಯ್ಕೆಯಾದ ಮೊದಲ ಪ್ರಧಾನಿಯಾದ ಅಟಲ್ ಬಿಹಾರಿ ವಾಜಪೇಯಿ ಅವರು ತಮ್ಮ ಕಾವ್ಯಾತ್ಮಕ ವಾಕ್ಚಾತುರ್ಯ ಮತ್ತು ಏಕೀಕರಣದ ದೃಷ್ಟಿಗೆ ಹೆಸರುವಾಸಿಯಾದ ಶ್ರೇಷ್ಠ ರಾಜಕಾರಣಿ. ಅವರ ನಿಕಟ ಸಹವರ್ತಿಯಾಗಿದ್ದ ಲಾಲ್ ಕೃಷ್ಣ ಅಡ್ವಾಣಿ, ಬಿಜೆಪಿಯ ಪ್ರಾರಂಭದ ದಿನಗಳಲ್ಲಿ ಬಿಜೆಪಿ ಕಟ್ಟಿದ ಮುಖ್ಯ ವಾಸ್ತುಶಿಲ್ಪಿಗಳಲ್ಲಿ ಒಬ್ಬರು. ಭಾರತದ ರಾಜಕಾರಣಕ್ಕೆ ಪ್ರಾಯೋಗಿಕ, ದೃಢವಾದ ಕಾರ್ಯಪದ್ಧತಿಯನ್ನು ತಂದವರು. ಅವರಿಬ್ಬರ ಕಾರ್ಯಚಟುವಟಿಕೆಗಳ ಶೈಲಿಗಳು ವಿಭಿನ್ನವಾಗಿದ್ದರೂ, ಅವರ ಹೇಳಿಕೆಗಳು ಮತ್ತು ದೃಷ್ಟಿಕೋನಗಳಲ್ಲಿ ಮಾತ್ರ ಅದ್ಭುತವಾದ ಸಮನ್ವಯವಿರುತ್ತಿತ್ತು.

ಈ ಹೊಂದಾಣಿಕೆ ಎಂದೂ ಕಾಕತಾಳೀಯವಾಗಿರಲಿಲ್ಲ; ಅಟಲ್ ಬಿಹಾರಿ ವಾಜಪೇಯಿ ಅವರ ಜನ್ಮದಿನದ ಸಂದರ್ಭದಲ್ಲಿ, ಭಾರತದ ರಾಜಕೀಯವನ್ನು ರೂಪಿಸುವಲ್ಲಿ ಅವರ ನಿಷ್ಪಕ್ಷಪಾತವಾದ ಮತ್ತು ಬದ್ಧತೆಯಿಂದ ಕೂಡಿದ ಶಕ್ತಿಯನ್ನು ಪ್ರದರ್ಶಿಸುವ ಅವರ ಮಾತುಗಳು ದೇಶದ ಬಗೆಗಿನ ಕಾಳಜಿ ಮತ್ತು ಉದ್ದೇಶದೊಂದಿಗೆ ಹೇಗೆ ಪ್ರತಿಧ್ವನಿಸಿತು ಎಂಬುದನ್ನು ಅನ್ವೇಷಿಸಲು ಯೋಗ್ಯವಾಗಿದೆ.

**ಸೈದ್ಧಾಂತಿಕ ಸಾಮರಸ್ಯ :** ವಾಜಪೇಯಿ ಮತ್ತು ಅಡ್ವಾಣಿ ಇಬ್ಬರೂ ಬಿಜೆಪಿಯ ದೇಶೀಯತೆ ಮತ್ತು ರಾಷ್ಟ್ರೀಯವಾದ ಮತ್ತು ಅಂತರ್ಗತ ಆಡಳಿತದ ಮೂಲ ತತ್ವಗಳಿಗೆ ಆಳವಾಗಿ ಬದ್ಧರಾಗಿದ್ದರು. ಅವರ ಸಾರ್ವಜನಿಕ ಹೇಳಿಕೆಗಳು ಆಗಾಗ್ಗೆ ಈ ಹೊಂದಾಣಿಕೆಯನ್ನು ಪ್ರತಿಧ್ವನಿಸುತ್ತವೆ. ಉದಾಹರಣೆಗೆ, ವಾಜಪೇಯಿ ಅವರು ಪ್ರಧಾನಿಯಾಗಿದ್ದ ಅವಧಿಯಲ್ಲಿ ರಾಜಧರ್ಮ (ನೈತಿಕ ಆಡಳಿತ) ಅಗತ್ಯವನ್ನು ಒತ್ತಿ ಹೇಳಿದಾಗ, ಸಾರ್ವಜನಿಕ ಜೀವನದಲ್ಲಿ ಪಾರದರ್ಶಕತೆ ಮತ್ತು ಉತ್ತರದಾಯಿತ್ವಕ್ಕಾಗಿ ತಮ್ಮ ಪ್ರತಿಪಾದನೆಯ ಮೂಲಕ ಅಡ್ವಾಣಿ ಅದೇ ಭಾವನೆಯನ್ನು ಪ್ರತಿಧ್ವನಿಸಿದರು.

ಅಯೋಧ್ಯಾ ಚಳವಳಿಯಂತಹ ಸವಾಲಿನ ಸಮಯಗಳಲ್ಲಿಯೂ ಸಹ, ಅವರ ಹೇಳಿಕೆಗಳು ಗೆರೆ ಕೊಯ್ದಂತೆ ನಿರ್ಣಯದ ವಿಧಾನವನ್ನು ಬಹಿರಂಗಪಡಿಸಿದವು. ವಾಜಪೇಯಿ ಆಗಾಗ್ಗೆ ಸಂಯಮ ಮತ್ತು ಸಂವಾದಕ್ಕೆ ಮನವಿ ಮಾಡಿದರು, ಆದರೆ ಅಡ್ವಾಣಿ ತಳಮಟ್ಟದ ಕಾರ್ಯಕರ್ತರ ಆಕಾಂಕ್ಷೆಗಳಿಗೆ ಧ್ವನಿಯಾದರು. ಅವರ ವಿಭಿನ್ನ ಸ್ವರಗಳ ಹೊರತಾಗಿಯೂ, ಪ್ರಜಾಪ್ರಭುತ್ವದ ತತ್ವಗಳನ್ನು ಪೋಷಿಸುವಾಗ ಸಾಂಸ್ಕೃತಿಕ ಪರಂಪರೆಯನ್ನು ಸಂರಕ್ಷಿಸುವ ಆಧಾರವಾಗಿರುವ ಸಂದೇಶವು ಸ್ಥಿರವಾಗಿ ಉಳಿಯಿತು.

**ಪರಸ್ಪರ ಗೌರವ ಮತ್ತು ಸಮನ್ವಯ :** ವಾಜಪೇಯಿ ಮತ್ತು ಅಡ್ವಾಣಿ ಅವರ ನಡುವಿನ ವೈಯಕ್ತಿಕ ಒಡನಾಟವು ಅವರ ಹೊಂದಾಣಿಕೆಯ ಸಂದೇಶಗಳಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸಿದೆ. ಅಡ್ವಾಣಿ ಅವರು ಸಾಮಾನ್ಯವಾಗಿ ವಾಜಪೇಯಿ ಅವರನ್ನು ಬಿಜೆಪಿಯ ನಾಯಕ ಎಂದು ಉಲ್ಲೇಖಿಸುತ್ತಾರೆ, ಅಸಾಧಾರಣ ಮಟ್ಟದ ಗೌರವ ಮತ್ತು ಪರಸ್ಪರ ಗೌರವವನ್ನು ಪ್ರದರ್ಶಿಸಿದರು. ಈ ಗೌರವವು ಪಕ್ಷದೊಳಗಿನ ಅವರ ಪಾತ್ರಗಳು ಮತ್ತು ಅವರ ಸಂವಹನ ಕಾರ್ಯತಂತ್ರಗಳ ತಡೆರಹಿತ ತಿಳುವಳಿಕೆಗೆ ಅನುವಾದಿಸಿತು.

**ಸಂವಹನದ ಪಾಂಡಿತ್ಯ :** ಇಬ್ಬರೂ ನಾಯಕರು ನುರಿತ ಸಂವಹನಕಾರರಾಗಿದ್ದರು, ಅವರ ಸಂದೇಶಗಳನ್ನು ತಮ್ಮ ಪ್ರೇಕ್ಷಕರಿಗೆ ಸರಿಹೊಂದುವಂತೆ ವಿನ್ಯಾಸಗೊಳಿಸಿಕೊಂಡಿದ್ದರು. ವಾಜಪೇಯಿಯವರ ಕಾವ್ಯದ ಮೋಡಿ ಜನಸಾಮಾನ್ಯರು ಮತ್ತು ಬುದ್ಧಿಜೀವಿಗಳನ್ನು ಸಮಾನವಾಗಿ ಪ್ರತಿಧ್ವನಿಸಿತು, ಆದರೆ ಅಡ್ವಾಣಿಯವರ ನೇರವಾದ ಶೈಲಿಯು ಪಕ್ಷದ ಕಾರ್ಯಕರ್ತರು ಮತ್ತು ರಾಜಕೀಯ ವರ್ಗವನ್ನು ಆಕರ್ಷಿಸಿತು.

1999 ರಲ್ಲಿ ಕಾರ್ಗಿಲ್ ಯುದ್ಧದ ಸಮಯದಲ್ಲಿ, ವಾಜಪೇಯಿ ಅವರ ಭಾಷಣಗಳು ರಾಷ್ಟ್ರೀಯ ಏಕತೆ ಮತ್ತು ಭಾರತೀಯ ಸೈನಿಕರ ಶೌರ್ಯವನ್ನು ಒತ್ತಿ ಹೇಳಿದವು, ದೇಶಾದ್ಯಂತ ದೇಶಭಕ್ತಿಯನ್ನು ಕೆರಳಿಸಿತು. ಅದೇ ಕಾಲದಲ್ಲಿ, ಅಡ್ವಾಣಿಯವರ ಹೇಳಿಕೆಗಳು ಆಂತರಿಕ ಭದ್ರತೆ ಮತ್ತು ಕಾರ್ಯತಂತ್ರದ ನೀತಿಗಳನ್ನು ಬಲಪಡಿಸುವುದರ ಮೇಲೆ ಕೇಂದ್ರೀಕರಿಸಿದವು, ಸರ್ಕಾರದ ಸಂಕಲ್ಪವನ್ನು ಬಲಪಡಿಸಿದವು.

**ನಾಯಕತ್ವದ ಪರಂಪರೆ :** ವಾಜಪೇಯಿ ಮತ್ತು ಅಡ್ವಾಣಿಯವರ ಹೇಳಿಕೆಗಳ ಪೂರಕತೆ ಅವರ ಸ್ನೇಹಕ್ಕೆ ಸಾಕ್ಷಿಯಾಗಿದೆ; ಇದು ದೂರದೃಷ್ಟಿಯ ನಾಯಕತ್ವದ ಲಕ್ಷಣವಾಗಿತ್ತು. ಅವರಿಬ್ಬರು ರಾಜಕೀಯ ಹಿನ್ನಡೆಗಳನ್ನು ಎದುರಿಸಿದಾಗಲೂ ಸಹ, ಆತ್ಮವಿಶ್ವಾಸವನ್ನು ಪ್ರೇರೇಪಿಸುವ ಮತ್ತು ನೀಡುವ ಸಂದೇಶದಲ್ಲಿ ಸುಸಂಬದ್ಧತೆಯನ್ನು ಕಾಪಾಡಿಕೊಳ್ಳುವ ಸಾಮರ್ಥ್ಯವು ಪಕ್ಷದ ಸಂಘಟನೆಯ ಶಕ್ತಿ ಹೆಚ್ಚಳಕ್ಕೆ ಹಾಗೂ ಕಾರ್ಯಕರ್ತರ ಆತ್ಮವಿಶ್ವಾಸ ಹೆಚ್ಚಲು ಕಾರಣವಾಯಿತು. ''ಕಾಫಿ ಸೂರಜ್ ಉಗಾ ಚುಕಾ ಹೈ, ಕಾಫಿ ಸೂರಜ್ ದಬ್ ಚುಕಾ ಹೈ'' (ಅನೇಕ ಬಾರಿ ಸೂರ್ಯ ಉದಯಿಸಿದ್ದಾನೆ ಮತ್ತು ಅಸ್ತಮಿಸಿದ್ದಾನೆ) ಎಂದು ವ್ಯಾಖ್ಯಾನಿಸಿದ್ದಾರೆ.

ಭಾರತದ ರಾಜಕೀಯಕ್ಕೆ ದೃಷ್ಟಿ ಮತ್ತು ದೃಷ್ಟಿಕೋನವನ್ನು ನೀಡಿದ ಅಟಲ್‌ಜೀ ಸಂದೇಶ ಮತ್ತು ಅಡ್ವಾಣಿ ಅವರೊಂದಿಗಿನ ಅವರ ಸಮನ್ವಯದ ಹೆಜ್ಜೆಗಳು ಪ್ರತೀ ಕಾರ್ಯಕರ್ತನಿಗೂ ನಿರಂತರ ಪ್ರೇರಣೆಯ.




# ವಕ್ಫ್ ಮಂಡಳಿ ಭೂ ಕಬಳಿಕೆ ನೀತಿ ವಿರುದ್ಧ ಬಿಜೆಪಿ ಸಮರ

**ರಾಜ್ಯದಲ್ಲಿನ ವಕ್ಫ್ ವಸ್ತುಸ್ಥಿತಿ ಅರಿತು ರೈತರ ಪರವಾಗಿ ನಿಲ್ಲಲು ಬಿಜೆಪಿ ಮೂರು ತಂಡಗಳನ್ನು ರಚಿಸಿಕೊಂಡು ರಾಜ್ಯಾದ್ಯಂತ ಪ್ರವಾಸ ಆರಂಭಿಸಿದೆ. ಪ್ರವಾಸದ ಸಂದರ್ಭದಲ್ಲಿ ರೈತರ ಸಮಸ್ಯೆಯನ್ನು ಆಲಿಸಿ, ಸ್ವತಃ ರೈತರ ಸ್ಥಳಗಳಿಗೆ ಭೇಟಿ ನೀಡಿ ಅವರಿಗಾದ ಸಮಸ್ಯೆಯನ್ನು ಅರಿತು, ಸಂತೈಸುವುದು ಮತ್ತು ಸಭೆಗಳನ್ನು ಮಾಡಿ ರೈತರಿಗೆ ಅರಿವು ಮೂಡಿಸುವುದು ಹಾಗೂ ಸರ್ಕಾರದ ವಿರುದ್ಧ ಪ್ರತಿಭಟನಾ ಸಭೆ ಮತ್ತು ಹೋರಾಟವನ್ನು ಈ ತಂಡ ಮಾಡುತ್ತಿದೆ.**

**ಮಹೇಶ್ ಹೆಗಡೆ**
ಬಿಜೆಪಿ ಕಾರ್ಯಕರ್ತರು

ರಾಜ್ಯದಲ್ಲಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಬಂದಾಗಿನಂದ ಮುಸ್ಲಿಂ ಓಲೈಕೆ ರಾಜಕಾರಣ ಹೆಚ್ಚಾಗಿದ್ದು, ಅದರ ಭಾಗವಾಗಿ ಈಗ ವಕ್ಫ್ ಮಂಡಳಿಯ ಲ್ಯಾಂಡ್ ಜಿಹಾದ್ ಎಂದೇ ಹೇಳಬಹುದಾದ, ಸಾಮಾನ್ಯ ರೈತರ, ಹಿಂದೂ ಧಾರ್ಮಿಕ ಕೇಂದ್ರಗಳ ಜಾಗವನ್ನು ನುಂಗುವ ಕಾರ್ಯ ಯಾವುದೇ ನೀತಿ ನಿಯಮವಿಲ್ಲದೆ ನಡೆಯಲಾರಂಭಿಸಿದೆ. ರಾಜ್ಯದ ಸಾಮಾನ್ಯ ಬಡ ರೈತನ ಜಮೀನಿಗೆ ಕಂಟಕವಾಗಿರುವ ವಕ್ಫ್ ಮಂಡಳಿ, ನೋಟಿಸ್ ನೀಡಿ ಬೆದರಿಸುತ್ತಿದೆ ಎಂದರೂ ತಪ್ಪಾಗಲಾರದು.

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಬಂದಾಗಿನಿಂದ ಒಂದಲ್ಲಾ ಒಂದು ರೀತಿಯ ಹಗರಣ, ಜನಸಾಮಾನ್ಯರಿಗೆ ಕಷ್ಟ ನೀಡುವುದರಲ್ಲೇ ಕಳೆದಿದ್ದು, ಈ ಅಸಮರ್ಥ ಸರ್ಕಾರದ ವಿರುದ್ಧ ಬಿಜೆಪಿ ಸಮರ್ಥ ಹೋರಾಟವನ್ನು ರೂಪಿಸುತ್ತಿದೆ. ಅದರಲ್ಲೂ ರಾಜ್ಯದ ರೈತರ ಹಿತ ಕಾಪಾಡಲು ಬದ್ಧವಾಗಿರುವ ಬಿಜೆಪಿ, ವಕ್ಫ್ ಮಂಡಳಿಯ ಭೂ ಕಬಳಿಕೆ ನೀತಿಯಿಂದ ರೈತರಿಗೆ ತೊಂದರೆ ಆಗುತ್ತಿರುವುದನ್ನು ವಿರೋಧಿಸಿ ಬೃಹತ್ ಹೋರಾಟವನ್ನು ಆರಂಭಿಸಿದೆ. ಈಗಾಗಲೇ ರಾಜ್ಯದಿಂದ



# ‘ನಮ್ಮ ಭೂಮಿ-ನಮ್ಮ ಹಕ್ಕು’ ಜಾಗೃತಿ ಹೋರಾಟ ಆರಂಭ

ಹಿಡಿದು ಮಂಡಲ ಮಟ್ಟದವರೆಗೆ ಎರಡು ಹಂತದಲ್ಲಿ ಹೋರಾಟ ಮಾಡಲಾಗಿದ್ದು, ಸರ್ಕಾರಕ್ಕೆ ಬಿಸಿ ಮುಟ್ಟಿದೆ. ಮುಂದುವರೆದು ಮೂರನೇ ಹಂತದಲ್ಲಿ ಹಿರಿಯ ನಾಯಕರು, ಶಾಸಕರು, ಮಾಜಿ ಶಾಸಕರು, ವಿಧಾನ ಪರಿಷತ್ ಸದಸ್ಯರನ್ನೊಳಗೊಂಡ ತಂಡವನ್ನು ರಚಿಸಿ ರಾಜ್ಯದ ಮೂರು ದಿಕ್ಕಿನಿಂದ ಪ್ರವಾಸ ಆರಂಭಿಸಿ ರಾಜ್ಯಾದ್ಯಂತ ಮೂರನೇ ಹಂತದ ಹೋರಾಟವನ್ನು ರೂಪಿಸಿದೆ.

**ಮೂರು ತಂಡಗಳ ರಚನೆ, ಪ್ರವಾಸ ಆರಂಭ:** ರಾಜ್ಯದಲ್ಲಿನ ವಕ್ಫ್ ವಸ್ತುಸ್ಥಿತಿ ಅರಿತು ರೈತರ ಪರವಾಗಿ ನಿಲ್ಲಲು ಬಿಜೆಪಿ ಮೂರು ತಂಡಗಳನ್ನು ರಚಿಸಿಕೊಂಡು ರಾಜ್ಯಾದ್ಯಂತ ಪ್ರವಾಸ ಆರಂಭಿಸಿದೆ. ಪ್ರವಾಸದ ಸಂದರ್ಭದಲ್ಲಿ ರೈತರ ಸಮಸ್ಯೆಯನ್ನು ಆಲಿಸಿ, ಸ್ವತಃ ರೈತರ ಸ್ಥಳಗಳಿಗೆ ಭೇಟಿ ನೀಡಿ ಅವರಿಗಾದ ಸಮಸ್ಯೆಯನ್ನು ಅರಿತು, ಸಂತೈಸುವುದು ಮತ್ತು ಸಭೆಗಳನ್ನು ಮಾಡಿ ರೈತರಿಗೆ ಅರಿವು ಮೂಡಿಸುವುದು ಹಾಗೂ ಸರ್ಕಾರದ ವಿರುದ್ಧ ಪ್ರತಿಭಟನಾ ಸಭೆ ಮತ್ತು ಹೋರಾಟವನ್ನು ಈ ತಂಡ ಮಾಡುತ್ತಿದೆ. ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ, ವಿರೋಧ ಪಕ್ಷದ ನಾಯಕರಾದ ಶ್ರೀ ಆರ್. ಅಶೋಕ, ವಿಧಾನಪರಿಷತ್ ವಿರೋಧ ಪಕ್ಷದ ನಾಯಕರಾದ ಶ್ರೀ ಛಲವಾದಿ ನಾರಾಯಣ ಸ್ವಾಮಿ ನೇತೃತ್ವದಲ್ಲಿ ಮೂರು ತಂಡ ರಚನೆಯಾಗಿದ್ದು ಇವರೊಂದಿಗೆ ಸಂಚಾಲಕರು ಮತ್ತು ಸಂಯೋಜಕರು ಸೇರಿ ಶಾಸಕರು, ಪ್ರಮುಖ ನಾಯಕರು ತಂಡದಲ್ಲಿದ್ದಾರೆ. ಮೂರು ತಂಡಗಳೂ ಪ್ರತ್ಯೇಕವಾಗಿ ರಾಜ್ಯದ ಎಲ್ಲಾ ಜಿಲ್ಲೆಗಳನ್ನು ಪ್ರವಾಸ ಮಾಡಲಿದ್ದಾರೆ.

### ಶರಣ ಭೂಮಿ ಬಿದರ್, ಗಂಡು ಮೆಟ್ಟಿದನಾಡು ಹುಬ್ಬಳ್ಳಿ, ಸಾಂಸ್ಕೃತಿಕ ನಗರಿ ಮೈಸೂರಿನಿಂದ ನಮ್ಮ ಭೂಮಿ-ನಮ್ಮ ಹಕ್ಕು ಆಂದೋಲ ಆರಂಭ

ಮೂರು ತಂಡಗಳು ಈಗಾಗಲೇ ಪ್ರವಾಸ ಆರಂಭಿಸಿದ್ದು, ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ ನೇತೃತ್ವದ ತಂಡ ಬಿದರ್ ನಿಂದ, ಶ್ರೀ ಛಲವಾದಿ ನಾರಾಯಣಸ್ವಾಮಿ ಅವರ ತಂಡ ಹುಬ್ಬಳ್ಳಿಯಿಂದ, ಶ್ರೀ ಆರ್ ಅಶೋಕ್ ನೇತೃತ್ವದ ತಂಡ ಮೈಸೂರಿನಿಂದ ಪ್ರವಾಸ ಆರಂಭಸಿ ರೈತರೊಂದಿಗೆ ನಾವಿದ್ದೇವೆ ಎನ್ನುವ ಭರವಸೆಯೊಂದಿಗೆ, ಜನಪರ ಧ್ವನಿಯಾಗಿದ್ದಲ್ಲದೆ, ಕಾಂಗ್ರೆಸ್ ಸರ್ಕಾರದ ವಕ್ಫ್ ನೀತಿಯ ವಿರುದ್ಧ ರಣಕಹಳೆ ಮೊಳಗಿಸಿದ್ದಾರೆ.

## ತಂಡದ ವಿವರಗಳು

**ತಂಡ-1:** ಶ್ರೀ ಬಿ.ವೈ. ವಿಜಯೇಂದ್ರ, ಶ್ರೀ ಪ್ರಹ್ಲಾದ ಜೋಶಿ, ಶ್ರೀ ಜಗದೀಶ್ ಶೆಟ್ಟರ್, ಶ್ರೀ ಗೋವಿಂದ ಕಾರಜೋಳ, ಶ್ರೀ ಭಗವಂತ ಖೂಬಾ, ಡಾ. ಸಿ.ಎನ್. ಅಶ್ವತ್ಥನಾರಾಯಣ, ಶ್ರೀ ಮುರುಗೇಶ್ ನಿರಾಣಿ, ಶ್ರೀ ಜನಾರ್ಧನ ರೆಡ್ಡಿ, ಶ್ರೀ ಬಿ. ಶ್ರೀರಾಮುಲು, ಶ್ರೀ ರಮೇಶ್ ಜಾರಕಿಹೊಳಿ, ಶ್ರೀ ಭೈರತಿ ಬಸವರಾಜ್, ಶ್ರೀ ಈರಣ್ಣ ಕಡಾಡಿ, ಶ್ರೀ ಎಂ.ಪಿ. ರೇಣುಕಾಚಾರ್ಯ, ಶ್ರೀ ಸುನೀಲ್ ವಲ್ಯಾಪುರೆ, ಶ್ರೀ ಎಂ. ರುದ್ರೇಶ್, ಶ್ರೀ ಎಂ.ಬಿ. ಜಿರಲಿ, ವಕೀಲರು ಇದ್ದು, ಶ್ರೀ ಪಿ. ರಾಜೀವ್ ಸಂಚಾಲಕರಾಗಿ, ಶ್ರೀ ಅರುಣ್ ಶಹಾಪುರ, ಡಾ. ಶೈಲೇಂದ್ರ ಬೆಲ್ದಾಳೆ, ಶ್ರೀ ಶರಣು ತಳ್ಳಿಕೇರಿ ಸಂಯೋಜಕರಾಗಿದ್ದಾರೆ. ಇನ್ನೂ ಈ ತಂಡ ಬೀದರ, ಕಲಬುರಗಿ, ಯಾದಗಿರಿ, ರಾಯಚೂರು, ಕೊಪ್ಪಳ, ಗದಗ, ವಿಜಯಪುರ, ಬಾಗಲಕೋಟೆ ಜಿಲ್ಲೆಯ ಭಾಗಗಳಲ್ಲಿ ಪ್ರವಾಸ ಮಾಡಿ ಹೋರಾಟ ಮಾಡಲಿದ್ದಾರೆ.

**ತಂಡ-2:** ಶ್ರೀ ಆರ್. ಅಶೋಕ್, ಶ್ರೀ ಬಸವರಾಜ ಬೊಮ್ಮಾಯಿ, ಕು. ಶೋಭಾ ಕರಂದ್ಲಾಜೆ, ಶ್ರೀ ಬಸನಗೌಡ ಪಾಟೀಲ್ ಯತ್ನಾಳ, ಶ್ರೀ ಎ. ನಾರಾಯಣಸ್ವಾಮಿ, ಶ್ರೀ ರಾಜೂಗೌಡ, ಡಾ. ಕೆ. ಸುಧಾಕರ್, ಶ್ರೀ ದೊಡ್ಡನಗೌಡ ಪಾಟೀಲ್, ಶ್ರೀ ಎನ್. ರವಿಕುಮಾರ್, ಶ್ರೀಮತಿ ಭಾರತಿ ಶೆಟ್ಟಿ, ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಡಾ. ಬಿ.ಸಿ. ನವೀನ್ ಕುಮಾರ್, ಶ್ರೀ ವಸಂತಕುಮಾರ್, ವಕೀಲರು ಇದ್ದು, ಶ್ರೀ ಜೆ. ಪ್ರೀತಂ ಗೌಡ ಸಂಚಾಲಕರಾಗಿ, ಶ್ರೀ ವಿನಯ್ ಬಿದರೆ, ಶ್ರೀ ಡಿ.ಎಸ್. ಅರುಣ್, ಶ್ರೀ ಹರೀಶ್ ಪೂಂಜಾ, ಶ್ರೀಮತಿ ಲಕ್ಷ್ಮೀ ಅಶ್ವಿನ್ ಗೌಡ, ಸಂಯೋಜಕರಾಗಿರಲಿದ್ದಾರೆ. ಇನ್ನೂ ಈ ತಂಡ ಚಾಮರಾಜನಗರ, ಮೈಸೂರು ನಗರ, ಮೈಸೂರು ಗ್ರಾಮಾಂತರ, ಮಂಡ್ಯ, ಹಾಸನ, ಕೊಡಗು, ಶ್ರೀ ಹಾಲಪ್ಪಾಚಾರ್, ಶ್ರೀ ಎನ್. ಮಹೇಶ್, ದಕ್ಷಿಣ ಕನ್ನಡ, ಚಿಕ್ಕಮಗಳೂರು, ಶಿವಮೊಗ್ಗ, ಉಡುಪಿ, ಉತ್ತರಕನ್ನಡ ಜಿಲ್ಲೆಯ ಭಾಗಗಳಲ್ಲಿಪ್ರವಾಸ ಮಾಡಿ ಹೋರಾಟ ಮಾಡುತ್ತಿದ್ದಾರೆ.

**ತಂಡ-3:** ಶ್ರೀ ಛಲವಾದಿ ನಾರಾಯಣಸ್ವಾಮಿ, ಶ್ರೀ ಡಿ.ವಿ. ಸದಾನಂದಗೌಡ, ಶ್ರೀ ವಿ. ಸೋಮಣ್ಣ, ಡಾ. ಸಿ.ಟಿ. ರವಿ, ಶ್ರೀ ನಳೀನ್ ಕುಮಾರ್ ಕಟೀಲ್, ಶ್ರೀ ಅರವಿಂದ ಬೆಲ್ಲದ್, ಶ್ರೀ ಅರವಿಂದ ಲಿಂಬಾವಳಿ, ಶ್ರೀ ಎಸ್. ಮುನಿಸ್ವಾಮಿ, ಶ್ರೀ ಅರಗ ಜ್ಞಾನೇಂದ್ರ, ಶ್ರೀ ಎಸ್.ಆರ್. ವಿಶ್ವನಾಥ, ಶ್ರೀ ಬಿ.ಸಿ. ಪಾಟೀಲ್, ಶ್ರೀ ವೈ.ಎ. ನಾರಾಯಣಸ್ವಾಮಿ, ಶ್ರೀ ಕಲ್ಮರುಡಪ್ಪ, ಶ್ರೀ ವಿವೇಕ್ ಸುಬ್ಬಾರೆಡ್ಡಿ, ವಕೀಲರು ಇದ್ದು, ಸಂಚಾಲಕರಾಗಿ ಶ್ರೀ ವಿ. ಸುನೀಲ್ ಕುಮಾರ್, ಸಂಯೋಜಕರಾಗಿ ಶ್ರೀ ಅಶ್ವಥ್‌ನಾರಾಯಣ, ಶ್ರೀ ತಮ್ಮೇಶ್‌ಗೌಡ, ಶ್ರೀಮತಿ ಅಂಬಿಕಾ ಹುಲಿಯಾ ನಾಯ್ಕ ಇರಲಿದ್ದಾರೆ. ಇನ್ನೂ ರಾಮನಗರ, ಬೆಂಗಳೂರು ಗ್ರಾಮಾಂತರ, ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ಮಧುಗಿರಿ, ಚಿತ್ರದುರ್ಗ, ದಾವಣಗೆರೆ, ಹುಬ್ಬಳ್ಳಿ ಧಾರವಾಡ, ಬೆಂಗಳೂರು, ಬಳ್ಳಾರಿ, ವಿಜಯನಗರ ಜಿಲ್ಲೆಯ ಭಾಗಗಳಲ್ಲಿ ಪ್ರವಾಸ ಮಾಡಿ ಹೋರಾಟ ಮಾಡುತ್ತಿದ್ದಾರೆ.

**ಬೀದರ್:** ನಮ್ಮ ಭೂಮಿ-ನಮ್ಮ ಹಕ್ಕು ಅಂದೋಲನ ಭಾಗವಾಗಿ ಬೀದರ್‌ನಲ್ಲಿ ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ ರವರ ನೇತೃತ್ವದಲ್ಲಿ ಪ್ರವಾಸ ಆರಂಭಿಸಿ, ಸರ್ಕಾರದ ವಿರುದ್ಧ ಬೃಹತ್ ಪ್ರತಿಭಟನೆ ನಡೆಸಲಾಯಿತು. ರೈತರಿಗೆ ವಕ್ಫ್ ಭೂ ಕಬಳಿಕೆ ನೀತಿಯಿಂದ ಆಗುತ್ತಿರುವ ಸಮಸ್ಯೆಯನ್ನು ಆಲಿಸಿ, ಧೈರ್ಯ ತುಂಬಲಾಯಿತು. ನಂತರ ಸಾವಿರಾರು ರೈತರ ಸಹಭಾಗಿತ್ವದಲ್ಲಿ ಆಂದೋಲನಕ್ಕೆ ಚಾಲನೆ ಮತ್ತು ಸರ್ಕಾರದ ವಿರುದ್ಧ ಬೃಹತ್ ಪ್ರತಿಭಟನೆ ನಡೆಸಲಾಯಿತು.




ಈ ಸಂದರ್ಭದಲ್ಲಿ ರಾಜ್ಯಾಧ್ಯಕ್ಷರಾದ ಶ್ರೀ ವಿಜಯೇಂದ್ರ ಅವರು ಮಾತನಾಡಿ, ವಕ್ಫ್ ವಿಷಯವನ್ನು ಮುಂದಿಟ್ಟು ರೈತರನ್ನು ಬೀದಿಗೆ ತರಲು ರಾಜ್ಯ ಸರ್ಕಾರ ಕುಮ್ಮಕ್ಕು ಕೊಡುತ್ತಿದೆ ಎಂದು ಆಕ್ಷೇಪ ವ್ಯಕ್ತಪಡಿಸಿದರು. ವಕ್ಫ್ ಮೂಲಕ ರೈತರ, ಮಠ, ಮಂದಿರಗಳ ಜಾಗ ಒತ್ತುವರಿಯ ವಿರುದ್ಧ ಬಿಜೆಪಿ ನಿರಂತರ ಹೋರಾಟ ಮಾಡಿದೆ. ಪ್ರಧಾನಿ ಶ್ರೀ ನರೇಂದ್ರ ಮೋದಿ ಅವರು ವಕ್ಫ್ ವಿಷಯದಲ್ಲಿ ದೇಶದ ಯಾವುದೇ ರೈತರಿಗೆ ಅನ್ಯಾಯ ಆಗಬಾರದು; ವಕ್ಫ್ ಕಾಯಿದೆಗೆ ಸಮಗ್ರ ತಿದ್ದುಪಡಿ ಆಗಬೇಕೆಂಬ ಉದ್ದೇಶ ಹೊಂದಿದ್ದಾರೆ. ಅವರ ಆದೇಶದಂತೆ ಸಂಸತ್ತಿನ ಸಮಿತಿ ರಚಿಸಲಾಗಿದೆ. ಯಾರು ಬೇಕಾದರೂ ವಕ್ಫ್ ವಿಚಾರದಲ್ಲಿ ತೆರಳಿ ಅಹವಾಲು ಸಲ್ಲಿಸಬಹುದು ಎಂದು ಹೇಳಿದ್ದಾರೆ. ಭ್ರಷ್ಟ ರೈತ ವಿರೋಧಿ ಕಾಂಗ್ರೆಸ್ ಸರ್ಕಾರದ ವಿರುದ್ಧ ಬಿಜೆಪಿ ನಿರಂತರ ಹೋರಾಟ ಮಾಡುತ್ತ ಬಂದಿದ್ದು, ಜನರಿಗೆ ನ್ಯಾಯ ಕೊಡಲು ಮುಂದಾಗಿದ್ದೇವೆ ಎಂದು ಹೇಳಿದರು. ಸಚಿವ ಶ್ರೀ ಜಮೀರ್ ಅಹ್ಮದ್ ಖಾನ್ ಅವರು ಮುಖ್ಯಮಂತ್ರಿ ಆದೇಶದ ಮೇರೆಗೆ ರೈತರ ಜಮೀನಿನ ಹೆಸರನ್ನು ವಕ್ಫ್ ಎಂದು ಮಾಡಲು ಸೂಚಿಸಿದ್ದರು ಎಂದು ವಿವರಿಸಿದರಲ್ಲದೆ, ಯಾತಕ್ಕೋಸ್ಕರ ನಿಮಗೆ ರೈತರು, ಹಿಂದೂಗಳ ಮೇಲೆ ಸಿಟ್ಟು ಸಿದ್ದರಾಮಯ್ಯನವರೇ ಎಂದು ಪ್ರಶ್ನಿಸಿದರು. ಸಾವಿರಾರು ವರ್ಷಗಳ ಇತಿಹಾಸ ಇರುವ ದೇವಾಲಯಕ್ಕೂ ಇಂಥ ನೋಟಿಸ್ ಬಂದಿದೆ. ಗ್ರಾಮಕ್ಕೆ ಗ್ರಾಮವನ್ನೇ ಒಕ್ಕಲೆಬ್ಬಿಸುವ

ಕೆಲಸ ಮಾಡುತ್ತಿದ್ದಾರೆ ಎಂದು ಟೀಕಿಸಿದರು. ತಲೆತಲಾಂತರದಿಂದ ವ್ಯವಸಾಯ ಮಾಡುವ ರೈತರಿಗೆ ತೊಂದರೆ ಕೊಡುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ದೇಶದ ಜನರು, ರಾಜ್ಯದ ಜನತೆಗೆ ತುತ್ತು ಅನ್ನ ಕೊಡುವ ರೈತರು ಬೀದಿಗೆ ಬರುವಂತೆ ಕಾಂಗ್ರೆಸ್ ಸರ್ಕಾರ ಮಾಡುತ್ತಿದೆ. ಅಲ್ಪಸಂಖ್ಯಾತರ ಮುಖ್ಯಮಂತ್ರಿ ಎಂಬಂತೆ ಸಿದ್ದರಾಮಯ್ಯನವರು ವರ್ತಿಸುತ್ತಿದ್ದು, ಇವರಿಗೆ ತಕ್ಕ ಉತ್ತರ ಕೊಡಲು ಮಾಜಿ ಮುಖ್ಯಮಂತ್ರಿ ಶ್ರೀ ಬಿ.ಎಸ್. ಯಡಿಯೂರಪ್ಪ ಅವರು ಸೂಚಿಸಿದರು. ನಮ್ಮೆಲ್ಲ ನಾಯಕರು ರಾಜ್ಯಾದ್ಯಂತ ಹೋರಾಟಕ್ಕೆ ಮುಂದಾಗಿದ್ದೇವೆ ಎಂದು ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ ರವರು ತಿಳಿಸಿದರು. ರೈತರು ವಕ್ಫ್ ಕಾಯ್ದೆಯಿಂದ ಆತಂಕ ಪಡಬೇಕಿಲ್ಲ ಬಿಜೆಪಿ ನಿಮ್ಮ ಪರವಾಗಿದೆ ಎಂದು ತಿಳಿಸಿದರು.

ತಂಡಲ್ಲಿರುವ ಶಾಸಕರು, ಪ್ರಮುಖ ನಾಯಕರೆಲ್ಲರೂ ಮಾತನಾಡಿ ಸರ್ಕಾರದ ವಿರುದ್ಧ ಹರಿಹಾಯ್ದರು. ವಕ್ಫ್ ಭೂ ಕಬಳಿಕೆ ನೀತಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ, ಇದಕ್ಕೆ ಕಾಂಗ್ರೆಸ್ ಸರ್ಕಾರಗಳೇ ಕಾರಣ. ಇದರಿಂದ ರಾಜ್ಯದ ರೈತರಿಗೆ ಅನ್ಯಾಯವಾಗುತ್ತಿದೆ. ಯಾವುದೇ ಕಾರಣಕ್ಕೂ ರೈತರಿಗೆ ಅನ್ಯಾಯವಾಗಲು ಬಿಡುವುದಿಲ್ಲ ಎಂದು ಭರವಸೆಯ ಮಾತುಗಳನ್ನಾಡಿದರು. ಕಾರ್ಯಕ್ರಮದಲ್ಲಿ ಕೇಂದ್ರ ಮಾಜಿ ಸಚಿವ ಶ್ರೀ ಭಗವಂತ ಖೂಬಾ, ಮಾಜಿ ಉಪ ಮುಖ್ಯಮಂತ್ರಿ ಡಾ. ಅಶ್ವತ್ಥನಾರಾಯಣ್, ಮಾಜಿ ಸಚಿವರಾದ ಶ್ರೀ ಬಿ. ಶ್ರೀರಾಮುಲು, ಶ್ರೀ ಮುರುಗೇಶ್ ನಿರಾಣಿ, ಶ್ರೀ ಬೈರತಿ ಬಸವರಾಜ್, ಶ್ರೀ ಪ್ರಭು ಚೌಹಾಣ್, ಶ್ರೀ ರೇಣುಕಾಚಾರ್ಯ, ರಾಜ್ಯ ಪ್ರಧಾನ ಕಾರ್ಯದರ್ಶಿ ಶ್ರೀ ಪಿ. ರಾಜೀವ್, ಶಾಸಕರಾದ ಶ್ರೀ ಶೈಲೇಂದ್ರ ಬೆಲ್ದಾಳೆ, ಶ್ರೀ ಶರಣು ಪಾಟೀಲ, ಶ್ರೀ ಬಸವರಾಜ ಮತ್ತಿಮೊಡ, ಶ್ರೀ ಶಶೀಲ್ ನಮೋಶಿ, ಹಿರಿಯರಾದ ಶ್ರೀ ರಘುನಾಥ ಮಲ್ಕಾಪುರೆ, ಜಿಲ್ಲಾಧ್ಯಕ್ಷ ಶ್ರೀ ಸೋಮನಾಥ ಪಾಟೀಲ್, ರೈತ ಮೋರ್ಚಾದ ಮುಖಂಡ ಶ್ರೀ ರುದ್ರೇಶ್ ಮತ್ತಿತರ ಪ್ರಮುಖರು ಉಪಸ್ಥಿತರಿದ್ದರು.

ಇದೇ ತಂಡ ಕಲಬುರ್ಗಿಯಲ್ಲಿ ಪ್ರವಾಸ ಮುಂದುವರೆಸಿ ರೈತರ ಸಮಸ್ಯೆಯನ್ನು ಆಲಿಸಿ, ಸಭೆಗಳನ್ನು ಮಾಡಿ ಸರ್ಕಾರದ ವಿರುದ್ಧ ಪ್ರತಿಭಟನೆ ನಡೆಸಿದರು. ರೈತರ ಭೂಮಿಯಾಗಲಿ, ಮಠ-ಮಾನ್ಯಗಳ ಭೂಮಿಯಾಗಲಿ, ಧಾರ್ಮಿಕ ಕೇಂದ್ರಗಳ ಆಸ್ತಿಯಾಗಲಿ ಒಂದಿಂಚು ಜಾಗವನ್ನು ವಕ್ಫ್ ಗೆ ಹೋಗಲು ಬಿಡುವುದಿಲ್ಲ ಎಂದು ಹೇಳಿದರು.

ಮುಂದುವರೆದು ಯಾದಿಗಿರಿ ಜಿಲ್ಲೆಯಲ್ಲಿ ಪ್ರವಾಸ ಮುಂದುವರೆಸಿರುವ ತಂಡ, ಶಹಾಪುರದಲ್ಲಿ ಪ್ರತಿಭಟನಾ ಹೋರಾಟ ನಡೆಸಿದರು, ಈ ಸಂದರ್ಭದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರರವರು, ಬಿಜೆಪಿಯ ಎಲ್ಲ ಮುಖಂಡರು ಇಂದು ರಾಜ್ಯಾದ್ಯಂತ ರೈತರ ಪರ ಹೋರಾಟ ಮಾಡುತ್ತಿದ್ದೇವೆ. ಅಧಿಕಾರಕ್ಕೋಸ್ಕರ ಈ ಹೋರಾಟವಲ್ಲ ಎಂದು ಸ್ಪಷ್ಟಪಡಿಸಿದರು. ಬೀದರ್‌ನಲ್ಲಿ ನಾವು ನಮ್ಮ ಭೂಮಿ ನಮ್ಮ ಹಕ್ಕು ಹೋರಾಟ



ಮಾಡಿದ್ದು, 10 ಸಾವಿರಕ್ಕೂ ಹೆಚ್ಚು ರೈತರು ಭಾಗವಹಿಸಿದ್ದರು. 'ವಿಜಯೇಂದ್ರ ರವರೇ, ದಯವಿಟ್ಟು ದುಷ್ಟ ಕಾಂಗ್ರೆಸ್ ಸರ್ಕಾರದಿಂದ ನಮ್ಮನ್ನು ಕಾಪಾಡಿ' ಎಂಬ ಕೂಗು ಎಲ್ಲರಿಂದ ಬರುತ್ತಿದೆ. 50-60 ವರ್ಷಗಳಿಂದ ಉಳುಮೆ ಮಾಡುತ್ತಿರುವ ನಮ್ಮ ಜಮೀನಿನ ಪಹಣಿಯಲ್ಲಿ ತಿದ್ದುಪಡಿ ಮಾಡಿದ್ದಾರೆ. 1974ರ ಗೆಜೆಟ್ ಅಧಿಸೂಚನೆಯನ್ನು ನೆಪ ಮಾಡಿಕೊಂಡು ರೈತರ ಜಮೀನುಗಳಲ್ಲಿ ವಕ್ಫ್ ಭೂಮಿ ಎಂದು ಸರ್ಕಾರ ನಮೂದಿಸುತ್ತಿದೆ ಎಂದು ರೈತರು ಆತಂಕದಿಂದ ತಿಳಿಸುತ್ತಿದ್ದಾರೆ ಎಂದು ಹೇಳಿದರು. ಭಯಪಡುವ ಅವಶ್ಯಕತೆ ಇಲ್ಲ, ರೈತರಿಗೆ ಬೆನ್ನುಲುಬಾಗಿ ನಾವು ನಿಲ್ಲಲಿದ್ದೇವೆ ಎಂದು ಅವರು ಭರವಸೆ ನೀಡಿದರು.

ಮಾಜಿ ಸಚಿವರಾದ ಶ್ರೀ ಬಿ. ಶ್ರೀರಾಮುಲು, ರಾಜ್ಯ ಉಪಾಧ್ಯಕ್ಷರಾದ ಶ್ರೀ ಬಿ.ಎ. ಬಸವರಾಜ, ಶ್ರೀ ರಾಜುಗೌಡ, ರಾಜ್ಯ ಪ್ರಧಾನ ಕಾರ್ಯದರ್ಶಿ ಶ್ರೀ ಪಿ. ರಾಜೀವ್, ವಿಧಾನ ಪರಿಷತ್ ಸದಸ್ಯರಾದ ಶ್ರೀ ಬಿ.ಜಿ.ಪಾಟೀಲ್, ಶ್ರೀ ಸುನಿಲ್ ವಲ್ಯಾಪುರೆ, ರಾಜ್ಯ ಕಾರ್ಯದರ್ಶಿ ಕು. ಲಲಿತಾ ಆನಪುರ್, ಜಿಲ್ಲಾಧ್ಯಕ್ಷ ಶ್ರೀ ಅಮಿನ್ ರೆಡ್ಡಿ ಯಾಳಗಿ, ಪಕ್ಷದ ಪದಾಧಿಕಾರಿಗಳು ಮುಖಂಡರು ಹಾಗೂ ಸಹಸ್ರಾರು ಸಂಖ್ಯೆಯಲ್ಲಿ ರೈತರು ಭಾಗವಹಿಸಿದ್ದರು.

**ಹುಬ್ಬಳ್ಳಿ:** ವಿಧಾನಪರಿಷತ್ ವಿರೋಧ ಪಕ್ಷದ ನಾಯಕರಾದ ಶ್ರೀ ಛಲವಾದಿ ನಾರಾಯಣಸ್ವಾಮಿ ನೇತೃತ್ವದ ತಂಡ ಗಂಡು ಮೆಟ್ಟಿದ ನಾಡು ಹುಬ್ಬಳ್ಳಿಯ ಕಲಗಟಗಿಯಿಂದ ಪ್ರವಾಸ ಮತ್ತು ಪ್ರತಿಭಟನಾ ಹೋರಾಟಕ್ಕೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಶ್ರೀ ಛಲವಾದಿ ನಾರಾಯಣಸ್ವಾಮಿ ಅವರು ಮಾತನಾಡಿ ವಕ್ಫ್ ಕುರಿತ ಗೆಜೆಟ್ ರದ್ದು ಪಡಿಸದಿದ್ದರೆ ರೈತರಿಗೆ ಜಮೀನು ಸಿಗುವುದಿಲ್ಲ ಎಂದು ವಿವರಿಸಿದರು.

ಮಠಗಳ, ಜನಸಾಮಾನ್ಯರ ಹಿತರಕ್ಷಣೆಯ ಬದ್ಧತೆ ಇದ್ದರೆ 1974ರ ಗೆಜೆಟ್ ರದ್ದುಗೊಳಿಸುವ ಮೂಲಕ ವಕ್ಫ್ ಕಾಟ ತಪ್ಪಿಸಬೇಕು. ಈ ಕೆಲಸ ಕಾಂಗ್ರೆಸ್ ಸರ್ಕಾರದಿಂದ ಆಗದೇ ಹೋದರೆ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ ಎಂದು ಹೇಳಿದರು. ವಕ್ಫ್ ವಿಚಾರದಲ್ಲಿ ಗೊಂದಲ ಆರಂಭವಾಗಿದೆ. ರಾಜ್ಯದಲ್ಲಿ ರೈತರ ಜಮೀನನ್ನು ವಕ್ಫ್ ಹೆಸರಲ್ಲಿ ಕಬಳಿಸುವ ಕಾರ್ಯ ನಡೆದಿದೆ ಎಂದು ಆತಂಕ



ವ್ಯಕ್ತಪಡಿಸಿದರು. 10-12 ನೇ ಶತಮಾನದ ಮಠಮಾನ್ಯದ ಆಸ್ತಿಯನ್ನೂ ವಕ್ಫ್ ಪಹಣಿಯಲ್ಲಿ ಸೇರಿಸಿದ್ದಾರೆ. ಈ ನಿಟ್ಟಿನಲ್ಲಿ ಬಿಜೆಪಿ ವತಿಯಿಂದ ಮೂರು ತಂಡದಲ್ಲಿ ವಕ್ಫ್ ವಿರುದ್ಧ ಅಭಿಯಾನ ಆರಂಭ ಮಾಡಿದ್ದೇವೆ ಎಂದು ಹೇಳಿದರು. ಪ್ರತಿಭಟನೆಯ ಬಳಿಕ, ಕಾಂಗ್ರೆಸ್ ಪ್ರಾಯೋಜಿತ ವಕ್ಫ್ ಮಂಡಳಿಯಿಂದ ಭೂಮಿಗಾಗಿ ನೋಟೀಸ್ ಸ್ವೀಕರಿಸಿದವರಿಂದ ಮತ್ತು ಭೂಮಿ ಕಳೆದುಕೊಂಡವರಿಂದ ಅಹವಾಲು ಸ್ವೀಕರಿಸಿದರು.

ಈ ಸಂದರ್ಭದಲ್ಲಿ ವಿಧಾನಪರಿಷತ್ ಸದಸ್ಯರಾದ ಡಾ. ಸಿ.ಟಿ. ರವಿಯವರು ಮಾತನಾಡಿ, ಕಾಂಗ್ರೆಸ್‌ಗೆ ಭಸ್ಮಾಸುರನ ಕೈಯಲ್ಲಿ ಅಧಿಕಾರ ಸಿಕ್ಕಂತಾಗಿದೆ. ಭಸ್ಮಾಸುರನಂತೆ ಈ ಸರ್ಕಾರ ರೈತರ ಜಮೀನು, ಕೆರೆ, ಮೈದಾನ, ಶಾಲೆಗಳನ್ನು ನುಂಗುತ್ತಿದೆ. ವಕ್ಫ್ ಬೋರ್ಡ್ ರಾಜ್ಯದಲ್ಲಿ ಅಂದಾಜು 90 ಸಾವಿರ ಎಕರೆ ಜಮೀನು ಕಬಳಿಸಲು ಹುನ್ನಾರ ನಡೆಸಿದೆ. ಆ ಮೂಲಕ ಲ್ಯಾಂಡ್ ಜಿಹಾದ್‌ಗೆ ಮುಂದಾಗಿದೆ ಎಂದು ಆತಂಕ ವ್ಯಕ್ತಪಡಿಸಿದರು. ವಕ್ಫ್ ಬೋರ್ಡ್ ಯಾವುದೇ ಆಸ್ತಿಯನ್ನು ತನ್ನದೆಂದು ಘೋಷಣೆ ಮಾಡಿದರೆ, ಸಂತ್ರಸ್ತರಿಗೆ ಬೋರ್ಡ್ ದಾಖಲೆಗಳನ್ನು ತೋರಿಸಬೇಕಿಲ್ಲ. ಬದಲಾಗಿ, ಸಂತ್ರಸ್ತರು ತಮ್ಮಲ್ಲಿರುವ ದಾಖಲೆಗಳೊಂದಿಗೆ ವಕ್ಫ್ ನ್ಯಾಯಾಧಿಕರಣದಲ್ಲಿ ನ್ಯಾಯ ಕೇಳಬೇಕು. ಆದರೆ, ಕುರಿ, ತೋಳನ ಹತ್ತಿರ ನ್ಯಾಯ ಕೇಳಿದರೆ ನ್ಯಾಯ ಸಿಗುತ್ತದೆಯೇ? ಎಂದು ಪ್ರಶ್ನಿಸಿದರು.

ಈ ಸಂದರ್ಭದಲ್ಲಿ ನಿಕಟಪೂರ್ವ ರಾಜ್ಯಾಧ್ಯಕ್ಷರಾದ ಶ್ರೀ ನಳಿನ್ ಕುಮಾರ್ ಕಟೀಲ್, ವಿಧಾನಪರಿಷತ್ ಸದಸ್ಯರಾದ ಡಾ. ಸಿ.ಟಿ. ರವಿ, ಶ್ರೀ ಬಿ.ಸಿ. ಪಾಟೀಲ್, ಶ್ರೀ ಶಂಕರ ಪಾಟೀಲ ಮುನೇನಕೊಪ್ಪ, ಶಾಸಕರಾದ ಶ್ರೀ ಮಹೇಶ್ ಟೆಂಗಿನಕಾಯಿ, ಮಾಜಿ ಸಂಸದರಾದ ಶ್ರೀ ಎಸ್. ಮುನಿಸ್ವಾಮಿ, ವಿಧಾನಪರಿಷತ್ ಮಾಜಿ ಸದಸ್ಯರಾದ ಶ್ರೀ ವೈ.ಎ. ನಾರಾಯಣಸ್ವಾಮಿ, ರಾಜ್ಯ ಮುಖ್ಯ ವಕ್ತಾರರಾದ ಶ್ರೀ ಅಶ್ವತ್ಥನಾರಾಯಣ, ಪದಾಧಿಕಾರಿಗಳು, ಪ್ರಮುಖರು ಮತ್ತು ಕಾರ್ಯಕರ್ತರು ಉಪಸ್ಥಿತರಿದ್ದರು.

ಇನ್ನು ಈ ತಂಡ ದಾವಣಗೆರೆ ಚಿತ್ರದುರ್ಗಗಳಲ್ಲಿ ತನ್ನ ಪ್ರವಾಸ ಮುಂದುವರೆಸಿದ್ದು, ಸಮಸ್ಯೆಗೊಳಗಾದ ರೈತರ ಸ್ಥಳಗಳಿಗೆ ಭೇಟಿ ನೀಡಿ ಸಮಸ್ಯೆ ಆಲಿಸಿ, ರೈತರಿಗೆ ಆತ್ಮಸ್ಥೈರ್ಯ ತುಂಬುವುದರ ಜೊತೆಗೆ, ಪ್ರತಿಭಟನಾ ಹೋರಾಟಗಳನ್ನು ಆಯೋಜಿಸಿ ಸರ್ಕಾರಕ್ಕೆ ಬಿಸಿ ಮುಟ್ಟಿಸುತ್ತಿದೆ ಹಾಗೂ ಜನತೆಗೆ ಜಾಗೃತಿ ಮೂಡಿಸುತ್ತಿದೆ. ಈ ಸಂದರ್ಭದಲ್ಲಿ ಬಿಜೆಪಿಯ ಸ್ಥಳೀಯ ಎಲ್ಲಾ ಪದಾಧಿಕಾರಿಗಳು ಪ್ರಮುಖನಾಯಕರು, ಕಾರ್ಯಕರ್ತರು ಜೊತೆಯಾಗುತ್ತಿದ್ದಾರೆ.

**ಮೈಸೂರು:** ವಿರೋಧ ಪಕ್ಷದ ನಾಯಕರಾದ ಶ್ರೀ ಆರ್. ಅಶೋಕ ರವರ ನೇತೃತ್ವದ ತಂಡ ಸಾಂಸ್ಕೃತಿಕ ನಗರಿ ಮೈಸೂರಿನಿಂದ ಪ್ರವಾಸ ಆರಂಭಿಸಿದ್ದು, ವಕ್ಫ್ ಮಂಡಳಿಯಿಂದ ನೋಟಿಸ್ ನೀಡಲಾದ ಮೈಸೂರು ಭಾಗದ ವಿವಿಧ ಸ್ಥಳಗಳಿಗೆ ಭೇಟಿ ನೀಡಿ ಸ್ಥಳೀಯರ ಸಮಸ್ಯೆಗಳನ್ನು ಆಲಿಸಿ ಧೈರ್ಯ ತುಂಬುವ ಕೆಲಸ ಮಾಡಿದರು. ರೈತರು ಭಯಪಡುವ ಅವಶ್ಯಕತೆ ಇಲ್ಲ. ನಿಮ್ಮ ಒಂದಿಂಚು ಜಾಗವನ್ನು ಬೇರೆಯಾರೋ ಕಸಿದುಕೊಳ್ಳಲು ಬಿಡುವುದಿಲ್ಲ ಎಂದು ಭರವಸೆ ನೀಡಿದರು.



ಈ ಸಂದರ್ಭದಲ್ಲಿ ಮಾಜಿ ಕೇಂದ್ರ ಸಚಿವರಾದ ಶ್ರೀ ಎ. ನಾರಾಯಣ ಸ್ವಾಮಿ, ವಿಧಾನ ಪರಿಷತ್ ಸದಸ್ಯರಾದ ಡಾ. ಸಿ. ಟಿ. ರವಿ, ಶಾಸಕರಾದ ಶ್ರೀ ಶ್ರೀವತ್ಸ, ಮಾಜಿ ಶಾಸಕರು, ಜಿಲ್ಲಾಧ್ಯಕ್ಷರಾದ ಶ್ರೀ ಎಲ್. ನಾಗೇಂದ್ರ ಮತ್ತು ಪ್ರಮುಖರು ಉಪಸ್ಥಿತರಿದ್ದರು.

ರೈತರ, ಮಠ ಮಾನ್ಯಗಳ, ಧಾರ್ಮಿಕ ಕೇಂದ್ರಗಳ ಮೇಲೆ ಕಣ್ಣಿಟ್ಟಿರುವ ಕಾಂಗ್ರೆಸ್ ಕುಮ್ಮಕ್ಕಿನ ವಕ್ಫ್ ಬೋರ್ಡ್‌ನ ಭೂ ಕಬಳಿಕೆ ನೀತಿ ವಿರುದ್ಧ ಈಗಾಗಲೇ ಸಮರ ಸಾರಿರುವ ಬಿಜೆಪಿ ರಾಜ್ಯದ ಎಲ್ಲಾ ಜಿಲ್ಲೆಗಳಿಂದ ಪ್ರವಾಸ ಆರಂಭಿಸಿದ್ದು, ರೈತರ ಪರವಾಗಿ ನಿಲ್ಲುವ ಭರವಸೆಯನ್ನು ನೀಡುವುದರೊಂದಿಗೆ ಪ್ರವಾಸ ಈಗ ಆರಂಭವಾಗಿದ್ದು, ಮುಂದಿನ ದಿನಗಳಲ್ಲಿ ಪ್ರತಿ ಜಿಲ್ಲೆಗೆ ಈ ಪ್ರವಾಸ ಸಾಗಲಿದೆ.

ರೈತರಿಗೆ ನ್ಯಾಯ ಸಿಗುವವರೆಗೂ ಬಿಜೆಪಿ ನಿರಂತರ ಹೋರಾಟವನ್ನು ಮಾಡಲಿದೆ. ಇದಕ್ಕೆ ಪ್ರತಿಯೊಬ್ಬ ಸಾರ್ವಜನಿಕರ ಸಹಕಾರವೂ ಅಗತ್ಯವಿದ್ದು, ಸಹಕರಿಸಲು ಕೋರಿದೆ.




# ಜಿ-20 ಶೃಂಗ ಸಭೆಯಲ್ಲಿ ಪ್ರಧಾನಿ

## ಭವಿಷ್ಯದ ಭಾರತಕ್ಕೆ ಭದ್ರ ಬುನಾದಿ ಹಾಕಿದ ಮೋದಿ ವಿದೇಶಿ ಪ್ರವಾಸ



**ಮಹೇಶ್ ಹೆಗಡೆ**
ಬಿಜೆಪಿ ಕಾರ್ಯಕರ್ತರು

ಮೋದಿ ಸರಕಾರದ ಆಡಳಿತಾತ್ಮಕ ಚಟುವಟಿಕೆಗಳಲ್ಲಿ ಪ್ರಬುದ್ಧತೆ ಮತ್ತು ದಿಟ್ಟ ಆಲೋಚನೆಗಳಲ್ಲಿ ವಿದೇಶಾಂಗ ನೀತಿಯೂ ಒಂದು. ಭೇಟಿ ಕೊಡಬೇಕಾದ ದೇಶ, ಭೇಟಿ ನೀಡಿದ ದೇಶದಲ್ಲಿ ನಡೆದುಕೊಳ್ಳಬೇಕಾದ ರೀತಿಗಳೆಲ್ಲದರ ಯೋಚನೆ, ಯೋಜನೆಗಳೆಲ್ಲದರ ಪೂರ್ವ ತಯಾರಿಯೊಂದಿಗೆ ಮೋದಿಯವರ ವಿದೇಶ ಪ್ರವಾಸ ಆಯೋಜನೆಗೊಳ್ಳುತ್ತದೆ. ಈ ಕಾರಣದಿಂದಲೇ ಇಡೀ ವಿಶ್ವವೇ ಭಾರತದ ವಿದೇಶಿ ನೀತಿ, ನಿರ್ಧಾರಗಳಗೆ ತಲೆಬಾಗಿ, ಭಾರತದತ್ತ ತಿರುಗಿ ನೋಡುತ್ತಿದೆ. ಭಾರತದ ಗೌರವ ಜಾಗತಿಕ ಮಟ್ಟದಲ್ಲಿ ಹೆಚ್ಚಾಗಿದೆ. ಬ್ರೆಜಿಲ್‌ನಲ್ಲಿ ನಡೆದ ಜಿ 20 ಶೃಂಗ ಸಭೆಯಲ್ಲಿ ಭಾಗಿಯಾಗುವುದರ ಜೊತೆಗೆ ಮೋದಿಯವರು ಇನ್ನೆರಡು ರಾಷ್ಟ್ರಗಳಿಗೂ ಭೇಟಿ ನೀಡಿ ಐದು ದಿನದ ವಿದೇಶಿಪ್ರವಾಸವನ್ನು ಯಶಸ್ವಿಯಾಗಿ ಪೂರೈಸಿದ್ದಾರೆ.

# 17 ವರ್ಷದ ಬಳಿಕ ನೈಜಿರಿಯಾ ಭೇಟಿ





**ತಮ್ಮ ನೈಜಿರಿಯಾ ಭೇಟಿಯಿಂದ ಮೋದಿ ಕಳೆದ 17 ವರ್ಷಗಳಲ್ಲಿ ಪಶ್ಚಿಮ ಆಫ್ರಿಕದ ರಾಷ್ಟ್ರಕ್ಕೆ ಭೇಟಿ ನೀಡಿದ ಮೊದಲ ಭಾರತೀಯ ಪ್ರಧಾನಿ ಎಂದೆನಿಸಿಕೊಂಡಿದ್ದಾರೆ. ಈ ಭೇಟಿ ಎರಡು ದೇಶಗಳ ಕಾರ್ಯತಂತ್ರಾತ್ಮಕ ಪಾಲುದಾರಿಕೆ ನಿರ್ಮಿಸಲು ಒಂದು ಅವಕಾಶವಾಗಿದೆ ಎಂದು ಮೋದಿ ಹೇಳಿದ್ದಾರೆ. ನೈಜೀರಿಯಾದಲ್ಲಿನ ಭಾರತೀಯ ಸಮುದಾಯದವರ ಬೆಚ್ಚಗಿನ ಹಾಗೂ ರೋಮಾಂಚಕ ಸ್ವಾಗತ ಹೃದಯಸ್ಪರ್ಶಿ ಆಗಿದೆ. ನೈಜೀರಿಯಾದಲ್ಲಿರುವ ಭಾರತೀಯರು ತಮ್ಮ ಬೇರು, ಭಾವ ಹಾಗೂ ಸಂಸ್ಕೃತಿಯ ಜತೆ ಬಂಧವನ್ನು ಬೆಸೆದು ಕೊಂಡೇ ಇರುವುದು ಶ್ಲಾಘನೀಯ ಎಂದ ಪ್ರಧಾನಿ, ಅಲ್ಲಿನ ಭಾರತೀಯರ ಜತೆ ಸಂವಾದ ನಡೆಸಿದರು. ಮರಾಠಿ ಭಾಷೆಗೆ ಶಾಸ್ತ್ರೀಯ ಸ್ಥಾನಮಾನ ಸಿಕ್ಕಿದ್ದಕ್ಕೆ ನೈಜೀರಿಯಾದಲ್ಲಿನ ಭಾರತೀಯ ಸಮುದಾಯದವರು ಸಂತೋಷ ವ್ಯಕ್ತಪಡಿಸಿದರು. ಅವರು ತಮ್ಮ ಸಂಸ್ಕೃತಿ ಮತ್ತು ಮೂಲದ ಜತೆ ಹೇಗೆ ಸಂಪರ್ಕ ಹೊಂದಿದ್ದಾರೆ ಎಂಬುದಕ್ಕೆ ಇದು ನಿದರ್ಶನ ಎಂದೂ ಮೋದಿ ಪ್ರಶಂಸಿಸಿದರು.**

## ಮೋದಿಗೆ ಅದ್ದೂರಿ ಸ್ವಾಗತ ನೀಡಿದ ನೈಜಿರಿಯಾ

ನೈಜೀರಿಯಾಗೆ ಪ್ರಥಮ ಬಾರಿಗೆ ಭೇಟಿ ನೀಡಿದ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರಿಗೆ 'ಭಾರತ್ ಮಾತಾ ಕೀ ಜೈ' ಹಾಗೂ 'ವಂದೇ ಮಾತರಂ' ಘೋಷಣೆಯೊಂದಿಗೆ ಅದ್ದೂರಿಯಾಗಿ ಸ್ವಾಗತಿಸಿಸಲಾಯಿತು. ಅಲ್ಲಿಯ ಅಂಬುಜಾ ವಿಮಾನ ನಿಲ್ದಾಣದಲ್ಲಿ ಮೋದಿ ಬಂದಿಳಿಯುತ್ತಿದ್ದಂತೆ ನೈಜೀರಿಯಾ ಅಧ್ಯಕ್ಷ ಬೋಲಾ ಅಹಮದ್ ತಿನುಬು ಅವರು ಪ್ರಧಾನಿಯವರನ್ನು ಖುದ್ದು ಸ್ವಾಗತಿಸಿದರು. ಪ್ರಧಾನಿ ಮೋದಿ ಅವರಿಗೆ 'ಗ್ರ್ಯಾಂಡ್ ಕಮಾಂಡರ್ ಆಫ್ ದ ಆರ್ಡರ್ ಆಫ್ ದ ನೈಜರ್ (ಜಿಸಿಒಎನ್)' ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಯಿತು. ಕ್ಲೀನ್ ಎಲಿಜಬೆತ್ ಅವರಿಗೆ 1969ರಲ್ಲಿ ಈ ಪ್ರಶಸ್ತಿ ನೀಡಿದ ಬಳಿಕ ಈ ಪ್ರಶಸ್ತಿಯನ್ನು ಸ್ವೀಕರಿಸಿದ 2ನೇ ವಿದೇಶಿ ಗಣ್ಯರು ಎಂಬ ಹೆಗ್ಗಳಿಕೆಗೂ ಮೋದಿ ಪಾತ್ರರಾಗಿದ್ದಾರೆ.

## ದ್ವಿಪಕ್ಷೀಯ ಮಾತುಕತೆ

ನೈಜೀರಿಯಾ ಅಧ್ಯಕ್ಷ ಬೊಲ ಅಹಮದ್ ಟಿನುಬು ಜತೆ ವಿಸ್ತೃತ ಸುತ್ತಿನ ಮಾತುಕತೆ ನಡೆಸಿದ ಪ್ರಧಾನಿ ನರೇಂದ್ರ ಮೋದಿ ರಕ್ಷಣೆ, ವ್ಯಾಪಾರ- ವಾಣಿಜ್ಯ ಮತ್ತು ಇಂಧನ ರಂಗಗಳಲ್ಲಿ ದ್ವಿಪಕ್ಷೀಯ ಸಹಕಾರ ಕೊಂಡಿಯನ್ನು ಮತ್ತಷ್ಟು ವಿಸ್ತರಿಸಿ ಬಲಪಡಿಸುವ ಸಾಧ್ಯತೆಗಳ ಬಗ್ಗೆ ಚರ್ಚಿಸಿದರು. ಭಯೋತ್ಪಾದನೆ ವಿರುದ್ಧ ಜಂಟಿ ಹೋರಾಟ, ಕಡಲ್ಗಳ್ಳತನ ಮತ್ತು ತೀವ್ರವಾದವನ್ನು ಪರಿಣಾಮಕಾರಿಯಾಗಿ ಹತ್ತಿಕ್ಕುವುದು, ಜಾಗತಿಕ ದಕ್ಷಿಣದ ಆಶೋತ್ತರಗಳಿಗೆ ಸ್ಪಂದಿಸಲು ಕಾರ್ಯತತ್ಪರರಾಗುವ ನಿಟ್ಟಿನಲ್ಲಿ ಉಭಯ ನಾಯಕರು ಸಂಕಲ್ಪ ಬದ್ಧತೆ ಘೋಷಿಸಿದರು. ಭಯೋತ್ಪಾದನೆ, ಪ್ರತ್ಯೇಕತಾವಾದ, ಕಡಲ್ಗಳ್ಳತನ ಮತ್ತು ಡ್ರಗ್ಸ್ ಕಳ್ಳಸಾಗಣೆ ಉಭಯ ದೇಶಗಳನ್ನು ಕಾಡುತ್ತಿರುವ ಪ್ರಮುಖ ಸವಾಲುಗಳಾಗಿದ್ದು, ಇವುಗಳನ್ನು ಮಟ್ಟಹಾಕಲು ಎರಡೂ ರಾಷ್ಟ್ರಗಳು ಜಂಟಿಯಾಗಿ ಶ್ರಮಿಸಬೇಕಿದೆ ಎಂದು ಆರಂಭದಲ್ಲಿ ನಿಯೋಗ ಮಟ್ಟದ ಮಾತುಕತೆ ಸಂದರ್ಭ ಪ್ರಧಾನಿ ಮೋದಿ ಅಭಿಪ್ರಾಯ ವ್ಯಕ್ತಪಡಿಸಿದರು. ಕೃಷಿ, ಸಾರಿಗೆ, ಕೈಗೆಟಕುವ ಔಷಧಗಳು, ಪುನಃಶ್ಚೇತನ ಶೀಲ ಇಂಧನ ಮತ್ತು ಡಿಜಿಟಲ್ ರಂಗದ ಪರಿವರ್ತನೆ ಮತ್ತಿತರ ವಿಚಾರಗಳಲ್ಲಿ ಅನುಭವಧಾರೆಯನ್ನು ನೈಜೀರಿಯಾ ಜತೆ ಹಂಚಿಕೊಳ್ಳಲು ಪ್ರಧಾನಿ ಸಹಮತ ವ್ಯಕ್ತ ಪಡಿಸಿದರು. ಭಾರತ ನೈಜೀರಿಯಾದ ಅಭಿವೃದ್ಧಿಗೆ ಪೂರಕ ನೆರವಿನೊಂದಿಗೆ ಸಾಮರ್ಥ್ಯ ನಿರ್ಮಾಣ ತರಬೇತಿ ಕಾರ್ಯಕ್ರಮಗಳನ್ನು ನೈಜೀರಿಯಾದಲ್ಲಿ ಆಯೋಜಿಸುತ್ತಿದೆ. ನೈಜೀರಿಯಾ ಅಧ್ಯಕ್ಷರ ಜತೆ ಬಲು ಉಪಯುಕ್ತ ಮಾತುಕತೆ ನಡೆಯಿತು. ದ್ವಿಪಕ್ಷೀಯ ವ್ಯೂಹಾತ್ಮಕ ಪಾಲುದಾರಿಕೆಗೆ ಹೊಸ ಆಯಾಮ ನೀಡುವ ವಿಚಾರವಾಗಿ ಚರ್ಚಿತವಾಗಿದ್ದು, ಮುಂದಿನ ದಿನಗಳಲ್ಲಿ ಇದರ ಫಲಿತಾಂಶ ಕಾಣಸಿಗಲಿದೆ.

## ಗಯಾನಾದಲ್ಲಿ ಮೋದಿ ಮೋಡಿ



ವಿದೇಶಿ ಪ್ರವಾಸದ ಭಾಗವಾಗಿ ಮೋದಿ ಗಯಾನಾಗೆ ಭೇಟಿ ನೀಡಿದರು. ಪ್ರಧಾನಿ ಮೋದಿ ಅವರನ್ನು ಭಾರತೀಯ ವಲಸಿಗರು ಅದ್ದೂರಿಯಾಗಿ ಸ್ವಾಗತಿಸಿದರು. 50 ವರ್ಷಗಳ ಬಳಿಕ ಗಯಾನಾಗೆ ಭಾರತದ ಪ್ರಧಾನಿಯೊಬ್ಬರು ಭೇಟಿ ನೀಡಿದಂತಾಗಿದೆ. ಈ ವೇಳೆ ಪ್ರಧಾನಿ ಮೋದಿ ಅವರಿಗೆ ಗಯಾನ ದೇಶ ಉನ್ನತ ಪ್ರಶಸ್ತಿಯಾದ **'ದಿ ಆರ್ಡರ್ ಆಫ್ ಎಕ್ಸಲೆನ್ಸ್'** ಪ್ರಶಸ್ತಿಯನ್ನು ನೀಡಿ ಗೌರವಿಸಿದ್ದು, ಹೆಮ್ಮೆಯ ವಿಚಾರವಾಗಿದೆ ಎಂದು ಪ್ರಧಾನಿ ಶ್ರೀ ಮೋದಿ ಹೇಳಿದ್ದಾರೆ. ಅಲ್ಲಿನ ಅನಿವಾಸಿ ಭಾರತೀಯರೊಂದಿಗೆ ಸಂವಾದ ನಡೆಸಿ, ಭಾರತೀಯರು ವಿವಿಧ ಕ್ಷೇತ್ರಗಳಲ್ಲಿ ತಮ್ಮ ಛಾಪು ಮೂಡಿಸುತ್ತಿರುವುದಕ್ಕೆ ಸಂತಸ ವ್ಯಕ್ತಪಡಿಸಿದರು. ಗಯಾನದಲ್ಲಿ ಸುಮಾರು 3.20 ಲಕ್ಷ ಭಾರತೀಯ ಮೂಲದವರಿದ್ದು, 185 ವರ್ಷಗಳ ಹಿಂದೆ ವಲಸೆ ಬಂದವರಾಗಿದ್ದು, ವಿವಿಧ ಕ್ಷೇತ್ರಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವುದು ಹೆಮ್ಮೆಯ ಸಂಗತಿ ಎಂದು ಹೇಳಿದ್ದಾರೆ.

**ಭಾರತ ವಿಶ್ವಬಂಧು-ಗಯಾನ ಸಂಸತ್‌ನಲ್ಲಿ ಮೋದಿ ಭಾಷಣ :** ಪ್ರಜಾಪ್ರಭುತ್ವ, ಮಾನವೀಯತೆ ಮೊದಲು ಎಂಬ ಉತ್ಸಾಹದಲ್ಲಿ ಭಾರತ ವಿಶ್ವಬಂಧುವಂತೆ ಕಾರ್ಯನಿರ್ವಸುತ್ತಿದೆ ಎಂದು ಪ್ರಧಾನಿ ಶ್ರೀ ಮೋದಿ ಬಣ್ಣಿಸಿದ್ದಾರೆ. ಗಯಾನ ಸಂಸತ್ತಿನಲ್ಲಿನ ವಿಶೇಷ ಅಧಿವೇಶನವನ್ನು ಉದ್ದೇಶಿಸಿ ಮಾತನಾಡಿದ ಅವರು ಈ ಬಣ್ಣನೆಯನ್ನು ಮಾಡಿದರು. ಶ್ರೀಲಂಕಾ, ಮಾಲ್ಡೀವ್ಸ್ ಅಲ್ಲದೇ ಯಾವುದೇ ದೇಶ ಬಿಕ್ಕಟ್ಟನ್ನು ಎದುರಿಸುತ್ತಿರಲಿ, ಭಾರತ ಅವುಗಳಿಗೆ ಯಾವುದೇ ಸ್ವಾರ್ಥವಿಲ್ಲದೆ ಸದಾ ಸಹಾಯ ಮಾಡಿದೆ. ಇದು ಸಂಘರ್ಷದ ಸಮಯವಲ್ಲ ಎಂದ ಅವರು ಸಾರ್ವತ್ರಿಕ ಸಹಕಾರಕ್ಕೆ ಕರೆ ನೀಡಿದರು. ಪ್ರಧಾನಿ ಮೋದಿ ಕೆರೆಬಿಯನ್ ನಾಯಕರ ಜತೆ ಮಾತುಕತೆಯನ್ನೂ ನಡೆಸಿದರು. ದ್ವಿಪಕ್ಷೀಯ ಒಪ್ಪಂದಗಳನ್ನು ಗಟ್ಟಿಗೊಳಿಸುವ ಹಾಗೂ ಜಾಗತಿಕ ದಕ್ಷಿಣವನ್ನು ಸಬಲೀಕರಣಗೊಳಿಸುವ ನಿಟ್ಟಿನಲ್ಲಿ ಕೆಲವು ಪ್ರಮುಖ ಕ್ಷೇತ್ರಗಳಲ್ಲಿ ಸಹಕಾರ ವೃದ್ಧಿಸುವ ಕುರಿತು

## ಕೊರೋನಾ ಸಮಯದಲ್ಲಿ ಲಸಿಕೆ ಹಂಚಿಕೆ

ಭಾರತ ಮತ್ತು ಗಯಾನಾ ಸ್ವತಂತ್ರವಾದಾಗ ಭಿನ್ನ ಸವಾಲುಗಳನ್ನು ಎದುರಿಸುತ್ತಿದ್ದವು, ಇಂದು, 21ನೇ ಶತಮಾನದಲ್ಲಿ, ಜಗತ್ತು ಭಿನ್ನ ಸವಾಲುಗಳನ್ನು ಎದುರಿಸುತ್ತಿದೆ. ಕರೋನಾ ನಂತರ, ನಾವೆಲ್ಲ ಹೊಸ ವಿಶ್ವ ಕ್ರಮದತ್ತ ಸಾಗಬೇಕಾಗಿದ್ದು, ಜಗತ್ತು ಹಲವು ಸಮಸ್ಯೆಗಳಲ್ಲಿ ಸಿಲುಕಿಕೊಂಡಿದೆ. ಪ್ರಜಾಪ್ರಭುತ್ವ , ಮಾನವೀಯತೆ ಮೊದಲು ಎಂಬ ಮನೋಭಾವದಿಂದ ಇಂದು ಭಾರತ ವಿಶ್ವ ಬಂಧುವಾಗಿ ತನ್ನ ಕರ್ತವ್ಯವನ್ನು ಜಗತ್ತಿಗೆ ಪೂರೈಸುತ್ತಿದೆ. ಜಾಗತಿಕವಾಗಿ ಸಮಸ್ಯೆ ಎದುರಾದಾಗ, ಭಾರತ ಮೊದಲು ಪ್ರತಿಕ್ರಿಯಿಸುತ್ತದೆ. ಕೋವಿಡ್-19 ರ ಸಮಯದಲ್ಲಿ, ಪ್ರತಿಯೊಂದು ದೇಶವು ತನ್ನನ್ನು ತಾನು ಉಳಿಸಿಕೊಳ್ಳಲು ಪ್ರಯತ್ನಿದ್ದ ಸಮಯದಲ್ಲಿ ಭಾರತ 150 ಕ್ಕೂ ಹೆಚ್ಚು ದೇಶಗಳಿಗೆ ಔಷಧಿ ಹಂಚಿಕೊಂಡು ಮಾನವೀಯತೆಗೆ ಸಾಕ್ಷಿಯಾಗಿದೆ.

## ಮೋದಿ ಭರವಸೆಯ ನುಡಿಗಳು



ಬ್ರೆಜಿಲ್ ರಾಜಧಾನಿ ರಿಯೋ ಡಿ ಜನ್ಯೆರೋದಲ್ಲಿ ನಡೆದ ಜಿ-20 ಶೃಂಗಸಭೆಯಲ್ಲಿ ಪ್ರಧಾನಿ ಮೋದಿ ಭಾಗಿಯಾಗಿ ಜಗತ್ತಿನ ವಾಸ್ತವದ ಕುರಿತು ಮಾತನಾಡಿ ಜಿ-20 ದೇಶಗಳ ಗಮನ ಸೆಳೆದರು. ಸಭೆಯಲ್ಲಿ ಮಾತನಾಡಿದ ಪ್ರಧಾನಿ ಮೋದಿ,ಆಹಾರ ಬಿಕ್ಕಟ್ಟು ಬಗೆಹರಿಸಲು ಜಿ-20 ರಾಷ್ಟ್ರಗಳಿಗೆ ಕರೆ ನೀಡಿದರು. ಜಾಗತಿಕ ಸಂಘರ್ಷಗಳಿಂದ ಉಂಟಾದ ಆಹಾರ, ಇಂಧನ ಮತ್ತು ರಸಗೊಬ್ಬರ ಬಿಕ್ಕಟ್ಟು ಜಗತ್ತಿನ ದಕ್ಷಿಣದ ದೇಶಗಳ ಮೇಲೆ ಹೆಚ್ಚು ಪ್ರತಿಕೂಲ ಪರಿಣಾಮ ಬೀರುತ್ತಿದ್ದು, ಜಿ-20 ಇದನ್ನು ಪರಿಹರಿಸುವತ್ತ ಗಮನಹರಿಸಬೇಕು ಎಂದರು.. ಭಾರತದ ಅಧ್ಯಕ್ಷತೆಯಲ್ಲಿ ಕಳೆದ ವರ್ಷ ನಡೆದ ಜಿ-20 ಶೃಂಗಸಭೆಯ ಥೀಮ್ ಒಂದು ಭೂಮಿ, ಒಂದು ಕುಟುಂಬ, ಒಂದು ಭವಿಷ್ಯ ಪ್ರಸ್ತುತ ಶೃಂಗಸಭೆಗೆ ಪೂರಕವಾಗಿದೆ ಎಂದರು.

## ವೇದ ಮಂತ್ರದೊಂದಿಗೆ ಮೋದಿಗೆ ಸ್ವಾಗತ



ಜಿ-20 ಶೃಂಗ ಸಭೆಯಲ್ಲಿ ಪಾಲ್ಗೊಳ್ಳಲು ಬ್ರೆಜಿಲ್‌ಗೆ ಬಂದಿಳಿದ ಮೋದಿಯವರನ್ನು ಸಂಸ್ಕೃತದಲ್ಲಿ ವೇದಮಂತ್ರಗಳನ್ನು ಅತ್ಯಂತ ಸುಲಲಿತ ಮತ್ತು ಸುಶ್ರಾವ್ಯವಾಗಿ ಪಠಿಸುವ ಮೂಲಕ, ಅನಿವಾಸಿ ಭಾರತೀಯ ಸಮುದಾಯ ಶಾಸ್ತ್ರೋಕ್ತವಾಗಿ ಬರಮಾಡಿಕೊಂಡಿತು. ಇದಕ್ಕೆ ಪ್ರತಿಕ್ರಿಯಿಸಿರುವ ಮೋದಿ, ಬ್ರೆಜಿಲ್‌ನಲ್ಲಿ ಭಾರತೀಯ ಸಂಸ್ಕೃತಿ-ಸಂಪ್ರದಾಯದಲ್ಲೇ ಸ್ವಾಗತ ನೀಡಿರುವುದಕ್ಕೆ ನಾನು ಕೃತಜ್ಞ. ಈ ರಾಷ್ಟ್ರದಲ್ಲಿ ಭಾರತೀಯ ಸಂಸ್ಕೃತಿಯ ಆರಾಧನೆ ನಡೆದಿರುವುದೂ ಸಂತಸದ ವಿಚಾರ, ರಿಯೊ ಡಿ ಜನೈರೊಗೆ ಅವಿಸ್ಮರಣೀಯ ರೀತಿ ಸ್ವಾಗತಿಸಿದ್ದಕ್ಕೆ ನಾನು ಆಭಾರಿ, ಭಾರತೀಯ ಸಮುದಾಯದ ತುಂಬು ಆತ್ಮೀಯ ಸ್ವಾಗತವು ನನ್ನನ್ನು ತನ್ಮಯಗೊಳಿಸಿತು. ಉಪಖಂಡಗಳಾಚೆಗಿದ್ದರೂ ಅನಿವಾಸಿ ಭಾರತೀಯರಿಗೆ ನಮ್ಮ ಬಗ್ಗೆ ಇರುವ ಅದಮ್ಯ ಪ್ರೀತಿ, ಅಭಿಮಾನಗಳನ್ನು ಅವರ ಈ ರೀತಿ ಶಕ್ತಿ ಸಾಮರ್ಥ್ಯಗಳೇ ಬಿಂಬಿಸುತ್ತಿವೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

## ಜಿ-20 ಶೃಂಗಸಭೆ ಸಾರಾಂಶ

ಜಾಗತಿಕ ಹಸಿವಿನ ಸಮಸ್ಯೆ ವಿರುದ್ಧ ಹೋರಾಡಲು ಕರೆ ನೀಡಿದೆ. ಇಸ್ರೇಲ್ ದಾಳಿಯಿಂದ ತತ್ತರಿಸಿರುವ ಗಾಜಾಕ್ಕೆ ಅಧಿಕ ನೆರವು ಒದಗಿಸಬೇಕು ಹಾಗೂ ಮಧ್ಯಪ್ರಾಚ್ಯ ಮತ್ತು ಯುಕ್ರೇನ್‌ನಲ್ಲಿನ ಯುದ್ಧವನ್ನು ಕೊನೆಗಾಣಿಸುವಂತೆಯೂ ಜಂಟಿ ಘೋಷಣೆಯಲ್ಲಿ ಶೃಂಗಸಭೆಯಲ್ಲಿ ಒತ್ತಾಯಿಸಲಾಗಿದೆ. ಆದರೆ, ಈ ಗುರಿಗಳನ್ನು ಸಾಧಿಸುವ ಮಾರ್ಗೋಪಾಯಗಳನ್ನು ಅದು ನಮೂದಿಸಿಲ್ಲ. ಇದರ ಜೊತೆಗೆ ಜಾಗತಿಕ ಶತಕೋಟ್ಯಧಿಪತಿಗಳಿಗೆ ತೆರಿಗೆ ಹೇರಿಕೆಗೆ ಆಗ್ರಹ, ಹಾಲಿ 5 ದೇಶಗಳ ವಿಶ್ವಸಂಸ್ಥೆ ಭದ್ರತಾ ಮಂಡಳಿ ವಿಸ್ತರಣೆಗೆ ಒತ್ತಾಯ, ಯುದ್ಧಗಳ ಖಂಡನೆ, ಶಾಂತಿ ಸ್ಥಾಪನೆಗೆ ಕರೆ ನೀಡಲಾಯಿತು. ಬ್ರೆಜಿಲ್ ಅಧ್ಯಕ್ಷ ಲೂಯಿಸ್ ಇನಾಸಿಯೊ ಲುಲಾ ಡಿಸಿಲ್ವ ಶೃಂಗಸಭೆಯ ಅಧ್ಯಕ್ಷತೆ ವಹಿಸಿದ್ದರು. ಮುಂದಿನ ಜಿ-20 ಶೃಂಗಸಭೆ ದಕ್ಷಿಣ ಆಫ್ರಿಕಾದಲ್ಲಿ ನಡೆಯಲಿದೆ.

## ಮೋದಿ ಜೊತೆ ವಿದೇಶಿ ನಾಯಕರ ದ್ವಿಪಕ್ಷೀಯ ಮಾತುಕತೆ

ಜಿ-20 ಶೃಂಗಸಭೆಯಲ್ಲಿ ಇಟಲಿ, ಇಂಡೋನೇಷ್ಯಾ, ನಾರ್ವೆ, ಪೋರ್ಚುಗಲ್, ಈಜಿಪ್ಟ್ ಮತ್ತು ದಕ್ಷಿಣ ಕೊರಿಯಾ ಸಹಿತ ಅನೇಕ ದೇಶಗಳ ನಾಯಕರೊಂದಿಗೆ ದ್ವಿಪಕ್ಷೀಯ ಬಾಂಧವ್ಯ ಸುಧಾರಣೆಯ ಬಗ್ಗೆ ಚರ್ಚಿಸಿದರು. ಜೊತೆಗೆ ಐಎಂಎಫ್ ಅಧಿಕಾರಿ, ಅಂತಾರಾಷ್ಟ್ರೀಯ ಹಣಕಾಸು ನಿಧಿಯ ಉಪ ಆಡಳಿತ ನಿರ್ದೇಶಕಿ ಗೀತಾ ಗೋಪಿನಾಥ್ ಮತ್ತು ಐರೋಪ್ಯ ಒಕ್ಕೂಟದ ಅಧ್ಯಕ್ಷೆ ಉರ್ಸುಲಾ ವಾನ್ ಡೆರ್ ಲೆಯೆನ್‌ರೊಂದಿಗೂ ಸುದೀರ್ಘ ಮಾತುಕತೆ ನಡೆದರು.

### ಮೋದಿ ಭೇಟಿ ಅತ್ಯಂತ ಮಹತ್ವದ್ದು

ಜಿ-20 ಸಭೆಯಲ್ಲಿ ಪ್ರಧಾನಿ ಮೋದಿ ಭೇಟಿ ತನ್ನ ಪಾಲಿಗೆ ಬಲು ಮಹತ್ವದ್ದು. ಹಸಿವು ಮತ್ತು ಬಡತನ ನಿರ್ಮೂಲನೆಯಲ್ಲಿ ಭಾರತದ ಯಶೋಗಾಥೆಯನ್ನು ಮೋದಿಯವರು ನನಗೆ ವಿವರಿಸಿದರು. ನೂತನವಾದ ರಚನಾತ್ಮಕ ಉಪಕ್ರಮಗಳ ಬಗ್ಗೆ ಜಗತ್ತು ಭಾರತದಿಂದ ಕಲಿಯುವುದು ಬಹಳಷ್ಟಿದೆ ಎಂದು ಐಎಂಎಫ್ ಉಪ ಆಡಳಿತ ನಿರ್ದೇಶಕರಾದ ಭಾರತೀಯ ಮೂಲದ ಅರ್ಥಶಾಸ್ತ್ರಜ್ಞೆ ಗೀತಾ ಗೋಪಿನಾಥ್ ಹೇಳಿದ್ದಾರೆ. ಇದೆ ಸಂದರ್ಭದಲ್ಲಿ ಮೋದಿ ಅವರು ಭಾರತವು ಆಹಾರ ಭದ್ರತೆ ಹೆಚ್ಚಿಸಲು ಮತ್ತು ಬಡತನ ನಿರ್ಮೂಲನೆಗೆ ಕಟಿಬದ್ಧವಾಗಿದೆ. ನಮ್ಮ ಸಾಮೂಹಿಕ ಬಲವನ್ನು ಸಜ್ಜುಗೊಳಿಸಿ, ಸಂಪನ್ಮೂಲಗಳನ್ನು ಬಳಸಿಕೊಂಡು ಜಗತ್ತಿನ ಸಮಸ್ತರಿಗೂ ಭವ್ಯ ಭವಿಷ್ಯ ಕಲ್ಪಿಸುವುದು ನಮ್ಮ ಧ್ಯೇಯ ಮತ್ತು ಇದೇ ನಮ್ಮ ಯಶಸ್ಸಿನ ಸೋಪಾನ ಎಂದು ತಿಳಿಸಿದರು.

### ಇಟಲಿ ಜತೆ ರಕ್ಷಣಾ ಯೋಜನೆ

ಪ್ರಧಾನಿ ಶ್ರೀ ನರೇಂದ್ರ ಮೋದಿ ಹಾಗೂ ಇಟಲಿ ಪ್ರಧಾನಿ ಶ್ರೀ ಜಾರ್ಜಿಯಾ ಮೆಲನಿ ನಡೆಸಿದ ಮಾತುಕತೆಯಲ್ಲಿ ಉಭಯ ದೇಶಗಳ ನಡುವೆ ಪಂಚ ವಾರ್ಷಿಕ ರಕ್ಷಣಾ ಕಾರ್ಯ ಯೋಜನೆ ರೂಪಿಸಲು ಒಪ್ಪಲಾಗಿದೆ. ಆರ್ಥಿಕ ಸಹಕಾರ ಮತ್ತು ಹೂಡಿಕೆ, ಬಾಹ್ಯಾಕಾಶ, ಇಂಧನ, ಭದ್ರತೆ ಮತ್ತು ವಲಸೆ ಸಹಿತ 10 ಪ್ರಮುಖ ಕ್ಷೇತ್ರಗಳಲ್ಲಿ 2025-29ರ ಅವಧಿಯಲ್ಲಿ ಮುನ್ನಡೆ ಸಾಧಿಸಲು ಇರುವ ಮಾರ್ಗೋಪಾಯ, ಸಂಸ್ಕೃತಿ, ಶಿಕ್ಷಣ ಮತ್ತಿತರ ರಂಗಗಳಲ್ಲಿ ಸಹಕಾರಕ್ಕೆ ಮತ್ತಷ್ಟು ಉತ್ತೇಜನ ನೀಡುವ ಬಗ್ಗೆ ಉಭಯ ನಾಯಕರು ಚರ್ಚಿಸಿದರು. ಉಭಯ ದೇಶಗಳ ನಡುವಿನ ಮುಕ್ತ ವಾಣಿಜ್ಯ ಒಡಂಬಡಿಕೆ ಹೊಸ ವರ್ಷದಲ್ಲಿ (ಎಫ್‌ಟಿಎ) ಸಂಧಾನವನ್ನು ಪುನರಾರಂಭಿಸುವುದಾಗಿ ಹೇಳಿದರು.

### ಇಂಡೋನೇಷ್ಯಾಕ್ಕೆ ಭಾರತದ ಬೆಂಬಲ

ಇಂಡೋನೇಷ್ಯಾ ಅಧ್ಯಕ್ಷ ಪ್ರಬೊವೊ ಸುಬಿಯಾಂತೊರನ್ನು ಭೇಟಿಯಾದ ಮೋದಿ, ಭದ್ರತೆ, ಸ್ವಾಸ್ಥ್ಯ ರಂಗಗಳಲ್ಲಿ ಸಹಕಾರದ ಕೊಂಡಿ ಬಲಪಡಿಸುವ ಬಗ್ಗೆ ಚರ್ಚಿಸಿದರು. ಭಾರತ




–ಇಂಡೋನೇಷ್ಯಾಗಳು ಈಗಾಗಲೇ ವಿವಿಧ ರಂಗಗಳಲ್ಲಿ ಹೊಂದಿರುವ ಸಮಗ್ರ ವ್ಯೂಹಾತ್ಮಕ ಪಾಲುದಾರಿಕೆಯನ್ನು ಮತ್ತಷ್ಟು ಬಲಪಡಿಸುವುದು, ಜತೆಗೆ ಹೊಸ ರಂಗಗಳಿಗೂ ಪಾಲುದಾರಿಕೆ ವಿಸ್ತರಣೆ ಬಗ್ಗೆ ಚರ್ಚಿಸಿದರು. ಉಭಯ ರಾಷ್ಟ್ರಗಳ ಸ್ನೇಹ ಬಾಂಧವ್ಯಗಳಿಗೆ 75 ವರ್ಷ ತುಂಬಿದ ಪ್ರಯುಕ್ತ ಅಧ್ಯಕ್ಷ ಪ್ರಬೊವೊ ಅವರನ್ನು ಪ್ರಧಾನಿ ಮೋದಿ ಅಭಿನಂದಿಸಿದರು.

### ಪೋರ್ಚುಗಲ್‌ನೊಂದಿಗೆ ಆರ್ಥಿಕ ಸಹಕಾರದ ಬಲವರ್ಧನೆ

ಉಭಯ ರಾಷ್ಟ್ರಗಳ ಆರ್ಥಿಕ ಸಹಕಾರ ಕೊಂಡಿಗಳನ್ನು ಮತ್ತಷ್ಟು ಬಲಪಡಿಸುವ ವಿಚಾರವಾಗಿ ಪ್ರಧಾನಿ ಮೋದಿ ಅವರು ಪೋರ್ಚುಗಲ್ ಪ್ರಧಾನಿ ಲೂಯಿಸ್ ಮೊಂಟೆನ ಜತೆ ಚರ್ಚಿಸಿದರು. ನವೀಕರಣಶೀಲ ಇಂಧನ, ಹಸಿರು ಹೈಡ್ರೋಜನ್ ರಂಗಗಳಲ್ಲಿ ಸಹಕಾರಕ್ಕೆ ತುಂಬು ಅವಕಾಶಗಳಿವೆ. ಬಲವಾದ ರಕ್ಷಣಾ ಬಾಂಧವ್ಯಗಳು, ಜನ-ಜನ ಸಂಪರ್ಕ ಮತ್ತಿತರ ವಿಚಾರವಾಗಿಯೂ ಉಭಯನಾಯಕರು ಚರ್ಚಿಸಿದರು.

### ಆಸ್ಟ್ರೇಲಿಯಾ ಜೊತೆ ಇಂಧನ ಒಪ್ಪಂದ

ಭಾರತ ಮತ್ತು ಆಸ್ಟ್ರೇಲಿಯಾ ಮಹತ್ವಾಕಾಂಕ್ಷೆಯ ನವೀಕರಿಸಬಹುದಾದ ಇಂಧನ ಪಾಲುದಾರಿಕೆಗೆ ಸಹಿ ಹಾಕಿದ್ದು, ಇದರಿಂದ ಸಮಗ್ರ ಆರ್ಥಿಕ ಸಹಕಾರ ಒಪ್ಪಂದದ ಕುರಿತ ಮಾತುಕತೆ ಮುನ್ನಡೆಯತ್ತ ಸಾಗಿದೆ. ಪ್ರಧಾನಿ ನರೇಂದ್ರ ಮೋದಿ ಮತ್ತು ಆಸ್ಟ್ರೇಲಿಯಾದ ಪ್ರಧಾನಿ ಆಂಥೋನಿ ಅಲ್ಬನೀಸ್ ಇಬ್ಬರೂ ಮಾತುಕತೆ ನಡೆಸಿದ್ದು, ಎರಡೂ ದೇಶಗಳ ಭದ್ರತೆಗೆ ಮತ್ತು ಪ್ರಾದೇಶಿಕ ಶಾಂತಿಗೆ ಪ್ರಮುಖ ಕೊಡುಗೆ ನೀಡಲು ರಕ್ಷಣಾ ಮತ್ತು ಭದ್ರತಾ ಸಹಯೋಗದ ದೀರ್ಘಕಾಲೀನ ದೃಷ್ಟಿಕೋನವನ್ನು ನಾಯಕರು ಹೊಂದಿರುವುದಾಗಿ ಜಂಟಿ ಹೇಳಿಕೆಯಲ್ಲಿ ತಿಳಿಸಿದರು. ಪರಸ್ಪರ ಲಾಭದಾಯಕ ಸಮಗ್ರ ಆರ್ಥಿಕ ಸಹಕಾರ ಒಪ್ಪಂದ (ಸಿಇಸಿಎ) ದ ಬಗ್ಗೆ ಉಭಯ ಪ್ರಧಾನಿಗಳು ಆಸಕ್ತಿ ವ್ಯಕ್ತಪಡಿಸಿದರು. ನವೀಕರಿಸಬಹುದಾದ ಇಂಧನ ಪಾಲುದಾರಿಕೆ (ಆರ್‌ಇಪಿ) ಯು ಸೌರಶಕ್ತಿ, ಹಸಿರು ಜಲಜನಕ, ಇಂಧನ ಸಂಗ್ರಹಣೆ, ರಕ್ಷಣಾ ಉದ್ಯಮ, ನಿರ್ಣಾಯಕ ಖನಿಜಗಳು, ಹಡಗು ನಿರ್ಮಾಣ, ಬಾಹ್ಯಾಕಾಶ ಮತ್ತು ಕ್ರೀಡೆಗಳಂತಹ ಕ್ಷೇತ್ರಗಳಲ್ಲಿ ಸಂಬಂಧಿತ ಯೋಜನೆಗಳು ಮತ್ತು ಸಂಬಂಧಿತ ಕ್ಷೇತ್ರಗಳಲ್ಲಿ ಹೂಡಿಕೆಗಳಂತಹ ಹೊಸ ಸಾಧ್ಯತೆಗಳ ಬಗ್ಗೆ ಎರಡೂ ದೇಶಗಳು ಕೆಲಸ ಮಾಡುತ್ತಿದೆ ಎಂದು ಉಭಯ ನಾಯಕರು ತಿಳಿಸಿದ್ದಾರೆ.

### ಹಲವು ದೇಶಗಳೊಂದಿಗೆ ಪರಿಣಾಮಕಾರಿ ಸಂವಾದ


ಈಜಿಪ್ಟ್ ಅಧ್ಯಕ್ಷ ಅಬ್ದಲ್ ಫತ್ತಾಹ್ ಜತೆಗಿನ ಭೇಟಿ ಅತ್ಯಂತ ಆರೋಗ್ಯಕರ ಮತ್ತು ದಕ್ಷಿಣ ಕೊರಿಯಾ ಅಧ್ಯಕ್ಷ ಯೂನ್ ಸುಕ್ ಯೋಲ್ ಜತೆ ಆಹ್ಲಾದಕರ ಸಂವಾದ ನಡೆಯಿತು. ಜಾಗತಿಕ ಒಳಿತಿಗಾಗಿ ಭಾರತವು ಯುರೋಪ್ ಒಕ್ಕೂಟದ ಜತೆಗೂಡಿ ದುಡಿಯಲಿದೆ ಎಂದು ಯುರೋಪಿಯನ್ ಒಕ್ಕೂಟದ ಕುಶನ್ ಅಧ್ಯಕ್ಷ ಉರ್ಸುಲಾ ವೊನ್ ಡರ್ ಲಿಯೆನ್‌ರನ್ನು ಭೇಟಿಯಾದ ನಂತರ ಪ್ರಧಾನಿ ಮೋದಿ ತಿಳಿಸಿದರು.

### ಮೋದಿಗೆ 19 ದೇಶಗಳ ಪ್ರಶಸ್ತಿ

ಗಯಾನ ಮತ್ತು ನೈಜೀರಿಯಾ ದೇಶಗಳು ತಮ್ಮ ದೇಶದ ಅತ್ಯುನ್ನ ಪ್ರಶಸ್ತಿ ಘೋಷಿಸಿರುವ ಬೆನ್ನಲೆ ಡೊಮಿನಿಕಾ ದೇಶದ ಅತ್ಯುನ್ನತ ಗೌರವ ಡೊಮಿನಿಕಾ ಅವಾರ್ಡ್ ಆಫ್ ಆನರ್, ಬಾರ್ಬಡೋಸ್ ಕೂಡ ಪ್ರತ್ತಿತ ಆರ್ಡರ್ ಆಫ್ ಫ್ರೀಡಮ್ ಆಫ್ ಬಾರ್ಬಡೋಸ್ ಗೌರವವನ್ನು ಘೋಷಣೆ ಮಾಡಿದವು. ಈ ಗೌರವಗಳೊಂದಿಗೆ ಪ್ರಧಾನಿ ಮೋದಿ ಅವರಿಗೆ ನೀಡಲಾದ ಅಂತಾರಾಷ್ಟ್ರೀಯ ಗೌರವಗಳ ಸಂಖ್ಯೆ 19ಕ್ಕೆ ಏರಿದಂತಾಗಿದೆ. ಭಾರತದ ಮಾನವೀಯತೆ, ಕೋವಿಡ್ ಸಮಯದಲ್ಲಿನ ಕೆಲಸ, ಶಾಂತಿ ಸ್ಥಾಪನೆ, ವಿದೇಶಾಂಗ ನೀತಿ ಸೇರಿದಂತೆ ಅನೇಕ ಯಶಸ್ವಿ ಜವಾಬ್ದಾರಿ ನಿರ್ವಹಣೆಗೆ ನಮ್ಮ ಪ್ರಧಾನಿ ಮೋದಿ ಅವರು ಗೌರವಗಳಿಗೆ ಭಾಜನರಾಗಿದ್ದು, ದೇಶದ ಗೌರವವನ್ನು ಉನ್ನತ ಸ್ಥಾನಕ್ಕೆ ಏರಿಸಿದ್ದಾರೆ.

### ವಿದೇಶಿ ಪ್ರವಾಸದ ವಿಶೇಷತೆಗಳು

ಬ್ರೆಜಿಲ್‌ನಲ್ಲಿ ಜೋನಸ್ ಮಾಸೆಟ್ಟಿ ಮತ್ತು ತಂಡದಿಂದ ರಾಮಾಯಣದ ಪ್ರಸ್ತುತಿ, ಸಂಸ್ಕೃತದಲ್ಲಿ ವೇದಮಂತ್ರಗಳ ಮೂಲಕ ಮೋದಿಯವರಿಗೆ ಕೋರಿದ ಸ್ವಾಗತ, ಮೋದಿಯವರಿಂದ ನೈಜೀರಿಯಾದ ಅಧ್ಯಕ್ಷ ಬೊಲ ಅಹಮದ್ ತಿನುಬು ಅವರಿಗೆ ಮಹಾರಾಷ್ಟ್ರದ ಕೊಲ್ಹಾಪುರ'ದ ಸಾಂಪ್ರದಾಯಿಕ ಕರಕುಶಲಕರ್ಮಿಗಳು ತಯಾರಿಸಿದ ಶುದ್ಧ ಬೆಳ್ಳಿಯ ಪಂಚಾಮೃತ ಕಲಶದ ಉಡುಗೊರೆ, ಬ್ರೆಜಿಲ್ ಭೇಟಿಯ ಸಮಯದಲ್ಲಿ ಪ್ರಧಾನಿ ಶ್ರೀ ಮೋದಿ ಮತ್ತು ವೇದಾಂತ ಶಿಕ್ಷಕ ಶ್ರೀ ವಿಶ್ವನಾಥ್ ಮಾಸೆಟ್ಟಿ ನಡುವಿನ ಭೇಟಿಗಳು ಪ್ರವಾಸದ ವಿಶೇಷತೆಗಳು




# ಸಂವಿಧಾನ ತಿದ್ದುಪಡಿ – ಕಾಂಗ್ರೆಸ್ ಮತ್ತು ಬಿಜೆಪಿ



**ಸಂವಿಧಾನ ಎಂಬ ಪ್ರಗತಿಯ ತೇರನ್ನು ಇಲ್ಲಿಯವರೆಗೆ ಎಳೆದು ತಂದಿದ್ದೇವೆ. ಸಾಧ್ಯವಾದರೆ ಮುಂದಕ್ಕೆ ತಳ್ಳಿ, ಆದರೆ ಹಿಂದಕ್ಕೆ ತಳ್ಳುವ ಕೆಲಸವನ್ನು ದಯವಿಟ್ಟು ಯಾರೂ ಮಾಡಬೇಡಿ.**

**– ಡಾ. ಬಾಬಾಸಾಹೇಬ್ ಅಂಬೇಡ್ಕರ್**

ಸಂವಿಧಾನದ ತಿದ್ದುಪಡಿಯ ಬಗ್ಗೆ ಆಗಾಗ್ಗೆ ವಾದ ವಿವಾದಗಳು ನಡೆಯುತ್ತಲೇ ಇರುತ್ತವೆ. ಸ್ವಹಿತ ದೃಷ್ಟಿಯಿಂದ ಅತಿ ಹೆಚ್ಚು ಬಾರಿ ತಿದ್ದುಪಡಿ ಮಾಡಿದ ಕಾಂಗ್ರೆಸ್ ಸಹ ಬಿಜೆಪಿಯನ್ನು ಸಂವಿಧಾನ ತಿದ್ದುಪಡಿಯ ಬಗ್ಗೆ ಆರೋಪಿ ಸ್ಥಾನದಲ್ಲಿ ನಿಲ್ಲಿಸುವ ವ್ಯರ್ಥ ಪ್ರಯತ್ನವನ್ನು ಮಾಡುತ್ತಲೇ ಇದೆ. ಇಂತಹ ಸಂದರ್ಭದಲ್ಲಿ ಬಿಜೆಪಿಯ ಪ್ರತೀ ಕಾರ್ಯಕರ್ತರೂ ಸಂವಿಧಾನ ತಿದ್ದುಪಡಿಯ ಇತಿಹಾಸದ ಹಿನ್ನೋಟವನ್ನು ಅರಿತು ಕಾಂಗ್ರೆಸ್‌ನ ಆರೋಪಗಳಿಗೆ ಸಮರ್ಥವಾದ ಉತ್ತರವನ್ನು ನೀಡಬೇಕೆಂಬ ಉದ್ದೇಶದಿಂದ ನವಂಬರ್ 26 ರಂದು ಸಂವಿಧಾನ ಸಮರ್ಪಣಾ ದಿನದ ಸಂದರ್ಭದಲ್ಲಿ ಈ ಮಾಹಿತಿಯನ್ನು ನೀಡಲಾಗಿದೆ.

**ಸಂವಿಧಾನದ ತಿದ್ದುಪಡಿಗಳು ಯಾರ ಕಾಲದಲ್ಲಿ ಎಷ್ಟು?**

**ಈವರೆಗಿನ ತಿದ್ದುಪಡಿಗಳು : 106**

| ಕಾಂಗ್ರೆಸ್ ಸರ್ಕಾರ | ಕಾಂಗ್ರೆಸ್ಸೇತರ ಸರ್ಕಾರ |
|---|---|
| 75 | 31 |



| ಕಾಂಗ್ರೆಸ್ ಸರ್ಕಾರದ ಪ್ರಧಾನ ಮಂತ್ರಿಗಳು | ತಿದ್ದುಪಡಿ ಸಂಖ್ಯೆ |
|---|---|
| 1 ಶ್ರೀ ಜವಾಹರ್ ಲಾಲ್ ನೆಹರು | 16 |
| 2 ಶ್ರೀಮತಿ ಇಂದಿರಾಗಾಂಧಿ | 32 |
| 3 ಶ್ರೀ ರಾಜೀವ್ ಗಾಂಧಿ | 10 |
| 4 ಶ್ರೀ ಗುಲ್ಜಾರಿಲಾಲ್ ನಂದಾ | 0 |
| 5 ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿ | 1 |
| 6 ಶ್ರೀ ಪಿ.ವಿ. ನರಸಿಂಹರಾವ್ | 10 |
| 7 ಶ್ರೀ ಮನಮೋಹನ್ ಸಿಂಗ್ | 6 |
| ಒಟ್ಟು | 75 |

**ಸಂವಿಧಾನ ಸಮರ್ಪಣೆ – 1949 ನವಂಬರ್ 26**
**ಸಂವಿಧಾನ ಅಂಗೀಕಾರ – 1950 ಜನವರಿ 26**

| ಕಾಂಗ್ರೆಸ್ಸೇತರ ಸರ್ಕಾರದ ಪ್ರಧಾನ ಮಂತ್ರಿಗಳು | ತಿದ್ದುಪಡಿ ಸಂಖ್ಯೆ |
|---|---|
| 1 ಶ್ರೀ ಮೂರಾರ್ಜಿ ದೇಸಾಯಿ | 2 |
| 2 ಶ್ರೀ ಚರಣ್ ಸಿಂಗ್ | 0 |
| 3 ಶ್ರೀ ವಿ.ಪಿ. ಸಿಂಗ್ | 6 |
| 4 ಶ್ರೀ ಚಂದ್ರಶೇಖರ್ | 1 |
| 5 ಶ್ರೀ ಹೆಚ್.ಡಿ. ದೇವೇಗೌಡ | 0 |
| 6 ಶ್ರೀ ಐ.ಕೆ. ಗುಜ್ರಾಲ್ | 0 |
| 7 ಶ್ರೀ ಅಟಲ್ ಬಿಹಾರಿ ವಾಜಪೇಯಿ | 14 |
| 8 ಶ್ರೀ ನರೇಂದ್ರ ಮೋದಿ | 8 |
| ಒಟ್ಟು | 31 |

# ಕಾಂಗ್ರೆಸ್ ಅಧಿಕಾರದ ಅವಧಿಯಲ್ಲಿ ಸಂವಿಧಾನಕ್ಕೆ ಅತಿರೇಕದ ತಿದ್ದುಪಡಿಗಳು

### ನೆಹರೂ ಕಾಲದಲ್ಲಿ...

- ತಮ್ಮ ಸರ್ಕಾರದ ಕುರಿತಾದ ಟೀಕೆಗಳನ್ನು ನೆಹರೂ ಸಹಿಸದ ಕಾರಣ ಸಂವಿಧಾನಕ್ಕೆ ಮೊದಲ ತಿದ್ದುಪಡಿ – 1951 ಜೂನ್, ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ನಿರ್ಬಂಧ, Article 19(1) Reasonable Restrictions on Freedom of Speech.

### ಶ್ರೀಮತಿ ಇಂದಿರಾ ಗಾಂಧಿ ಕಾಲದಲ್ಲಿ...

- ಜೂನ್ 12 , 1975 ನ್ಯಾ ಜಗಮೋಹನ್ ಲಾಲ್ ಸಿನ್ಹಾ–ಅಲಹಾಬಾದ್ ಹೈಕೋರ್ಟ್–ಐತಿಹಾಸಿಕ ತೀರ್ಪು–'ಇಂದಿರಾ ಆಯ್ಕೆ ಅಸಿಂಧು – ಆರು ವರ್ಷ ಚುನಾವಣೆ ಸ್ಪರ್ಧೆಗೆ ನಿಷೇಧ.
- ಜೂನ್ 24 ಸುಪ್ರೀಂಕೋರ್ಟ್ ಮೇಲ್ಮನವಿ ವಿಚಾರಣೆ – ನ್ಯಾ. ವಿ.ಆರ್. ಕೃಷ್ಣ ಅಯ್ಯರ್ ತೀರ್ಪು 'ಷರತ್ತು ಬದ್ಧ ತಡೆ, ಸಂಸತ್ತಿನ ಚರ್ಚೆಯಲ್ಲಿ ಭಾಗವಹಿಸುವಂತಿಲ್ಲ, ಮತದಾನ ಪ್ರಕ್ರಿಯೆಯಿಂದ ಹೊರಗಿರಬೇಕು. ಕೇಸು ಉನ್ನತ ಪೀಠಕ್ಕೆ ವರ್ಗಾವಣೆ'. ಜೂನ್ 25 ಮಧ್ಯರಾತ್ರಿ ತುರ್ತುಪರಿಸ್ಥಿತಿ ಘೋಷಣೆ – ನೂರಾರು ಪ್ರತಿಪಕ್ಷದ ನಾಯಕರ ಬಂಧನ
- ಸಂವಿಧಾನಕ್ಕೆ 38 ನೇ ತಿದ್ದುಪಡಿ ; 24 ಜುಲೈ 1975 – ರಾಷ್ಟ್ರಪತಿಗಳ ಆದೇಶವನ್ನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸುವಂತಿಲ್ಲ.
- ಸಂವಿಧಾನಕ್ಕೆ 39ನೇ ತಿದ್ದುಪಡಿ ; ಆಗಸ್ಟ್ 5 , 1975 – ಪ್ರಧಾನಿ, ಸ್ಪೀಕರ್, ಉಪರಾಷ್ಟ್ರಪತಿಗಳ ಬಗ್ಗೆ ನ್ಯಾಯಾಲಯಗಳಿಗೆ ವಿಚಾರಣೆ ನಡೆಸುವ ಅವಕಾಶ ರದ್ದು, ಅಗತ್ಯವಿದ್ದರೆ ಸಂಸತ್ತು ರಚಿಸುವ ತಂಡದಿಂದ ವಿಚಾರಣೆ, ಚುನಾವಣೆಗೆ ಸಂಬಂಧಿಸಿದ ಎಲ್ಲ ಕಾನೂನುಗಳು 9ನೇ ಪರಿಚ್ಛೇದಕ್ಕೆ ಸೇರ್ಪಡೆ, ನ್ಯಾ. ಜಗಮೋಹನ್ ಲಾಲ್ ಸಿನ್ಹಾ ತೀರ್ಪನ್ನು ಸಂವಿಧಾನ ತಿದ್ದುಪಡಿ ಮೂಲಕ ನಿಷ್ಕ್ರಿಯ.
- ಸಂವಿಧಾನದ 40ನೇ ತಿದ್ದುಪಡಿ – ಮಾಧ್ಯಮಗಳ ಮೇಲೆ ನಿರ್ಬಂಧ
- ಸಂವಿಧಾನಕ್ಕೆ 41ನೇ ತಿದ್ದುಪಡಿ, ಆಗಸ್ಟ್ 9, 1975 – ಪ್ರಧಾನಿ, ರಾಷ್ಟ್ರಪತಿ, ಸ್ಪೀಕರ್, ಉಪರಾಷ್ಟ್ರಪತಿಗಳು ಹುದ್ದೆಗೆ ಬರುವ ಮೊದಲಿನ ಕೇಸುಗಳ ಬಗ್ಗೆಯೂ ನ್ಯಾಯಾಲಯ ವಿಚಾರಣೆ ನಡೆಸುವಂತಿಲ್ಲ.
- ಸಂವಿಧಾನಕ್ಕೆ 42ನೇ ತಿದ್ದುಪಡಿ, ಡಿಸೆಂಬರ್ 18, 1975 – ಸಂವಿಧಾನಕ್ಕೆ ಮಾಡಲಾದ ಯಾವುದೇ ತಿದ್ದುಪಡಿಯನ್ನು ನ್ಯಾಯಾಲಯಗಳಲ್ಲಿ ಪ್ರಶ್ನಿಸುವಂತಿಲ್ಲ. ಭಾರತದ ಬಗ್ಗೆ ಇದ್ದ ವಿವರಣೆ – ಸಾರ್ವಭೌಮ ಗಣರಾಜ್ಯ – 'ಸಾರ್ವಭೌಮ ಸಮಾಜವಾದಿ, ಜಾತ್ಯತೀತ, ಪ್ರಜಾಸತ್ತಾತ್ಮಕ ಗಣರಾಜ್ಯ' ಎಂದು ಬದಲಾವಣೆ. (1946 ರಲ್ಲಿ ಸಂವಿಧಾನ ಸಭೆಯ ಚರ್ಚೆಗಳ ಸಂದರ್ಭದಲ್ಲಿ ಕೆ.ಟಿ. ಷಾ ಭಾರತವನ್ನು 'ಜಾತ್ಯತೀತ, ಸಂಯುಕ್ತ, ಸಮಾಜವಾದಿ ರಾಷ್ಟ್ರ' ಎಂದು ಘೋಷಿಸಲು ತಿದ್ದುಪಡಿ ಸೂಚಿಸಿದ್ದರು. ಆದರೆ ಡಾ. ಬಿ.ಆರ್. ಅಂಬೇಡ್ಕರ್ ರವರು ಈ ತಿದ್ದುಪಡಿಯನ್ನು ಒಪ್ಪಿರಲಿಲ್ಲ.)
- ತಮ್ಮ ಕುರ್ಚಿ ಉಳಿಸಿಕೊಳ್ಳಲು ಮಾಡಿದ ಈ ತಿದ್ದುಪಡಿಗಳಿಂದ ಡಾ. ಬಿ.ಆರ್. ಅಂಬೇಡ್ಕರ್ ರವರ ಮೂಲ ಆಶಯಗಳು ಮಣ್ಣುಪಾಲು, ನ್ಯಾಯಾಂಗದ ಮೇಲೆ ಶಾಸಕಾಂಗ ಹಿಡಿತ, ಸಂವಿಧಾನ ಭಾರತದ ನಾಗರಿಕರಿಗೆ ಕೊಟ್ಟಿದ್ದ ಮೂಲಭೂತ ಹಕ್ಕುಗಳನ್ನು ಕಸಿಯುವ ಮೂಲಕ ಪ್ರಜಾಪ್ರಭುತ್ವದ ಮೌಲ್ಯಗಳ ಹರಣ.

## ಕಾಂಗ್ರೆಸ್‌ನ ಸಂವಿಧಾನ ದುರುಪಯೋಗಕ್ಕೆ ಕೆಲವು ಉದಾಹರಣೆಗಳು


- ಚುನಾಯಿತ ರಾಜ್ಯ ಸರ್ಕಾರಗಳನ್ನು ಕಿತ್ತೊಗೆಯಲು 356 ನೇ ವಿಧಿಯ ದುರುಪಯೋಗದ ವಿಧಿಯದಲ್ಲಿ ಕಾಂಗ್ರೆಸ್ ಜಾಗತಿಕ ದಾಖಲೆ ಸೃಷ್ಟಿಸಿದೆ. ಕಾಂಗ್ರೆಸ್ 90ಕ್ಕೂ ಹೆಚ್ಚು ಚುನಾಯಿತ ರಾಜ್ಯ ಸರ್ಕಾರಗಳನ್ನು ವಜಾಮಾಡಿದೆ. 20 ಜೂನ್ 1951 ಪಂಜಾಬ್ ಸರ್ಕಾರವನ್ನು ವಜಾ ಮಾಡಿ ರಾಷ್ಟ್ರಪತಿ ಆಳ್ವಿಕೆ ಹೇರಿದ್ದ ಕಾಂಗ್ರೆಸ್.
- 1957 – ಕೇರಳದಲ್ಲಿ ಮೊದಲ ಕಮ್ಯೂನಿಸ್ಟ್ ಸರ್ಕಾರ, ಇ.ಎಂ.ಎಸ್. ನಂಬೂದರಿಪಾದ್ ಮುಖ್ಯಮಂತ್ರಿ . ಕೆಲವೇ ತಿಂಗಳಲ್ಲಿ ಸರ್ಕಾರ ವಜಾ. 27 ಕಾಂಗ್ರೆಸ್ಸೇತರ ಸರ್ಕಾರಗಳನ್ನು ವಜಾ ಮಾಡಿದ ಶ್ರೇಯಸ್ಸು ಶ್ರೀಮತಿ ಇಂದಿರಾ ಗಾಂಧಿ ಅವರದ್ದು!

**1994 ರಲ್ಲಿ S R Bommai vs Union of India & ಐತಿಹಾಸಿಕ ಸುಪ್ರೀಂಕೋರ್ಟ್ ತೀರ್ಪು ಬಂದ ನಂತರ ಕಾಂಗ್ರೆಸ್ ತನ್ನ ಚಾಳಿ ಬಿಡಬೇಕಾಯಿತು .**



## ವಾಜಪೇಯಿ ಕಾಲದ ಸಂವಿಧಾನ ತಿದ್ದುಪಡಿಗಳು ( ಸಂವಿಧಾನ ತಿದ್ದುಪಡಿ 1979 ರಿಂದ 1992 )

- Extend reservation for SC and ST for another 10 years up to 2010 ( 25 Jan 2000 ).
- Implement Tenth Finance Commission report to simplify tax structures. ( 9 June 2000 ).
- Protect SC and ST reservation in filling back log vacancies ( 9 June 2000 ).
- Permit relaxation of qualifying marks and other criteria in reservation in promotion for SCs and STs candidates ( 8 September 2000 ).
- Exempt Arunachal Pradesh from reservation SCs in Panchayatraj institutions . ( 8 September 2000 ).
- Extend the usage of 1971national census population data for statewise distribution of parliamentary seats ( 21 February 2002 ).
- A technical amendment to protect Consequential seniority in case of promotions of SC and ST employees ( 4 Jan 2002 ).
- Provides Right to Education until the age of 14 . (12 December 2002).
- Extend the usage of 2001 national census population figures for statewide distribution of parliamentary seats ( 22 June 2003).
- To extend statutory cover for levy and utilisation of Service tax (15 Jan 2004).
- The National Commission For SC and ST was bifurcated into 2 separate commissions (28 September 2003) .
- Reservation in Assam Assembly relating to BoDoland Territory area. (28 September 2003).
- Restrict the size of council of minister's to 15% of legislative members and to strengthen Anti Defection laws ( 1 Jan 2004 ).
- Include Bodo, Dogri , Santali , Maithili as official languages ( 7 Jan 2004 ).



## ಪ್ರಧಾನಿ ಶ್ರೀ ನರೇಂದ್ರ ಮೋದಿ ರವರ ಆಡಳಿತಾವಧಿಯಲ್ಲಾದ ಸಂವಿಧಾನ ತಿದ್ದುಪಡಿಗಳು

### ( Amendments 99 to 106 )

99 Formation of a National Judicial Appointments Commission (13-April-2015).

100 Exchange of certain Enclave territories with Bangladesh (31-July-2015).

101 Introduced the Goods and Services Tax - GST (01-July-2017).


102 Constitutional Status to National Commission for Backward class (11-August-2018).

103 10% Reservation for EWS (12-Jan-2019).

104 Extension of SC / ST reservation another 10 years up to 2030. Removed reservation for Anglo Indians (25-Jan-2020).

105 To restore the power of state governments to identify OBCs (10-May-2021).

106 To reserve 1/3 seats in Lokasabha and Assembly for women (28-Sept-2023).




# ಗೋವಿಂದ ಪೈ ಎಂಬ ಸರ್ವಋತು ಬಂದರು

**ಆಸಕ್ತ ಮನಸ್ಸುಗಳಿಂದ ಸಾಕಾರವಾದ ಅದ್ಭುತವಾದ ಸಾರ್ಥಕ ಕಾರ್ಯ ಗೋವಿಂದಪೈ ಸಂಶೋಧನಾ ಸಂಪುಟ**

ಸ್ವಾತಂತ್ರ್ಯದ ಅಮೃತ ಮಹೋತ್ಸವದ ಹೊತ್ತಲ್ಲಿ ಕರ್ನಾಟಕದಲ್ಲಿ ಕವಿಗಳ ಬಗ್ಗೆ ಗೌರವ, ಸಂಸ್ಕೃತಿಯ ಬಗ್ಗೆ ಆಸ್ಥೆ ಇರುವ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದಿತು. ಗೋವಿಂದ ಪೈ ಸಂಶೋಧನಾ ಕೇಂದ್ರದ ಆಡಳಿತಾಧಿಕಾರಿಯಾದ ಡಾ. ಜಗದೀಶ್ ಶೆಟ್ಟಿ ಅವರಿಗೆ ಗೋವಿಂದ ಪೈಗಳ ಸಮಗ್ರ ಸಂಪುಟದ ಮರು ಮುದ್ರಣ ಮಾಡಬೇಕೆಂಬ ನಿಟ್ಟಿನಲ್ಲಿ ಸರ್ಕಾರದ ಅನುದಾನಕ್ಕಾಗಿ ಅವರ ಶಿಷ್ಯರಾದ ಹಾಗೂ ಬಿಜೆಪಿಯ ಸ್ಥಳೀಯ ಕಾರ್ಯಕರ್ತರಾದ ಅಜಿತ್ ಹೆರಂಜೆ ಅವರನ್ನು ಸಂಪರ್ಕಿಸಿದರು. ಆ ಹೊತ್ತಿಗೆ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಯ ಬಗ್ಗೆ ಅಭಿಮಾನವಿದ್ದ ಸಚಿವ ಶ್ರೀ ಸಿ.ಟಿ ರವಿಯವರು ಬೇರೆ ಇಲಾಖೆಯ ಹೊಣೆ ಹೊತ್ತುಕೊಂಡಿದ್ದರು. ಮುಂದೆ ಶ್ರೀ ವಿ. ಸುನಿಲ್ ಕುಮಾರ್ ಅವರು ಸಚಿವರಾದಾಗ ಸಮಗ್ರ ಪ್ರಕಟಣೆಯ ಕಾರ್ಯಗಳು ಪುನರಾರಂಭವಾಯಿತು. ಬಿಜೆಪಿಯ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿಗಳಾದ ಕನ್ನಡಿಗ ಶ್ರೀ ಬಿ.ಎಲ್ ಸಂತೋಷ್ ಗೋವಿಂದ ಪೈಗಳ ಪುಸ್ತಕಗಳನ್ನು ಓದಿದ್ದರು. ಈಗ ಅವರ ಯಾವ ಪುಸ್ತಕಗಳೂ ಲಭ್ಯವಿಲ್ಲ ಎಂದು ತಿಳಿದಾಗ ಸರ್ಕಾರಕ್ಕೆ ಕ್ರಮ ಕೈಗೊಳ್ಳಬೇಕೆಂದು ತಿಳಿಸಿ ಸಂಬಂಧಪಟ್ಟವರಿಗೆ ಅಗತ್ಯ ಸಲಹೆಗಳನ್ನು ನೀಡಿದರು. ಕೆಲವೇ ವಾರಗಳಲ್ಲಿ ಪ್ರಕ್ರಿಯೆಗಳು ಆರಂಭವಾದವು. 35 ಲಕ್ಷ ರೂಪಾಯಿಗಳ ಅನುದಾನವನ್ನು ರಾಜ್ಯ ಸರ್ಕಾರ ಉಡುಪಿಯ ಗೋವಿಂದ ಪೈ ಸಂಶೋಧನಾ ಕೇಂದ್ರಕ್ಕೆ ನೀಡಿತು.



**ಸಂತೋಷ್ ತಮ್ಮಯ್ಯ**
ಲೇಖಕರು

ಕವಿ ಭಾಷೆಗೆ ಅತೀತನಾದವನು, ಎಲ್ಲಾ ಕಟ್ಟುಪಾಡುಗಳಿಗೂ ನಿಲುಕದವನು ಎನ್ನಲಾಗುತ್ತದೆ. ಕವಿಗೆ ಇಡೀ ಲೋಕವೇ ತನ್ನದು. ಲೋಕವೆಲ್ಲವೂ ಕವಿಯದ್ದು. ಹಾಗಾಗಿ ಕನ್ನಡದ ಕವಿ ಎಂದರೂ ಅದು ಪೇಲವದ ಮಾತು. ರಾಜ್ಯದ ಕವಿ ಎಂದರೂ ಬಡಕಲು ಬಿರುದು. ರಾಷ್ಟ್ರಕವಿ ಎಂದರೂ ಯಾಕೋ ಸಾಲದು ಎಂಬ ಭಾವ. ವಿಶ್ವಕವಿ ಎಂದರೂ ರೂಪಕಗಳೆಲ್ಲವೂ ಸೋತವು ಎಂದೇ ಅನಿಸತೊಡಗುತ್ತವೆ. ಇಷ್ಟೆಲ್ಲಾ ಆದರೂ ಲೋಕದಲ್ಲಿ ಕವಿಯನ್ನು ಕಟ್ಟಿಹಾಕುವ ಪದ್ಧತಿ ಇದೆ. ನಮ್ಮ ಕವಿ ಎಂದಷ್ಟೇ, ನಮ್ಮನ್ನು ದಾಟಿದ ಕವಿ, ಲೋಕವನ್ನು ಆವರಿಸಿದ ಕವಿ ಎಂದು ವಿಶ್ಲೇಷಕ ಮನಸ್ಥಿತಿಗಳು ಕವಿಯನ್ನು ವರ್ಣಿಸಿವೆ. ಹಾಗಾಗಿ ರಾಷ್ಟ್ರಕವಿ ಎಂದಾಗ ಯಾವ ರಾಷ್ಟ್ರದ್ದು?, ಹಾಗಾದರೆ ರಾಜ್ಯ ಕವಿ ಅಲ್ಲವೇ?, ಜಾಗತಿಕ ಪೈಪೋಟಿಯಲ್ಲಿ ಸೆಣಸಿದವರೇ? ಮುಂತಾದ ಸಾಮಾನ್ಯರ ಅನಿಸಿಕೆಗಳು ಕೆಲಸ ಮಾಡಲಾರವು. ಅದು ಸಮಾಜ ಅದರ ಮಿತಿಯಲ್ಲಿ ಕೊಟ್ಟುಕೊಂಡ ಪಟ್ಟ ಮತ್ತು ಗೌರವ.

ರಾಷ್ಟ್ರಕವಿ ಎಂಬುದು ಅಂಥದ್ದೊಂದು ಪಟ್ಟ. ಭಾರತದ ಕೆಲವೇ ಕೆಲವು ಭಾಷೆಗಳಿಗೆ ಅಂಥ ಕವಿಗಳನ್ನು ಕರೆಯುವ ಭಾಗ್ಯ ದೊರಕಿದೆ. ಕನ್ನಡದ ಭಾಗ್ಯವೆಂದರೆ ಸ್ವಾತಂತ್ರ್ಯಪೂರ್ವದಲ್ಲೇ ಕನ್ನಡಕ್ಕೆ ರಾಷ್ಟ್ರಕವಿಯೊಬ್ಬರು ಸಿಕ್ಕಿದ್ದಾರೆ. ಇದುವರೆಗೆ ಕನ್ನಡಿಗರಿಗೆ ಮೂವರು ಮಹಾಕವಿಗಳನ್ನು ರಾಷ್ಟ್ರಕವಿಗಳೆಂದು ಕರೆಯುವ ಭಾಗ್ಯವೂ ದೊರೆತಿದೆ.

**ಮಂಜೇಶ್ವರ ಗೋವಿಂದ ಪೈಗಳು ಅವರಲ್ಲೊಬ್ಬರು. ಸ್ವಾತಂತ್ರ್ಯಪೂರ್ವದ ಮದ್ರಾಸ್ ಸರ್ಕಾರ ಗೋವಿಂದ ಪೈಗಳಿಗೆ ರಾಷ್ಟ್ರಕವಿ ಬಿರುದನ್ನು ನೀಡಿತ್ತು.** ಆ ಸಂದರ್ಭವನ್ನು ನೆನೆದು ಮುಂದೆ ತಾನೂ ರಾಷ್ಟ್ರಕವಿಯಾದ ಕುವೆಂಪು ಅವರು ಬಣ್ಣಿಸಿದ್ದು ಹೀಗೆ:

**'ಅವರು ಬದುಕಿದುದೆಲ್ಲ ಮಹತ್ ಕವನಗಳೇ ಅಹುದು**
**ಅವರೇ ತಾವೊಂದು ಗೊಮ್ಮಟ ಸಮ ಮಹಾಕಾವ್ಯ'**

ಹೀಗೆಂದು ಉದಾರವಾಗಿ ನುಡಿದ ಕುವೆಂಪು ತಮ್ಮ ವ್ಯಕ್ತಿತ್ವದಿಂದ 'ರಾಷ್ಟ್ರಕವಿ' ಎನಿಸಿದ್ದರು. ಕುವೆಂಪು ತಮ್ಮ ಕವನಗಳ ಮೂಲಕ ಕನ್ನಡತನವನ್ನು ಮತ್ತು ಕನ್ನಡದ ಕೊಂಬೆಗಳನ್ನು ವಿಶ್ವಕ್ಕೆ ಪಸರಿಸಿದರೆ, ಗೋವಿಂದ ಪೈಗಳು ಕನ್ನಡದ ಬೇರಿಗೆ ನೀರೆರೆದು ಪೋಷಿಸಿದ್ದರು. ಆದರೆ ಕನ್ನಡದ ದುರಾದೃಷ್ಟವೆಂದರೆ ರಾಷ್ಟ್ರಕವಿ ಎಂದರೆ ಇಂದಿಗೂ ನಾಡಿಗೆ ಮಂಜೇಶ್ವರ ಗೋವಿಂದ ಪೈಗಳು ನೆನಪಾಗರು. ಕನ್ನಡ ಕಟ್ಟಿದ್ದರೂ ಗೋವಿಂದ ಪೈಗಳ ಪ್ರತಿಮೆಗಳು ರಾಜ್ಯದಲ್ಲಿಲ್ಲ. ಅವರ ಹೆಸರಿನ ರಸ್ತೆಗಳಿಲ್ಲ. ಸರ್ಕಾರಿ ಅನುದಾನ ಪಡೆಯುವ ಸಂಸ್ಥೆಗಳು ಪೈಗಳ ಹೆಸರಲ್ಲಿಲ್ಲ. ಗೋವಿಂದ ಪೈ ಜಯಂತಿಯಂದು ಯಾವ ರಾಜಕಾರಣಿಯೂ ಅವರನ್ನು ನೆನಪಿಸಿಕೊಳ್ಳುವುದಿಲ್ಲ. ಪಠ್ಯಪುಸ್ತಕದಲ್ಲಿ ರಾಷ್ಟ್ರಕವಿಗಳನ್ನು ಅಪಮಾನಿಸಲಾಗಿದೆ ಎನ್ನುವ ಕನ್ನಡಪರರಿಗೆ ಪೈಗಳ ಪಾಠ ಇದುವರೆಗಿನ ಪಠ್ಯಪುಸ್ತಕಗಳಲ್ಲಿರಲಿಲ್ಲ ಎಂದು ಕೋಪ ಬರಲಿಲ್ಲ. ಹಾಗಾದರೆ ರಾಷ್ಟ್ರಕವಿಗಳನ್ನೂ ರಾಜಕಾರಣಕ್ಕೆ ಕಟ್ಟಿಹಾಕುವ, ಫ್ಲೆಕ್ಸ್‌ಗಳಿಗೆ, ಜಾತಿ ಸಮಾವೇಶಗಳಿಗೆ ಸೀಮಿತ ಮಾಡುವ ಸಣ್ಣತನ ನಮ್ಮಲ್ಲಿದೆಯೇ? ಇಂದಿನ ಪರಿಸ್ಥಿತಿಯನ್ನು ನೋಡಿದರೆ ಹೌದು ಎಂದೇ ಎನಿಸುತ್ತದೆ. ಮದ್ರಾಸ್ ಸರ್ಕಾರ ಗೌರವಿಸಿದ ಕಾರಣಕ್ಕೋ ಅಥವಾ ಮಂಜೇಶ್ವರದವರೆಂಬ ಕಾರಣಕ್ಕೋ ಕನ್ನಡದ ಎಲ್ಲೆಗಳ ಅರಿವಿಲ್ಲದ ಅಧಿಕಾರಿಗಳ ಚಿತ್ತದ ಕಾರಣಕ್ಕೋ ಗೋವಿಂದ ಪೈಗಳು ಇಂದಿಗೂ ಕನ್ನಡ ಮನಸ್ಸುಗಳಿಗೆ ಪ್ರಸ್ತಾಪವಾಗುವ ಹೆಸರೆನಿಸಿಕೊಂಡಿಲ್ಲ. ಕನ್ನಡಕ್ಕೆ ಹಲವು ಭಾಗ್ಯಗಳಿದ್ದರೂ, ದುರದೃಷ್ಟವಶಾತ್ ಇದೊಂದು ದೌರ್ಭಾಗ್ಯ.

ಮಂಜೇಶ್ವರ ಗೋವಿಂದ ಪೈಗಳು 19ನೇ ಶತಮಾನದಲ್ಲಿ ಹುಟ್ಟಿದವರು. 19ನೇ ಶತಮಾನದ ಉತ್ತರಾರ್ಧ ಕನ್ನಡದ ಸಮೃದ್ಧಿಯ ಕಾಲ. ಖ್ಯಾತನಾಮ ಕವಿ-ಸಾಹಿತಿಗಳು, ಸಂಶೋಧಕರನೇಕರು ಹುಟ್ಟಿದ ಸಮಯ. ಆ ಹೊತ್ತಲ್ಲೇ ಮಂಗಳೂರಿನಲ್ಲಿ ಗೋವಿಂದ ಪೈಗಳು ಹುಟ್ಟಿದರು. ಮಂಗಳೂರಿನ ಸರ್ಕಾರಿ ಕಾಲೇಜಿನಲ್ಲಿ ವಿದ್ಯಾಭ್ಯಾಸ ನಡೆದರೂ ಪೈಗಳ ಸಾಹಿತ್ಯಕ್ಕೆ ಪ್ರೇರಣೆ ಒದಗಿಸಿದ್ದು ಯಕ್ಷಗಾನ, ಮರಾಠಿ ನಾಟಕಗಳು, ಮಾತೃಭಾಷೆ ಕೊಂಕಣಿ ಮತ್ತು ಬಾಸೆಲ್ ಮಿಶನಿನ ಗ್ರಂಥಾಲಯ. ಹೀಗೆ ತಮ್ಮ 17ನೇ ವಯಸ್ಸಿನಲ್ಲಿ ಸ್ಥಳೀಯ ಪತ್ರಿಕೆಗಳಲ್ಲಿ ಬರೆಯಲಾರಂಭಿಸಿದರು. ಮುಂದೆ ಮದ್ರಾಸಿನ ಕ್ರಿಶ್ಚಿಯನ್ ಕಾಲೇಜಿನ ವ್ಯಾಸಂಗದ ಅವಧಿಯಲ್ಲಿ ಗೋವಿಂದ ಪೈಗಳು ಬಹುಭಾಷಾ ಪ್ರವೀಣರಾಗಿ ಪಳಗಿದರು. ಹಲವು ಪತ್ರಿಕೆಗಳಲ್ಲಿ ಅವರ ಕವನ ಮತ್ತು ಸಂಶೋಧನಾ ಲೇಖನಗಳು ಪ್ರಕಟವಾಗಿ ಗೋವಿಂದ ಪೈ ಎಂದರೆ ಸಾಹಿತ್ಯ ಕ್ಷೇತ್ರ ಗುರುತಿಸುವಂತಾಯಿತು. ಗೋವಿಂದ ಪೈಗಳು ಮುಟ್ಟಿದ್ದೆಲ್ಲವೂ ಶ್ರೇಷ್ಠವೇ ಆಯಿತು. ವಿದ್ವಾಂಸರು ಗಣನೆಗೆ ತೆಗೆದುಕೊಳ್ಳದ ಸಂಗತಿಗಳೂ ಗೋವಿಂದ ಪೈಗಳ ಲೇಖನಿಯಿಂದ ಅಮೃತ ಸುರಿಸಿದವು.

ಬಾಲ್ಯದಿಂದಲೇ ಜಿಜ್ಞಾಸುಗಳಾಗಿದ್ದ ಗೋವಿಂದ ಪೈಗಳಿಗೆ ಪಂಜೆಯವರಂಥ ಮಹಾಕವಿಗಳು ಗುರುಗಳಾಗಿ ಸಿಕ್ಕಿದ್ದರು. ಒಮ್ಮೆ ಶಿಷ್ಯ ಗೋವಿಂದ ಪೈ ಗುರು ಪಂಜೆಯವರ ಬಳಿ ''ಪ್ರಾಸವನ್ನು ಬಿಟ್ಟರೆ ಹೇಗೆ?'' ಎಂದು ಕೇಳಿದರು. ಆದರೆ ಪ್ರಾಸವನ್ನೇ ಉಸಿರಾಡುತ್ತಿದ್ದ ಪಂಜೆ ಶಿಷ್ಯನೆಡೆಗೆ ಕುಹಕದ ನಗೆಯಾಡಿ ಮಾತನ್ನು ತೇಲಿಸಿದರು. ಆದರೆ ಹುಡುಗನಲ್ಲಿ ಪ್ರಾಸದ ಗುಂಗು ತಲೆಯಿಂದ ಸುಲಭವಾಗಿ ಹೊರಟುಹೋಗಲಿಲ್ಲ. ಈ ಘಟನೆಯಾಗಿ ವರ್ಷಗಳೇ ಕಳೆಯಿತು. ಮುಂದೆ 1911ರಲ್ಲೊಮ್ಮೆ ಗೋವಿಂದ ಪೈಗಳು ಬರೋಡಾದ ನವಸಾರಿಯಲ್ಲಿದ್ದಾಗ ಪ್ರಾಸವನ್ನು ಬಿಡುವ ಗುಂಗು ಅವರಿಗೆ ಎಷ್ಟೊಂದು ಹಿಡಿಯಿತೆಂದರೆ ಅವರು ತಮ್ಮ ಮನೆಯ ಮಾಳಿಗೆಯಲ್ಲಿ ಶಪಥ ಹಾಕುತ್ತ, ''ಇನ್ನೂ ಮೀನ ಮೇಷ ನೋಡದೆ, ಪ್ರಾಸವನೀಗಲೇ ತೊರೆದುಬಿಡುವುದೇ ನಿಶ್ಚಯಂ'' ಎಂದು ನಿರ್ಧರಿಸಿ ಆದಿ ಪ್ರಾಸವನ್ನು ತ್ಯಜಿಸಿದರು. ಇದು ಕನ್ನಡ ಸಾಹಿತ್ಯದ ಒಂದು ಮಹತ್ತ್ವದ ಮೈಲುಗಲ್ಲೇ ಆಯಿತು. ಅದರ ಪ್ರಕಾರ ಅವರು ಠಾಕೂರರ

ಕವನಗಳನ್ನು ಪ್ರಾಸವಿಲ್ಲದೆ ಅನುವಾದಿಸಿ ಕನ್ನಡ ಸಾಹಿತ್ಯಕ್ಕೆ ಹೊಸ ಭಾಷ್ಯವನ್ನೇ ಬರೆದರು. ಈ ನಿರ್ಧಾರ ಆ ಕಾಲದಲ್ಲಿ ಅದೆಂಥ ಚರ್ಚೆಯನ್ನು ಹುಟ್ಟುಹಾಕಿತ್ತೆಂದರೆ ಕೆಲ ಕವಿಗಳು ಗೋವಿಂದ ಪೈಗಳನ್ನು ಹುಚ್ಚ ಎಂದರು. ಆದರೆ ಮುಂದೆ ಕಾವ್ಯದ ಹೊಳೆ ಹರಿದಾಗ ಅವರೂ ಕೂಡ ಗೋವಿಂದ ಪೈಗಳ ದಾರಿಯನ್ನೇ ಹಿಡಿದರು. ಕುವೆಂಪು ಕೂಡ ಮುಂದೆ ಗೋವಿಂದ ಪೈಗಳ ಮಾರ್ಗವನ್ನೇ ಅನುಸರಿಸಿ ಅವರೂ ರಾಷ್ಟ್ರಕವಿಗಳಾದರು. ಅಂದರೆ ಕುವೆಂಪು ಅವರೇ ಗೌರವಾದರಗಳಿಂದ ಕಂಡ ಗೋವಿಂದ ಪೈಗಳ ಪರಿಚಯ ಕುವೆಂಪು ಬೆಂಬಲಿಗರಿಗಿಲ್ಲ! ಕುವೆಂಪು ಅವರೇನೋ ಪೈಗಳನ್ನು ''**ಸಾಹಿತ್ಯದ ಗೊಮ್ಮಟ**'' ಎಂದು ಬಣ್ಣಿಸಿದ್ದರು. ಆದರೆ ಕುವೆಂಪು ಅವರನ್ನು ಗೌರವಿಸುವವರಾರೂ ಪೈಗಳನ್ನು ಸ್ಮರಿಸಲಿಲ್ಲ. ಅವರು ತಮ್ಮ ಬಹುತೇಕ ಕಾವ್ಯಗಳಲ್ಲಿ ಗೋವಿಂದ ಪೈಗಳ ಸಂಶೋಧನೆಯನ್ನು ಆಕರವನ್ನಾಗಿ ಸ್ವೀಕರಿಸಿದ್ದರು. ಕುವೆಂಪು ತಮ್ಮ ''**ಅಖಂಡ ಕರ್ನಾಟಕ**'ದಲ್ಲಿ ಕನ್ನಡವನ್ನು ''**ಮಂತ್ರ ಕಣಾ! ಶಕ್ತಿ ಕಣಾ! ತಾಯಿ ಕಣಾ! ದೇವಿ ಕಣಾ! ಬೆಂಕಿ ಕಣಾ! ಸಿಡಿಲು ಕಣಾ!**'' ಎಂದಿದ್ದರ ಮೂಲವೂ ಅಸಲಿಗೆ ಗೋವಿಂದ ಪೈಗಳದ್ದೇ. ಸ್ವತಃ ಕುವೆಂಪು ಅವರೇ ''**ಕನ್ನಡವೆಂದರೆ ಭಾಷೆಯೇ, ಸಾಹಿತ್ಯವೇ, ಸಂಸ್ಕೃತಿಯೇ, ಚರಿತ್ರೆಯೇ, ಸಮಾಜ ಜೀವನವೇ ಎಂದು ಮೊಟ್ಟಮೊದಲು ಅಂದವರು ಮಂಜೇಶ್ವರ ಗೋವಿಂದ ಪೈಗಳು**'' ಎಂದಿದ್ದಾರೆ. ಏಕೆಂದರೆ ಗೋವಿಂದ ಪೈಗಳ ಸಮಗ್ರ ಸಂಪುಟವನ್ನೊಮ್ಮೆ ಕಣ್ಣಾಡಿಸಿದರೆ ಕುವೆಂಪು ಮಾತ್ರವಲ್ಲ, ಬೇಂದ್ರೆಯಂಥವರೂ ಅದಕ್ಕೆ ಬೆರಗಾಗಿದ್ದು ಕಾಣಸಿಗುತ್ತದೆ.

ಕನ್ನಡದ ದೊಡ್ಡ ಕವಿಗಳನೇಕರಿಗೆ ಪ್ರಮುಖ ಆಕರ ಗ್ರಂಥವೂ, ಗ್ರಂಥಾಲಯವೂ ಆದಂಥ ಬೃಹತ್ ಸಂಪುಟ ಗೋವಿಂದ ಪೈ ಸಮಗ್ರ ಸಂಪುಟ. ಅದುವರೆಗೆ ಯಾರೂ ತಿಳಿಯದ ಅನೇಕ ಸಂಗತಿಗಳನ್ನು ಪೈಗಳು ಸಂಶೋಧಿಸಿದ್ದಾರೆ. ಕರ್ನಾಟಕವೋ? ಕರ್ಣಾಟಕವೋ ಎಂಬುದರಿಂದ ಹಿಡಿದು, ಬನವಾಸಿ ಕದಂಬರ ಎರಡನೆಯ ರಾಜಧಾನಿಯವರೆಗೆ, ಶಿವರಾತ್ರಿಯೋ? ಜಿನರಾತ್ರಿಯೋ? ಎಂಬ ಸೂಕ್ಷ್ಮತೆಯ ಬಗೆಗೆ, ಕನ್ನಡದ ಎಲ್ಲಾ ಕವಿಗಳ ಕಾಲನಿರ್ಣಯದಿಂದ ಹಿಡಿದು, ಶ್ರೀರಾಮ ಪಟ್ಟಾಭಿಷೇಕದ ಕರ್ತೃ ಯಾರು? ಎಂಬ ಜಿಜ್ಞಾಸೆಯವರೆಗೆ, ಮಂಜಯ್ಯ ಹೆಗ್ಗಡೆಯವರ ಜೀವನದಿಂದ ಹಿಡಿದು, ಧರ್ಮಸ್ಥಳದ ಶಿವಲಿಂಗಕ್ಕೆ ಮಂಜುನಾಥ ಎಂಬ ಹೆಸರು ಬಂದಿದ್ದು ಹೇಗೆಂಬುದರ ಬಗೆಗೆ, ಶೃಂಗೇರಿಯ ಗುರು ಪರಂಪರೆಯಿಂದ ಮಧ್ವಾಚಾರ್ಯರ ಕಾಲನಿರ್ಣಯದವರೆಗೆ ಕರ್ಣಾಟಕ ಚರಿತ್ರೆಯನ್ನೂ, ಭಾರತ ಇತಿಹಾಸದ 15 ಖಂಡಗಳನ್ನೂ, ವಾಗರ್ಥದ 6 ಖಂಡಗಳನ್ನೂ, ತತ್ವಶಾಸ್ತ್ರದ ಹಲವು ಕವಲುಗಳನ್ನೂ, ಗೋಲ್ಗೋಥಾ–ಗಿಳಿವಿಂಡುಗಳಂಥ ಕಾವ್ಯಗಳನ್ನೂ, ಕರ್ಣಾಟಕದ ಶಾಸನ ಮತ್ತು ಕೀರ್ತಿಶೇಷ ಕಿತ್ತೆಲ (ಕಿಟೆಲ್) ಅವರ ಜೀವನವನ್ನೂ ರಚಿಸಿದಂಥ ವಿದ್ವತ್ತು ಗೋವಿಂದ ಪೈಗಳದ್ದು. **26 ಭಾಷೆಗಳಿಂದ ತಂದ ಭಾಷಾಂತರ ಸಹಿತವಾದ ಒಟ್ಟು 1,400 ಪುಟಗಳ ಬೃಹತ್ ಗ್ರಂಥ ''ಮಂಜೇಶ್ವರ ಗೋವಿಂದ ಪೈ ಸಂಶೋಧನಾ ಸಂಪುಟ''.** ಡಾ. ಹಾ.ಮಾ. ನಾಯಕರು ಬರೆಯುವಂತೆ ''ಕನ್ನಡದ ವಿದ್ವತ್ ಪ್ರಪಂಚದಲ್ಲಿ ಇಂದೊಂದು ಅಪೂರ್ವವಾದ ಗ್ರಂಥ. ಇಷ್ಟು ಮಹತ್ತ್ವದ, ಇಷ್ಟು ದೊಡ್ಡ, ಪಾಂಡಿತ್ಯಪೂರ್ಣ ಲೇಖನಗಳ ಸಂಪುಟವೊಂದು ಕನ್ನಡದಲ್ಲಿ ಈ ಮೊದಲು ಪ್ರಕಟವಾಗಿಲ್ಲ. ಮಾತ್ರವಲ್ಲ, ಭಾರತದ ಯಾವ ಭಾಷೆಯಲ್ಲೂ ಪ್ರಕಟವಾಗಿಲ್ಲವೆಂಬುದೇ ನನ್ನ ತಿಳಿವಳಿಕೆ. ಇದೊಂದು ಕಳಸಪ್ರಾಯವಾದ ಮೇರು ಕೃತಿ ಪ್ರಕಟವಾಗಿರುವುದು ಕನ್ನಡ ಜನಕೋಟಿಯ ಅಭಿಮಾನದ ಮಾತು''.

## ಗೋವಿಂದ ಪೈಗಳ ಸಂಪುಟ ರಚನೆ

1965ರಲ್ಲಿ ನಡೆದ ಗೋವಿಂದ ಪೈಗಳ ಸಂಪುಟ ರಚನೆಯ ಸವಾಲೂ ಒಂದು ರೋಚಕವಾದ ಪ್ರಸಂಗ. ಮಂಜೇಶ್ವರದಲ್ಲಿದ್ದ ಪೈಗಳ ವಿಶಾಲ ಗ್ರಂಥಾಲಯವನ್ನು ಅವರ ತಮ್ಮನ ಮಗನಿಂದ ಒಪ್ಪಿಗೆ ಪಡೆದು ಉಡುಪಿಯ ಸಂಶೋಧನಾ ಕೇಂದ್ರಕ್ಕೆ ಕಳುಹಿಸಿಕೊಟ್ಟಿದ್ದು, ಅದನ್ನು ಲಾರಿಯಲ್ಲಿ ತುಂಬಿ ಉಡುಪಿಗೆ ತಂದಿದ್ದು ಎಲ್ಲವೂ ಸುಲಭವಾಗೇನೋ ನಡೆಯಿತು. ಸಾಗರದಷ್ಟು ಬರಹಗಳ ಸಂಪಾದನೆಯನ್ನು ಮಾಡಲು ಕರಾವಳಿಯ ಪ್ರಾಜ್ಞರನೇಕರು ತಮ್ಮ ಕೆಲಸ ಕಾರ್ಯಗಳನ್ನು ಬಿಟ್ಟು ಹಗಲು ರಾತ್ರಿ ಶ್ರಮಿಸಿದರು. ಕರ್ನಾಟಕದ ಹಲವು ಪಂಡಿತರ ಆಸ್ಥೆಯೂ ಅವರ ಜೊತೆಗಿತ್ತು. ಮಣಿಪಾಲದ ಪೈಗಳು ಗೋವಿಂದ ಪೈ ಸಂಶೋಧನಾ ಕೇಂದ್ರಕ್ಕೆ ಜಾಗವನ್ನೂ ಕೊಟ್ಟರು. ಅದರೆ ಪುಸ್ತಕ ಪ್ರಕಟಣೆಗೆ ಹಣವೆಲ್ಲಿ? ಆರಂಭದಲ್ಲಿ ಅಂದಾಜಿಸಿದ್ದ 800 ಪುಟಕ್ಕೇ 1995ರಲ್ಲಿ ಮೂರು ಲಕ್ಷಗಳಾಗುವುದೆಂದು ಲೆಕ್ಕಾಚಾರವಾಯಿತು. ಮಣಿಪಾಲದ ಪೈಗಳು ಮುದ್ರಣದ ಹೊಣೆಯನ್ನು ಹೊತ್ತರು; ಕೆಲವು ಮಹನೀಯರು ಬಡ್ಡಿರಹಿತವಾಗಿ ಸಾಲ ಕೊಟ್ಟರು; ಕೆಲವರು ಮುದ್ರಣ ಕಾಗದವನ್ನು ನೀಡಿದರು; ಬೆಂಗಳೂರಿನ ಕೆನರಾ ಬ್ಯಾಂಕ್ ಒಂದು ಲಕ್ಷ ರೂ. ಗಳನ್ನು ನೀಡಿತು. ಗೋವಿಂದ ಪೈಗಳ ಸಾಹಿತ್ಯದಿಂದ ಪ್ರೇರಿತರಾದವರೆಲ್ಲರೂ ಜೋಳಿಗೆ ಹಿಡಿದು ಊರೂರು ತಿರುಗಿದರು. ಅಷ್ಟು ಹೊತ್ತಿಗೆ ಸಂಪುಟದ ಪುಟ ಸಂಖ್ಯೆ ಏರುತ್ತಲೇ ಹೋಯಿತು. ಕೊನೆಗೆ ವಿಧಿ ಇಲ್ಲದ ಗೋವಿಂದ ಪೈ ಸಂಶೋಧನಾ ಕೇಂದ್ರದ ಹೆರಂಜೆ ಕೃಷ್ಣ ಭಟ್ ಮತ್ತು ಕು.ಶಿ. ಹರಿದಾಸ ಭಟ್ಟರು ಅಂದಿನ ಕೇಂದ್ರ ಸಚಿವ ಆಸ್ಕರ್ ಫರ್ನಾಂಡಿಸ್ ಬಳಿಗೆ ತೆರಳಿದರು. ನಾಯಿಗೆ ಹೇಳಿದರೆ ಅದು ತನ್ನ ಬಾಲಕ್ಕೆ ಹೇಳಿತೆಂಬಂತೆ ಆಸ್ಕರರು ಮೊಯ್ಲಿಗೆ ಹೇಳಿದರು. 'ಮಹಾನ್ ಸಾಹಿತಿ' ಮೊಯ್ಲಿ ಸಾಹೇಬರು ಕನ್ನಡ ಪುಸ್ತಕ ಪ್ರಾಧಿಕಾರದಿಂದ ನೂರೈವತ್ತು ಪುಸ್ತಕಗಳನ್ನು ಖರೀದಿಸುವ ಭರವಸೆಯನ್ನಷ್ಟೇ ಕೊಟ್ಟರು! ಅನಂತರ ಈ ವಿಷಯದತ್ತ ಮತ್ತೆ ತಲೆಹಾಕಲಿಲ್ಲ! ಅಲ್ಲಿಗೆ ಗೋವಿಂದ ಪೈಗಳು ಮತ್ತು ಸರ್ಕಾರದ ಸಂಬಂಧ ಮುಗಿಯಿತು.

ಕ್ರಮೇಣ ಸರ್ಕಾರಕ್ಕೂ ಗೋವಿಂದ ಪೈಯವರು ರಾಷ್ಟ್ರಕವಿ ಎಂಬುದೂ ಮರೆತುಹೋಯಿತು. 1951ರಲ್ಲಿ ಗೋವಿಂದ ಪೈಗಳ ಪುತ್ಥಳಿಯನ್ನು ಪ್ರತಿಷ್ಠಾಪನೆ ಮಾಡುತ್ತೇವೆಂದು ಆಶ್ವಾಸನೆ ಕೊಟ್ಟ ಸಾಹಿತ್ಯ ಪರಿಷತ್, ನಿರ್ಮಾಣ ಮಾಡಿದ ಪ್ರತಿಮೆಯನ್ನು ಪ್ಲಾಸ್ಟಿಕಿನಲ್ಲಿ ಸುತ್ತಿ ಗೋದಾಮಿನಲ್ಲಿ ಬಿಸಾಕಿತು. ಬರಹದಲ್ಲಿ ಯಾವ ವ್ಯಂಗ್ಯವನ್ನೂ ಬಳಸದ, ಕಟಕಿಯಾಡದ, ಭಾವಾವೇಶದಿಂದ ಬರೆಯದ ಮಹಾಪಂಡಿತನೊಬ್ಬನನ್ನು ಸರ್ಕಾರ ಮೂಲೆಗುಂಪು ಮಾಡಿಯೇಬಿಟ್ಟಿತು.

ಕೊನೆಗೆ ಪುಸ್ತಕವೇನೋ ಪ್ರಕಟವಾಯಿತು. ಅಷ್ಟೇ ಬೇಗ ಪ್ರತಿಗಳೂ ಮುಗಿದವು. ಸಂಪುಟಕ್ಕಾಗಿ ಕೆಲಸ ಮಾಡಿದ ಮಹನೀಯರೆಲ್ಲರೂ ಒಬ್ಬೊಬ್ಬರಾಗಿ ಕಾಲವಾದರು. ಕು.ಶಿ. ಹರಿದಾಸ ಭಟ್ಟ ಹರಿಪಾದ ಸೇರಿದರು. ಹೆರಂಜೆ ಕೃಷ್ಣ ಭಟ್ಟರು ಸಾಹಿತ್ಯದಿಂದಲೇ ದೂರವಾದರು. ತಾವು ಬರೆದಿದ್ದೇ ಮಹಾಕಾವ್ಯ ಎನ್ನುವಂಥ ಎಡಬಿಡಂಗಿ ಸಾಹಿತಿಗಳು ಕನ್ನಡ ಸಾಹಿತ್ಯಲೋಕವನ್ನು ಆಳತೊಡಗಿದರು. ಉಮಾಶ್ರೀಯಂಥವರು ಕನ್ನಡ ಸಂಸ್ಕೃತಿ ಸಚಿವರಾಗತೊಡಗಿದರು.

ಆದರೆ ಗೋವಿಂದ ಪೈಗಳ ಬಗ್ಗೆ ಆರಾಧನಾಭಾವವನ್ನು ಇಟ್ಟುಕೊಂಡವರು ನಾಡಿನಲ್ಲಿದ್ದರು. ಅವರು ಗೋವಿಂದ ಪೈ ಸಮಗ್ರ ಸಂಪುಟದ ಪುನರ್ ಮುದ್ರಣಕ್ಕೆ ಮನಸ್ಸು ಮಾಡಿದರು. ರಾಜ್ಯದಲ್ಲಿ ಪ್ರಾಮಾಣಿಕ ಕನ್ನಡದ ಕಾಳಜಿ ವಿಧಾನಸೌಧ ಎಂಬ ಸಂವೇದನೆ ಸತ್ತುಹೋದ ಕಲ್ಲು ಸೌಧದಲ್ಲಿ ನಿತ್ಯ ಅರ್ಜಿ ಹಿಡಿದು ತಿರುಗಾಡಿದರು. ''ಮಂಜೇಶ್ವರ ಗೋವಿಂದ ಪೈ ಎಂದರೆ ಅವರು ಕೇರಳದವರು ಆಲ್ವೇನ್ರಿ?'' ಎನ್ನುವ ಅಧಿಕಾರಿಗಳು, ''ಹಳಬರದ್ಯಾರು ಓದ್ತಾರೆ?'' ಎನ್ನುವ ಕೆಲ ಅಕಾಡೆಮಿ ಅಧ್ಯಕ್ಷರು, ಕಮ್ಮಟ ಮಾಡುವುದನ್ನೇ ಕನ್ನಡ ಸೇವೆ ಎನ್ನುವ ಇಲಾಖಾ ನಿರ್ದೇಶಕರುಗಳು, ''ರಾಷ್ಟ್ರಕವಿ ಅಂದ್ರೆ ಕುವೆಂಪು ಒಬ್ರೇ ಅಲ್ಲವೇ?'' ಎನ್ನುವ ಸರ್ಕಾರಿ ಗುಮಾಸ್ತರು, ಗೋವಿಂದ ಪೈ ರವರ ಜಾತಿ ಹುಡುಕುವ ಮಂತ್ರಿ ಮಾಗಧರು–ಇಂಥವರ ಮುಂದೆ ಗೋವಿಂದ ಪೈ ಅಭಿಮಾನಿಗಳು ಪ್ರಯತ್ನಪಟ್ಟರು.

ಜಿ.ಪಿ. ರಾಜರತ್ನಂನಂಥವರೇ, **''ಆಧುನಿಕ ಕನ್ನಡ ಸಾಹಿತ್ಯದಲ್ಲಿ ಯಾವುದನ್ನಾದರೂ ಕಡಲಿನ ಜೊತೆಗೋ, ಗೊಮ್ಮಟದ ಜೊತೆಗೋ ಹೋಲಿಸುವುದಾದರೆ ಅದು ಕಾರಂತರು ಮತ್ತು ಗೋವಿಂದ ಪೈಗಳು''** ಎಂದಿದ್ದರು. ಆದರೆ ಸದ್ಯದ ಸ್ಥಿತಿಯಲ್ಲಿ ಅಂಥ ಕಡಲನ್ನು ಸರ್ಕಾರ ಮರೆತಿತ್ತು. ಪುಣ್ಯವಶಾತ್ ಸ್ವಾತಂತ್ರ್ಯದ ಅಮೃತಮಹೋತ್ಸವದ ಹೊತ್ತಿನಲ್ಲಿ ಕರ್ನಾಟಕದಲ್ಲಿ ಕವಿಗಳ ಬಗ್ಗೆ ಗೌರವ, ಸಂಸ್ಕೃತಿಯ ಬಗ್ಗೆ ಆಸ್ಥೆ ಇರುವ ಸರ್ಕಾರ ಅಧಿಕಾರಕ್ಕೆ ಬಂದಿತು. ಸಂವೇದನಾಶೀಲ ಸಚಿವರು ನೇಮಕವಾದರು. ಗೋವಿಂದ ಪೈ ಸಂಶೋಧನಾ ಕೇಂದ್ರದ ಆಡಳಿತಾಧಿಕಾರಿಯಾದ ಡಾ. ಜಗದೀಶ್ ಶೆಟ್ಟಿ ಅವರಿಗೆ ಗೋವಿಂದ ಪೈಗಳ ಸಮಗ್ರ ಸಂಪುಟದ ಮರು ಮುದ್ರಣ ಮಾಡಬೇಕೆಂಬ ನಿಟ್ಟಿನಲ್ಲಿ ಸರ್ಕಾರದ ಅನುದಾನಕ್ಕಾಗಿ ಅವರ ಶಿಷ್ಯರಾದ ಹಾಗೂ ಬಿಜೆಪಿಯ ಸ್ಥಳೀಯ ಕಾರ್ಯಕರ್ತರಾದ ಅಜಿತ್ ಹೆರಂಜೆ ಅವರನ್ನು ಸಂಪರ್ಕಿಸಿದರು. ಆ ಹೊತ್ತಿಗೆ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಯ ಬಗ್ಗೆ ಅಭಿಮಾನವಿದ್ದ ಸಚಿವ ಶ್ರೀ ಸಿ.ಟಿ ರವಿಯವರು ಬೇರೆ ಇಲಾಖೆಯ ಹೊಣೆ ಹೊತ್ತುಕೊಂಡಿದ್ದರು. ಅಷ್ಟರಲ್ಲಿ ಕೋವಿಡ್ ಮಹಾಮಾರಿ ಬಂದು ಕೆಲ ವರ್ಷಗಳು ಉರುಳಿದವು. ಮುಂದೆ ವಿ. ಸುನಿಲ್ ಕುಮಾರ್ ಅವರು ಸಚಿವರಾದಾಗ ಸಮಗ್ರ ಪ್ರಕಟಣೆಯ ಕಾರ್ಯಗಳು ಪುನರಾರಂಭವಾಯಿತು. ಬಿಜೆಪಿಯ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿಗಳಾದ ಕನ್ನಡಿಗ ಶ್ರೀ ಬಿ.ಎಲ್ ಸಂತೋಷ್ ಅವರಿಗೆ ಈ ವಿಷಯ ತಿಳಿಯಿತು. ಸ್ವತಃ ಉಡುಪಿ ಜಿಲ್ಲೆಯವರಾದ ಸಂತೋಷ್ ಅವರು ಗೋವಿಂದ ಪೈಗಳ ಪುಸ್ತಕಗಳನ್ನು ಓದಿದ್ದರು. ಈಗ ಅವರ ಯಾವ ಪುಸ್ತಕಗಳೂ ಲಭ್ಯವಿಲ್ಲ ಎಂದು ತಿಳಿದಾಗ ಸರ್ಕಾರಕ್ಕೆ ಕ್ರಮ ಕೈಗೊಳ್ಳಬೇಕೆಂದು ತಿಳಿಸಿ ಸಂಬಂಧಪಟ್ಟವರಿಗೆ ಅಗತ್ಯ ಸಲಹೆಗಳನ್ನು ನೀಡಿದರು. ಕೆಲವೇ ವಾರಗಳಲ್ಲಿ ಪ್ರಕ್ರಿಯೆಗಳು ಆರಂಭವಾದವು. **35 ಲಕ್ಷ ರೂಪಾಯಿಗಳ ಅನುದಾನವನ್ನು ರಾಜ್ಯ ಸರ್ಕಾರ ಉಡುಪಿಯ ಗೋವಿಂದ ಪೈ ಸಂಶೋಧನಾ ಕೇಂದ್ರಕ್ಕೆ ನೀಡಿತು.** ಸಮಗ್ರದ ಕಾರ್ಯಗಳು ತ್ವರಿತಗತಿಯಲ್ಲಿ ನಡೆಯುತ್ತಿದ್ದಾಗಲೇ ಸರ್ಕಾರ ಬದಲಾಯಿತು. ಕೊನೆಗೂ ಸಮಗ್ರ ಸಂಪುಟ ಬಿಡುಗಡೆಯಾಗಿದೆ.

ಸಂಪುಟ ಪ್ರಕಟಣೆಗೆ ಕೆಲಸ ಮಾಡಿದವರ ಬಳಿ ಇಂದು ಅಧಿಕಾರವಿಲ್ಲ. ಬಿಡುಗಡೆಯ ಸಂಭ್ರಮದಲ್ಲೂ ಅವರಿಂದು ಇಲ್ಲ. ಆದರೆ ಮಹಾ ಕವಿಯೊಬ್ಬರ ಚಿಂತನೆಯನ್ನು ಸಾಹಿತ್ಯ ಲೋಕದಲ್ಲಿ ಹೊಸ ತಲೆಮಾರಿಗೆ ತಂದ ಸಂತೃಪ್ತಿ ಅವರಲ್ಲಿದೆ. ಆಳುವವರಲ್ಲಿ ಕಲೆ ಮತ್ತು ಸಾಹಿತ್ಯದ ಬಗೆಗೆ ಅಭಿಮಾನಗಳಿರಬೇಕು. ಆ ಸಂವೇದನೆ ಹೊಟ್ಟೆ ತುಂಬಿಸುವುದಿಲ್ಲ ನಿಜ, ಆದರೆ ಅಂಥ ಸಂವೇದನೆಗಳಿದ್ದರೆ ಮಾತ್ರ ಸಮಾಜ ಸುಭದ್ರ ಎನಿಸಿಕೊಳ್ಳುತ್ತದೆ. ಹೊಟ್ಟೆ ತುಂಬಿಸಲು ಗ್ಯಾರಂಟಿ ಯೋಜನೆಗಳೇ ಸಾಕಾಗುತ್ತದೆ. ಆದರೆ ಸುಭದ್ರ ಸಮಾಜ ನಿರ್ಮಾಣಕ್ಕೆ ಸಂವೇದನಾಶೀಲರು ಅಧಿಕಾರದಲ್ಲಿರಬೇಕು. ಅದರಲ್ಲೂ ಗೋವಿಂದ ಪೈಗಳ ಸಾಹಿತ್ಯವನ್ನು ಆಹ್ಲಾದಿಸುವ, ಅನುಸರಿಸುವ ಮನಸ್ಸುಗಳಿರಬೇಕು. ಅನಾಮಿಕ ಕವಿಯೊಬ್ಬರು ಗೋವಿಂದ ಪೈಗಳನ್ನು ಕುರಿತು 'ಗೋವಿಂದ ಪೈ ಬಂದರು' ಎಂಬ ಕವನದಲ್ಲಿ ಹೀಗೆ ಬರೆದಿದ್ದಾರೆ.

**ಇದೋ ಬಂದರು**

**ಗೋವಿಂದ ಪೈ ಬಂದರು– ಸರ್ವಋತು ಬಂದರು**

ಗೋವಿಂದ ಪೈಗಳು ಸಕಾಲಕ್ಕೂ ಸಲ್ಲುವವರು. ಅವರ ಕಲ್ಪನೆಯ ಕರ್ನಾಟಕ ಸರ್ವಕಾಲದ ಆಡಳಿತಕ್ಕೂ ಪ್ರಸ್ತುತವಾದಂಥದ್ದು. ಇದೀಗ ಗೋವಿಂದ ಪೈ ಸಂಶೋಧನಾ ಸಂಪುಟ ಬಂದಿದೆ. ಎರಡನೆಯ ಮುದ್ರಣದ ಹೊತ್ತಿನಲ್ಲೂ ಅದು ಸರ್ವಋತು ಬಂದರು.



# ಲ್ಯಾಂಡ್ ಜಿಹಾದ್ ವಿರುದ್ಧ ಸಿಡಿದೆದ್ದ ರಾಜ್ಯ ಬಿಜೆಪಿ, ರೈತರ ಭೂಮಿ ರಕ್ಷಣೆಗೆ ರಾಜ್ಯಾದ್ಯಂತ ಹೋರಾಟ




ರತನ್ ರಮೇಶ್ ಪೂಜಾರಿ
ರಾಜ್ಯ ಮಾಧ್ಯಮ ಸಮಿತಿ ಸದಸ್ಯರು,
ಬಿಜೆಪಿ ಕರ್ನಾಟಕ


ಮಹಾಭಾರತದಲ್ಲಿ ಬರುವ ರಾಕ್ಷಸ ಬಕಾಸುರ ತನ್ನ ರಾಜ್ಯದ ಜನರನ್ನು ತನ್ನ ಇಚ್ಛೆಯಂತೆ ತಿನ್ನುತ್ತಾ ಹೋಗುತ್ತಾನೆ. ಜನರು ಈ ಪೀಡಕನಿಗೆ ಪ್ರತಿವಾರ ದೊಡ್ಡ ಪ್ರಮಾಣದ ಆಹಾರವನ್ನು ಕಳುಹಿಸುತ್ತಿದ್ದರೂ ಸಾಕಾಗದೇ ಮನುಷ್ಯರನ್ನು ತಿನ್ನುವ ಹವ್ಯಾಸ ಅತಿಯಾಸೆ ರೂಢಿಸಿಕೊಂಡಿದ್ದ. ಯಾವುದೇ ಲಂಗು ಲಗಾಮಿಲ್ಲದೆ, ಕಾನೂನಿನ ಹಂಗಿಲ್ಲದೆ ಕಂಡದ್ದೆಲ್ಲಾ ತನ್ನದೆಂದು ನುಂಗುವ ಕಾಯಕ ಈ ಬಕಾಸುರನದಾಗಿತ್ತು. ಈ ಆಧುನಿಕ ಕಾಲದಲ್ಲಿ ಆ ಕಾಲದ ಬಕಾಸುರ ವಕ್ಫ್ ಬೋರ್ಡ್ ರೂಪದಲ್ಲಿ ಮತ್ತೆ ಹುಟ್ಟಿ ಬಂದಿದ್ದಾನೇನೋ ಎಂಬ ಅನುಮಾನ ಈ ದೇಶದ ಜನರಿಗೆ ಕಾಡುತ್ತಿದೆ.

ಕರ್ನಾಟಕ ರಾಜ್ಯದಲ್ಲಿ ಯು-ಟರ್ನ್ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ 17 ತಿಂಗಳುಗಳಲ್ಲಿ ಶಿವಮೊಗ್ಗ ಕೋಮು ಗಲಭೆ, ಕೋಲಾರ ಕೋಮುಗಲಭೆ, ನಾಗಮಂಗಲ ಹಿಂದೂ ಮುಸ್ಲಿಂ ಗಲಾಟೆ, ಮುಸಲ್ಮಾನರಿಗೆ 10,000 ಕೋಟಿ ಅನುದಾನ ನೀಡುವ ಭರವಸೆ, ಮುಸ್ಲಿಂ ಗುತ್ತಿಗೆದಾರರಿಗೆ 4% ಮೀಸಲಾತಿ ಘೋಷಣೆ, ಹುಬ್ಬಳ್ಳಿ ಗಲಭೆಯ ಆರೋಪಿಗಳ ವಿರುದ್ಧದ ಪ್ರಕರಣಗಳನ್ನು ಹಿಂಪಡೆಯುವವರೆಗೆ ಓಲೈಕೆ ಮತ್ತು ತುಷ್ಟಿಕರಣ ಎಲ್ಲಾ ಎಲ್ಲೆಗಳನ್ನು ಮೀರಿದೆ. ಇದೆಲ್ಲವನ್ನು ಮೀರಿಸುವ ತುಷ್ಟೀಕರಣದ ಪೆಡಂಭೂತವಾಗಿ ರಾಜ್ಯದ ರೈತರು, ಬಡವರು, ಧಾರ್ಮಿಕ ಕೇಂದ್ರಗಳನ್ನು ಕಾಡಿದ್ದು ವಕ್ಫ್ ಬೋರ್ಡ್‌ನ ವಕ್ಫ್ ಅದಾಲತ್ತುಗಳು. ಪ್ರಪಂಚದ ಯಾವುದೇ ದೇಶದಲ್ಲಿಲ್ಲದ ಹಾಗೂ ದೇಶದ ಸಂವಿಧಾನದಲ್ಲಿ ಇಲ್ಲದ ವಕ್ಫ್ ಬೋರ್ಡ್ ಹಾಗೂ ವಕ್ಫ್ ಕಾನೂನುಗಳು ರಾಜ್ಯ ಹಾಗೂ ದೇಶದ ಸಾಮಾನ್ಯ ಜನರ, ರೈತರ, ಮಠ ಮಂದಿರಗಳ, ಧಾರ್ಮಿಕ ಕೇಂದ್ರಗಳ ಭೂಮಿಯನ್ನು ತನ್ನದೆಂದು ವಕ್ಫ್ ಬೋರ್ಡ್ ಬಕಾಸುರನಂತೆ




ಕಬಳಿಸಿಕೊಳ್ಳಲು ಹುನ್ನಾರಕ್ಕೆ ಕುಮ್ಮಕ್ಕು ನೀಡುವ ಕೆಟ್ಟ ಸಂಪ್ರದಾಯಕ್ಕೆ ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರ ಜಮೀರ್ ಅಹಮದ್ ಖಾನ್ ರವರ ಮೂಲಕ ಕೇವಲ ಮತ ಬ್ಯಾಂಕ್ ಓಲೈಕೆಗಾಗಿ ಮಾಡುತ್ತಿದೆ. ಈ ವಕ್ಫ್ ಆಸ್ತಿ ಒತ್ತುವರಿ ಸಮಸ್ಯೆ ವಿರುದ್ಧ ಬಿಜೆಪಿ ಕರ್ನಾಟಕ ವತಿಯಿಂದ ರಾಜ್ಯಾದ್ಯಂತ ರಾಜ್ಯಾಧ್ಯಕ್ಷರಾದ ಮಾನ್ಯ ಶ್ರೀ ವಿಜಯೇಂದ್ರ ಯಡಿಯೂರಪ್ಪರವರ ನೇತೃತ್ವದಲ್ಲಿ ನಮ್ಮ ಭೂಮಿ ನಮ್ಮ ಹಕ್ಕು ಶೀರ್ಷಿಕೆಯ ಅಡಿಯಲ್ಲಿ ಜನಾಂದೋಲನ ನಡೆಸಿತು.

ನವೆಂಬರ್ 21 ಮತ್ತು 22ರಂದು ರಾಜ್ಯದ ಎಲ್ಲ ಜಿಲ್ಲಾಧಿಕಾರಿ ಕಛೇರಿ ಮತ್ತು ತಾಲ್ಲೂಕು ತಹಸೀಲ್ದಾರರ ಕಛೇರಿಗಳ ಮುಂದೆ ದಿನವಿಡೀ ಪ್ರತಿಭಟನೆ ನಡೆಯಿತು. ಪ್ರತಿಭಟನೆಯ ಜೊತೆಗೆ ಎಲ್ಲ ಸಂತ್ರಸ್ತರಿಂದ ಅರ್ಜಿಗಳ ಸ್ವೀಕಾರ, ವಕ್ಫ್ ಅಧಿಕಾರ ದುರ್ಬಳಕೆಯಿಂದ ಸಮಸ್ಯೆ -ಶೋಷಣೆಗೆ ಒಳಗಾದವರ ಮಾಹಿತಿ ಸಂಗ್ರಹಿಸಲಾಯಿತು. ವಕ್ಫ್ ವಿಚಾರದಲ್ಲಿ ಆದ ದುರ್ಬಳಕೆ ಸಂಬಂಧ ಮಾಹಿತಿ ಕಲೆ ಹಾಕಲಾಯಿತು. ಸಾರ್ವಜನಿಕರು, ರೈತರು ಪಹಣಿಗಳ ಕುರಿತು ಪರಿಶೀಲಿಸಬೇಕು, ವಕ್ಫ್ ಎಂಟ್ರಿ ಬಗ್ಗೆ ಎಚ್ಚರಿಕೆ ವಹಿಸಬೇಕು ಎಂದು ಮನವಿ ಮಾಡಲಾಯಿತು.

ವಕ್ಫ್ ಬೋರ್ಡ್ ರೈತರಿಗೆ, ಮಠ ಮಂದಿರಗಳಿಗೆ ಧಾರ್ಮಿಕ ಕೇಂದ್ರಗಳಿಗೆ ನೀಡಿದ ನೋಟಿಸ್ ವಿರೋಧಿಸಿ ಭಾರತೀಯ ಜನತಾ ಪಾರ್ಟಿ ರಾಜ್ಯಾದ್ಯಂತ ನವಂಬರ್ 4 ಮತ್ತು 5 ರಂದು ಹೋರಾಟ ನಡೆಸಿದ್ದು, ಚಾಮರಾಜನಗರದಿಂದ ಹಿಡಿದು ಬೀದರ್ ತನಕ ಪ್ರತಿ ಜಿಲ್ಲೆ, ತಾಲೂಕುಗಳಲ್ಲಿ ಇಂಥ ಕಾಂಗ್ರೆಸ್ ವಿರುದ್ಧ ಬಕಾಸುರ ಕಾಂಗ್ರೆಸ್ ಪಕ್ಷದ ಭಾರತೀಯ ಜನತಾ ಪಾರ್ಟಿ ಹೋರಾಟ ದಾಖಲಿಸಿ ರೈತರು, ಮಠ, ಮಂದಿರ, ದೇವಸ್ಥಾನ, ಧಾರ್ಮಿಕ ಕೇಂದ್ರಗಳ ಪರವಾಗಿ ನಿಂತು ಧೈರ್ಯ ತುಂಬ ಕೆಲಸವನ್ನು ಮಾಡಲಾಯಿತು. ಮಾನ್ಯ ರಾಜ್ಯಾಧ್ಯಕ್ಷರಾದ ಶ್ರೀ ವಿಜಯೇಂದ್ರ ರವರು ಬಳ್ಳಾರಿಯಲ್ಲಿ ನಡೆದ ಪ್ರತಿಭಟನೆಯಲ್ಲಿ ಭಾಗವಹಿಸಿ ಸರ್ಕಾರದ ವಿರುದ್ಧ ಆಕ್ರೋಶ ತೋಡಿಕೊಂಡರು. ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಆರ್. ಅಶೋಕ್ ಅವರು ಬೆಂಗಳೂರಿನಲ್ಲಿ ಭಾಗವಹಿಸಿ ಸರ್ಕಾರದ ವಿರುದ್ಧ ಚಾಟಿ ಬೀಸಿದರು. ಒಟ್ಟು 39 ಸಂಘಟನಾತ್ಮಕ ಜಿಲ್ಲೆಗಳಲ್ಲಿ ಬೃಹತ್ ಪ್ರತಿಭಟನೆಗಳು ನಡೆದು ನೋಟಿಸ್ ನೀಡಿದ ಜನವಿರೋಧಿ ಕಾಂಗ್ರೆಸ್ ಸರ್ಕಾರದ ವಿರುದ್ಧ, ಸಿಎಂ ಸಿದ್ದರಾಮಯ್ಯ, ಸಚಿವ ಜಮೀರ್ ಅಹಮದ್ ಖಾನ್ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ ಸಾಮಾನ್ಯ ರೈತರು, ಮಠ ಮಂದಿರ, ದೇವಸ್ಥಾನ ಧಾರ್ಮಿಕ ಕೇಂದ್ರಗಳ ಪರ ನಿಂತು ಧೈರ್ಯ ತುಂಬ ಕೆಲಸವನ್ನು ಭಾರತೀಯ ಜನತಾ ಪಾರ್ಟಿ ವತಿಯಿಂದ ಮಾಡಲಾಯಿತು.

ಪ್ರಕರಣದ ತೀವ್ರತೆ ಅರಿತು ಮತ್ತೊಮ್ಮೆ ನವೆಂಬರ್ 21 ಮತ್ತು 22 ರಂದು ರಾಜ್ಯಾದ್ಯಂತ ಪ್ರತಿ ಜಿಲ್ಲೆಗಳಲ್ಲಿ ಬಿಜೆಪಿ ವತಿಯಿಂದ ವಕ್ಫ್ ವಿರುದ್ಧ ನಮ್ಮ ಭೂಮಿ ನಮ್ಮ ಹಕ್ಕು ಎಂಬ ಶೀರ್ಷಿಕೆಯಡಿ ಬೃಹತ್ ಪ್ರತಿಭಟನೆಗಳು ನಡೆದವು. ಜಿಲ್ಲಾಧಿಕಾರಿ ಕಚೇರಿ ಮತ್ತು ತಾಲ್ಲೂಕು ತಹಸೀಲ್ದಾರರ ಕಚೇರಿಗಳ ಮುಂದೆ ದಿನವಿಡೀ ಪ್ರತಿಭಟನೆ ನಡೆಸಿ ವಕ್ಫ್ ಅಧಿಕಾರ ದುರ್ಬಳಕೆಯಿಂದ ಸಮಸ್ಯೆ-ಶೋಷಣೆಗೆ ಒಳಗಾದವರ ಮಾಹಿತಿ ಸಂಗ್ರಹಿಸಿ ಎಲ್ಲ ಸಂತ್ರಸ್ತರಿಂದ ಅರ್ಜಿಗಳ ಸ್ವೀಕರಿಸಲಾಯಿತು. ಶಿವಮೊಗ್ಗದ ಡಿಸಿ ಕಚೇರಿ ಎದುರು ಧರಣಿ ಕೂತು ಅಪಾಯಕಾರಿ ವಕ್ಫ್ ವಿರುದ್ಧ ದನಿಯೆತ್ತಿ ಮಾನ್ಯ ರಾಜ್ಯಾಧ್ಯಕ್ಷರಾದ

ಶ್ರೀ ವಿಜಯೇಂದ್ರ ಯಡಿಯೂರಪ್ಪನವರು ಹೋರಾಟ ನಡೆಸಿದರು.

ಈ ಸಂದರ್ಭದಲ್ಲಿ ಶಿವಮೊಗ್ಗ ಶಾಸಕರಾದ ಚನ್ನಬಸಪ್ಪ ಚನ್ನಿರವರು, ವಿವಿಧ ಮಠಾಧೀಶರು, ಸ್ವಾಮೀಜಿಗಳು, ಗಣ್ಯರು ಉಪಸ್ಥಿತರಿದ್ದರು. ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನವನದಲ್ಲಿ ನಡೆದ ಬೃಹತ್ ಪ್ರತಿಭಟನೆಯಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಆರ್ ಅಶೋಕ್ ರವರು, ಮಾನ್ಯ ಕೇಂದ್ರ ಸಚಿವರಾದ ಕು. ಶೋಭಾ ಕರಂದ್ಲಾಜೆರವರು, ಮಾನ್ಯ ಮಾಜಿ ಉಪ ಮುಖ್ಯಮಂತ್ರಿಗಳಾದ ಡಾ. ಸಿಎನ್ ಅಶ್ವಥ್ ನಾರಾಯಣ್ ರವರು, ಮಾನ್ಯ ಮಾಜಿ ಸಚಿವರು ಹಾಗೂ ವಿಧಾನಪರಿಷತ್ ಸದಸ್ಯರಾದ ಶ್ರೀ ಸಿಟಿ ರವಿ ರವರು, ಜಿಲ್ಲಾಧ್ಯಕ್ಷರುಗಳು, ವಿವಿಧ ಪದಾಧಿಕಾರಿಗಳು, ಕಾರ್ಯಕರ್ತರು ಭಾಗವಹಿಸಿದ್ದರು.

ಮಾನ್ಯ ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕರಾದ ಶ್ರೀ ಛಲವಾದಿ ನಾರಾಯಣಸ್ವಾಮಿರವರು ಕಲಬುರಗಿ ಜಿಲ್ಲೆಯಲ್ಲಿ ನಡೆದ ಬೃಹತ್ ಪ್ರತಿಭಟನೆಯಲ್ಲಿ ಭಾಗವಹಿಸಿದರು. ಶ್ರೀ ಶಶಿಲ್ ನಮೋಶಿ, ಶ್ರೀ ಬಸವರಾಜ ಮತ್ತಿಮೋಡ, ಶ್ರೀ ಅವಿನಾಶ್ ಜಾಧವ್, ಜಿಲ್ಲಾಧ್ಯಕ್ಷರು, ವಿವಿಧ ಪದಾಧಿಕಾರಿಗಳು, ಮಠಾಧೀಶರು, ರೈತರು, ಪ್ರಮುಖರು, ಕಾರ್ಯಕರ್ತರು ಭಾಗವಹಿಸಿದ್ದರು.


ಮಂಗಳೂರಿನ ಗಾಂಧಿ ಭವನದ ಎದುರು ನಡೆದ ಹೋರಾಟದಲ್ಲಿ ನಿಕಟಪೂರ್ವ ರಾಜ್ಯಾಧ್ಯಕ್ಷರಾದ ಶ್ರೀ ನಳಿನ್ ಕುಮಾರ್ ಕಟೀಲ್ ರವರು, ಶಾಸಕರು, ಜಿಲ್ಲಾಧ್ಯಕ್ಷರು, ಪ್ರಮುಖರು, ಕಾರ್ಯಕರ್ತರು ಭಾಗವಹಿಸಿದ್ದರು. ಹುಬ್ಬಳ್ಳಿ ಕೇಂದ್ರದಲ್ಲಿ ನಡೆದ ಹೋರಾಟದಲ್ಲಿ ಶಾಸಕರಾದ ಶ್ರೀ ಮಹೇಶ್ ತೆಂಗಿನಕಾಯಿ, ಶ್ರೀ ಅಮೃತ್ ದೇಸಾಯಿ, ಶ್ರೀಮತಿ ಸೀಮಾ ಮಸೂತಿ, ಜಿಲ್ಲಾಧ್ಯಕ್ಷರು, ಮಾಜಿ ಕಾರ್ಪೊರೇಟರ್ ಗಳು, ಪ್ರಮುಖರು, ಕಾರ್ಯಕರ್ತರು ಭಾಗವಹಿಸಿದ್ದರು.

ಬೆಳಗಾವಿಯಲ್ಲಿ ನಡೆದ ಬೃಹತ್ ಪ್ರತಿಭಟನೆಯಲ್ಲಿ ಶ್ರೀ ಅನಿಲ್ ಬೆನಕೆ, ಶ್ರೀ ಈರಣ್ಣ ಕಡಾಡಿ, ಶ್ರೀ ಎಂ.ಬಿ.ಜಿರಲಿ, ಶ್ರೀ ಎಂ.ಬಿ ಪಾಟೀಲ್, ಶ್ರೀ ಅರವಿಂದ ಪಾಟೀಲ್, ಜಿಲ್ಲಾ ಅಧ್ಯಕ್ಷರುಗಳು, ಪ್ರಮುಖರು, ಕಾರ್ಯಕರ್ತರು ಭಾಗವಹಿಸಿದ್ದರು. ಮೈಸೂರಿನ ಜಿಲ್ಲಾಧಿಕಾರಿ ಕಚೇರಿಯೆದುರು ನಡೆದ ಹೋರಾಟದಲ್ಲಿ ಜಿಲ್ಲಾಧ್ಯಕ್ಷರು, ವಿವಿಧ ಪದಾಧಿಕಾರಿಗಳು ಪ್ರಮುಖರು ಹಾಗೂ ಕಾರ್ಯಕರ್ತರು ಭಾಗವಹಿಸಿದ್ದರು.

ಜಿಲ್ಲಾದ್ಯಂತ ಎರಡೆರಡು ಬಾರಿ ಬೃಹತ್ ಪ್ರತಿಭಟನೆ ಹಾಗೂ ಮುಂದುವರಿದ ಹೋರಾಟಗಳು ಸಿದ್ದರಾಮಯ್ಯನವರ ನೇತೃತ್ವದ ಕಾಂಗ್ರೆಸ್ ಸರ್ಕಾರಕ್ಕೆ ಚಾಟಿ ಬೀಸಿ ಮುಟ್ಟಿಸುವಲ್ಲಿ ಸಮರ್ಥವಾಗಿತ್ತು. ಭಾರತೀಯ ಜನತಾ ಪಾರ್ಟಿಯ ಹೋರಾಟಗಳಿಗೆ ಹೆದರಿ ಸರ್ಕಾರ ನೋಟಿಸ್‌ಗಳನ್ನು ವಾಪಸ್ ತೆಗೆದುಕೊಂಡಿದ್ದನ್ನು ರಾಜ್ಯ ನೋಡಿದೆ. ಒಟ್ಟಿನಲ್ಲಿ ಕಾಂಗ್ರೆಸ್ ಸರ್ಕಾರ ಈ ಬಾರಿ ತುಷ್ಟೀಕರಣದ ಪರಮಾವಧಿಯನ್ನು ಮುಟ್ಟಿದರೂ ಕೂಡ ಭಾರತೀಯ ಜನತಾ ಪಕ್ಷ ಹಿಂದುಗಳಿಗಾಗಿ, ದೇಶದ ರೈತರಿಗಾಗಿ, ಮಠ ಮಾನ್ಯ ಮಂದಿರಗಳು, ದೇವಸ್ಥಾನಗಳು, ಧಾರ್ಮಿಕ ಕೇಂದ್ರಗಳ ರಕ್ಷಣೆಗೆ ಹಿಂದೆಯೂ ಕಟಿಬದ್ಧವಾಗಿತ್ತು, ಇಂದೂ ಕಟಿಬದ್ಧವಾಗಿದೆ, ಮುಂದೆಯೂ ಕಟ್ಟಿಬದ್ಧವಾಗಿರಲಿದೆ. ಎಂದೆಂದೂ ಸಿದ್ಧತೆ, ಬದ್ಧತೆ, ಉದ್ದೇಶದಲ್ಲಿ ಶುದ್ಧತೆಯನ್ನು ತೋರಿ ರಾಜ್ಯದ ಜನತೆಯ ಪರವಾಗಿ ನಿಂತಿದ್ದಕ್ಕೆ ಎಲ್ಲಾ ಮೂಲೆಗಳಿಂದ ಪ್ರಶಂಸೆ ವ್ಯಕ್ತವಾಯಿತು.

## ಕಾರ್ಯಕರ್ತರ ಬದ್ಧತೆ

### ಪ್ರೇರಣೆ – ಅನುಕರಣೀಯ



ಬಿಜೆಪಿ ವತಿಯಿಂದ ಆಯೋಜಿಸಿರುವ '**ಸಕ್ರಿಯ ಸದಸ್ಯತ್ವ ಅಭಿಯಾನ**' ಯಶಸ್ವಿಯಾಗಿ ನಡೆಯುತ್ತಿದೆ. ಬಾಗಲಕೋಟೆ ಜಿಲ್ಲೆಯ, ಜಮಖಂಡಿ ನಗರದ ವಾರ್ಡ್ ನಂಬರ್ 31 ರ 178ನೇ ಬೂತ್‌ನ ಪಕ್ಷದ ಹಿರಿಯ ಕಾರ್ಯಕರ್ತೆಯಾದ **ಶ್ರೀಮತಿ ಕಾಶಿಬಾಯಿ ಹೂಗಾರ್** ಅವರು ಗಣನೀಯ ಪ್ರಮಾಣದಲ್ಲಿ ಸದಸ್ಯತ್ವ ನೋಂದಣಿ ಮಾಡಿಸಿ ಸಕ್ರಿಯ ಸದಸ್ಯತ್ವ ಪಡೆದಿದ್ದಾರೆ.

ಪಕ್ಷದ ಮೇಲಿನ ಬದ್ಧತೆಯಿಂದ ಕಾರ್ಯಕರ್ತರ ಸಹಾಯ ಪಡೆದು ಸದಸ್ಯತ್ವ ನೋಂದಣಿ ಮಾಡಿಸಿ ಮಾದರಿಯಾಗಿರುವುದು ಶ್ಲಾಘನೀಯ ಹಾಗೂ ಎಲ್ಲಾ ಕಾರ್ಯಕರ್ತರಿಗೂ ಪ್ರೇರಣೀಯ.

# ಡಾ. ಬಿ.ಆರ್. ಅಂಬೇಡ್ಕರ್ ರವರ 68ನೇ ಮಹಾ ಪರಿನಿರ್ವಾಣ ದಿವಸ

# ಬಾಬಾ ಸಾಹೇಬ್ ರವರ ಭಾವಚಿತ್ರಕ್ಕೆ ಪುಷ್ಪನಮನ



ಸಂವಿಧಾನ ಶಿಲ್ಪಿ, ಸಮ ಸಮಾಜದ ನಿರ್ಮಾಣದ ಕನಸು ಕಂಡಿದ್ದ ಡಾ. ಬಾ ಬಾ ಸಾಹೇಬ್ ಅಂಬೇಡ್ಕರ್ ಅವರ ಚಿಂತನೆಗಳನ್ನು ನನಸು ಮಾಡುವ ಏಕೈಕ ನಾಯಕ ಪ್ರಧಾನಮಂತ್ರಿ ನರೇಂದ್ರ ಮೋದಿ ಎಂದು ಬಿಜೆಪಿ ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ ಅವರು ತಿಳಿಸಿದರು.

ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಡಾ. ಬಿ.ಆರ್.ಅಂಬೇಡ್ಕರ್ ಅವರ ಮಹಾ ಪರಿನಿರ್ವಾಣ ದಿನದ ಪ್ರಯುಕ್ತ ಬಾಬಾ ಸಾಹೇಬರ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿದ ಬಳಿಕ ಮಾತನಾಡಿದ ಅವರು, ಬಾಬಾಸಾಹೇಬರಿಗೆ ನೈಜ ಗೌರವ ಸಲ್ಲಿಸಲು ದೇಶ ಯಾವ ದಿಕ್ಕಿನಲ್ಲಿ ಸಾಗಬೇಕೋ ಆ ನಿಟ್ಟಿನಲ್ಲಿ ದೇಶವನ್ನು ಕರೆದೊಯ್ಯುವ ಕಾರ್ಯ ಪ್ರಧಾನಿ ಶ್ರೀ ನರೇಂದ್ರ ಮೋದಿ ರವರಿಂದ ಕಳೆದ 10 ವರ್ಷಗಳಿಂದ ಆಗುತ್ತಿದೆ. ಪ್ರಧಾನಿ ಶ್ರೀ ನರೇಂದ್ರ ಮೋದಿ ಅವರು ಬಾಬಾಸಾಹೇಬರ ಜೀವನದಲ್ಲಿ ಮಹತ್ತರ ಪಾತ್ರ ವಹಿಸಿದ 5 ಸ್ಥಳಗಳನ್ನು ಪಂಚತೀರ್ಥವನ್ನಾಗಿ ಅಭಿವೃದ್ಧಿಗೊಳಿಸಿದ್ದಾರೆ ಎಂದು ಅವರು ತಿಳಿಸಿದರು.

ಡಾ.ಬಿ.ಆರ್. ಅಂಬೇಡ್ಕರ್ ರವರ ಆಶಯಗಳನ್ನು ಜನರ ಮಧ್ಯೆ ಕೊಂಡೊಯ್ಯುವ ಪ್ರಾಮಾಣಿಕ ಕಳಕಳಿ ಇರುವುದು ಬಿಜೆಪಿಗೆ ಮಾತ್ರ. ಪ್ರಧಾನಿ ಶ್ರೀ ನರೇಂದ್ರ ಮೋದಿ ಅವರು ಅದನ್ನು ಪ್ರಾಮಾಣಿಕವಾಗಿ ಅನುಷ್ಠಾನ ಮಾಡುತ್ತಿದ್ದಾರೆ ಎಂದು ಅವರು ವಿವರಿಸಿದರು. ಮಹಾನ್ ಚೇತನ ಅಂಬೇಡ್ಕರ್ ಅವರಿಗೆ ಗೌರವ ಸಲ್ಲಿಸುವುದರ ಜೊತೆಜೊತೆಗೆ ಅವರ ಧ್ಯೇಯ, ಆದರ್ಶಗಳನ್ನು ನಮ್ಮ ಜೀವನದಲ್ಲೂ ಅಳವಡಿಸಿಕೊಳ್ಳಬೇಕೆಂದು ಅವರು ತಿಳಿಸಿದರು.

ಅಂಬೇಡ್ಕರರ ಆಶಯಕ್ಕೆ ಮಸಿ ಬಳಿದವರು ಕಾಂಗ್ರೆಸ್ಸಿಗರು : ವಿಧಾನಪರಿಷತ್ ವಿರೋಧ ಪಕ್ಷದ ನಾಯಕರಾದ ಶ್ರೀ ಛಲವಾದಿ ನಾರಾಯಣಸ್ವಾಮಿ ರವರು ಮಾತನಾಡಿ, ದೇಶದ ಮೇಲೆ ತುರ್ತು ಪರಿಸ್ಥಿತಿ ಹೇರಿ ಡಾ. ಅಂಬೇಡ್ಕರರ ಆಶಯಕ್ಕೆ ಮಸಿ ಬಳಿದವರು ಕಾಂಗ್ರೆಸ್ಸಿಗರು ಎಂದು ಟೀಕಿಸಿದರು. ಅವರಿದ್ದ ಕಾಲದಲ್ಲಿ ಅಂಬೇಡ್ಕರರನ್ನು ಸಹಿಸಿಕೊಳ್ಳದ ಕಾಂಗ್ರೆಸ್, ಇವತ್ತು ಅವರ ಫೋಟೊ ಇಟ್ಟು ಭಾಷಣ ಮಾಡುತ್ತದೆ. ತಾವೇ ಸಂವಿಧಾನ ರಕ್ಷಕರೆಂದು ಹೇಳುತ್ತದೆ ಎಂದು ಆಕ್ಷೇಪಿಸಿದರು. ಜಮ್ಮು ಕಾಶ್ಮೀರದಲ್ಲಿ ಸಂವಿಧಾನಕ್ಕೆ ಬೆಲೆ ಕೊಟ್ಟಿದ್ದೀರಾ? ಎಂದು ಹೇಳಿದ ಅವರು, ಅಂಬೇಡ್ಕರರ ಆಶಯಕ್ಕೆ ವಿರುದ್ಧವಾಗಿದ್ದ ಹಾಗೂ ಬೆಂಕಿಯಂತೆ ಸುಡುತ್ತಿದ್ದ 370 ಆರ್ಟಿಕಲ್‌ನ್ನು ರದ್ದು ಮಾಡಿದ ಕೀರ್ತಿ ಬಿಜೆಪಿ ಮತ್ತು ಪ್ರಧಾನಿ ಶ್ರೀ ನರೇಂದ್ರ ಮೋದಿ ಅವರ ನೇತೃತ್ವಕ್ಕೆ ಸಲ್ಲುತ್ತದೆ ಎಂದು ಹೇಳಿದರು.

ಮಾಜಿ ಕೇಂದ್ರ ಸಚಿವರಾದ ಶ್ರೀ ಎ. ನಾರಾಯಣಸ್ವಾಮಿ, ಮಹಿಳಾ ಮೋರ್ಚಾ ರಾಜ್ಯಾಧ್ಯಕ್ಷೆ ಕು. ಸಿ.ಮಂಜುಳಾ, ಬಿಜೆಪಿ ನಿಕಟಪೂರ್ವ ರಾಜ್ಯ ಕಾರ್ಯದರ್ಶಿ ಶ್ರೀ ಜಗದೀಶ್ ಹಿರೇಮನಿ, ಬೆಂಗಳೂರು ಉತ್ತರ ಜಿಲ್ಲಾಧ್ಯಕ್ಷರಾದ ಶ್ರೀ ಎಸ್. ಹರೀಶ್, ಬೆಂಗಳೂರು ಕೇಂದ್ರ ಜಿಲ್ಲಾಧ್ಯಕ್ಷರಾದ ಶ್ರೀ ಸಪ್ತಗಿರಿ ಗೌಡ, ರಾಜ್ಯ ಕಾರ್ಯಾಲಯ ಕಾರ್ಯದರ್ಶಿಗಳಾದ ಶ್ರೀ ಲೋಕೇಶ್ ಅಂಬೆಕಲ್ಲು ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರು ಉಪಸ್ಥಿತರಿದ್ದರು.




# ಸಂಘಟನಾ ಪರ್ವ ವಿಶೇಷ ಸಭೆ

ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ 'ಸಂಘಟನಾ ಪರ್ವ' ವಿಶೇಷ ಸಭೆಯನ್ನು ಅಯೋಜಿಸಲಾಗಿತ್ತು. ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಗಳು ಹಾಗೂ ದಕ್ಷಿಣ ರಾಜ್ಯಗಳ 'ಸಂಘಟನಾ ಪರ್ವ' ಅಭಿಯಾನದ ರಾಷ್ಟ್ರೀಯ ವೀಕ್ಷಕರಾದ ಶ್ರೀ ತರುಣ್ ಚುಗ್ ರವರ ಉಪಸ್ಥಿತಿ ಹಾಗೂ ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ ರವರ ಅಧ್ಯಕ್ಷತೆಯಲ್ಲಿ ಸಂಘಟನಾ ಪರ್ವ ವಿಶೇಷ ಸಭೆಯನ್ನು ಆಯೋಜಿಸಲಾಗಿತ್ತು.

ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಗಳು ಹಾಗೂ ದಕ್ಷಿಣ ರಾಜ್ಯಗಳ 'ಸಂಘಟನಾ ಪರ್ವ' ಅಭಿಯಾನದ ರಾಷ್ಟ್ರೀಯ ವೀಕ್ಷಕರಾದ ಶ್ರೀ ತರುಣ್ ಚುಗ್ ರವರು ಸಕ್ರಿಯ ಸದಸ್ಯತ್ವ ಅಭಿಯಾನ ಮತ್ತು ಬೂತ್ ಸಮಿತಿಗಳ ರಚನೆಯನ್ನು ಪರಿಶೀಲಿಸಿದರು. ಸಭೆಯಲ್ಲಿ ಜಿಲ್ಲಾ ಘಟಕಗಳಿಂದ ಅಹವಾಲುಗಳನ್ನು ಸ್ವೀಕರಿಸಿದ ನಂತರ ಶ್ರೀ ತರುಣ್ ಚುಗ್ ಅವರು ಸದಸ್ಯತ್ವ ಮತ್ತು ಸಕ್ರಿಯ ಸದಸ್ಯತ್ವ ಅಭಿಯಾನದಲ್ಲಿ ಬಹುತೇಕ ಗುರಿಯನ್ನು ತಲುಪಿರುವುದರ ಕುರಿತು ಜಿಲ್ಲಾ ಘಟಕಗಳನ್ನು ಶ್ಲಾಘಿಸಿದರು. ಆರು ತಿಂಗಳ ಕಾಲ ನಡೆದ ಕಾರ್ಯವು ಎರಡೇ ತಿಂಗಳಲ್ಲಿ ಮುಗಿದಿದೆ ಎಂದು ಅವರು ಮೆಚ್ಚುಗೆಯನ್ನು ವ್ಯಕ್ತಪಡಿಸಿದರು.

ಸದಸ್ಯತ್ವದ ನಿಗದಿತ ಗುರಿಯನ್ನು ತಲುಪದೇ ಹಿಂದುಳಿದಿರುವ ಜಿಲ್ಲೆಗಳಿಗೆ ಡಿಸೆಂಬರ್ 15 ರೊಳಗೆ ಮಂಡಲ ಸಮಿತಿಗಳ ರಚನೆ ಮತ್ತು ಡಿಸೆಂಬರ್ 30 ರೊಳಗೆ ಬೂತ್ ಸಮಿತಿ ಮತ್ತು ಜಿಲ್ಲಾ ಸಮಿತಿಗಳ ರಚನೆಗೆ ಹೆಚ್ಚಿನ ಗಮನ ನೀಡಬೇಕು ಎಂದು ಅವರು ಸಲಹೆ ನೀಡಿದರು. ಬೂತ್ ಸಮಿತಿಗಳ ರಚನೆಯ ಗುರಿಯನ್ನು ವೇಗಗೊಳಿಸಲು ಪ್ರತ್ಯೇಕವಾಗಿ ಮತ್ತು ವ್ಯಾಪಕವಾಗಿ ವಿಸ್ತಾರಕರನ್ನು ನಿಯೋಜಿಸುವುದರ ಕುರಿತು ಯೋಚಿಸುವಂತೆ ಅವರು ಸಲಹೆ ನೀಡಿದರು.

ಬೂತ್ ಸಮಿತಿಗಳಲ್ಲಿ ಮಹಿಳೆ, ಮಹಿಳಾ ಪ್ರಮುಖ್, ಮನ್ ಕಿ ಬಾತ್ ಪ್ರಮುಖ್, ವಾಟ್ಸಾಪ್ ಪ್ರಮುಖ್ ಮತ್ತು ಬಿಎಲ್ಎ 2 ಇರಬೇಕು ಎಂದು ಅವರು ಒತ್ತಿ ಹೇಳಿದರು. ಸರಳ ಆ್ಯಪ್‌ನಲ್ಲಿ ಸದಸ್ಯತ್ವ ಮತ್ತು ಸಕ್ರಿಯ ಸದಸ್ಯತ್ವದ ವಿವರಗಳನ್ನು ಅಪ್‌ಲೋಡ್ ಮಾಡುವುದನ್ನು ಖಚಿತಪಡಿಸಿಕೊಳ್ಳಲು ಅವರು ಸಂಘಟನ ಪರ್ವದ ತಂಡಕ್ಕೆ ಕರೆ ನೀಡಿದರು.

ವಿಶೇಷ ಸಭೆಯಲ್ಲಿ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಶ್ರೀ ತರುಣ್ ಚುಗ್, ಬಿಜೆಪಿ ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ, ಕರ್ನಾಟಕದ ಸಹ ಉಸ್ತುವಾರಿಗಳಾದ ಡಾ. ಸುಧಾಕರ ರೆಡ್ಡಿ, ಕರ್ನಾಟಕದ ಚುನಾವಣಾ ವೀಕ್ಷಕ ಮತ್ತು ಕೇಂದ್ರದ ಮಾಜಿ ಸಚಿವ ರಾದ ಶ್ರೀ ರಾಧಾಕೃಷ್ಣನ್, ವಿಪಕ್ಷ ನಾಯಕರಾದ ಶ್ರೀ ಆರ್. ಅಶೋಕ, ವಿಧಾನಪರಿಷತ್ ವಿಪಕ್ಷ ನಾಯಕರಾದ ಶ್ರೀ ಛಲವಾದಿ ನಾರಾಯಣಸ್ವಾಮಿ, ವಿಧಾನಪರಿಷತ್ ಸದಸ್ಯರಾದ ಡಾ. ಸಿ.ಟಿ. ರವಿ, ಶ್ರೀ ಎನ್. ರವಿಕುಮಾರ್, ಸಂಘಟನಾ ಪರ್ವದ ಚುನಾವಣಾಧಿಕಾರಿಗಳಾದ ಕ್ಯಾಪ್ಟನ್ ಗಣೇಶ್ ಕಾರ್ಣಿಕ್, ಶಾಸಕರು, ವಿಧಾನಪರಿಷತ್ ಸದಸ್ಯರು, ಜಿಲ್ಲಾಧ್ಯಕ್ಷರು, ಜಿಲ್ಲಾ ಚುನಾವಣಾಧಿಕಾರಿಗಳು ಹಾಗೂ ಸಹ ಚುನಾವಣಾಧಿಕಾರಿಗಳು, ಜಿಲ್ಲಾ ವೀಕ್ಷಕರ ತಂಡ, ಸದಸ್ಯತಾ ಅಭಿಯಾನದ ತಂಡ ಮತ್ತು ರಾಜ್ಯ ಪದಾಧಿಕಾರಿಗಳು ಉಪಸ್ಥಿತರಿದ್ದರು.

## ಚರ್ಚೆಗೊಂದು ಸಾಲು...

**...ಸಂಘಟನೆಯಲ್ಲಿ ಸಿಂಹಾವಲೋಕನದಂತೆ ಆತ್ಮಸಾಕ್ಷಿಗನುಗುಣವಾದ ಆತ್ಮಾವಲೋಕನವೂ ಅತ್ಯವಶ್ಯಕ**





ಸಂವಿಧಾನ ದಿನಾಚರಣೆ

# ಕೈನಿಂದ ಸಂವಿಧಾನಕ್ಕೆ ಧಕ್ಕೆ

ಸಂವಿಧಾನ ದಿನಾಚರಣೆಯ ಪ್ರಯುಕ್ತ ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಆಯೋಜಿಸಿದ್ದ 'ಸಂವಿಧಾನ ಸನ್ಮಾನ ಅಭಿಯಾನ'ವನ್ನು ಬಿಜೆಪಿ ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ ರವರು ಉದ್ಘಾಟಿಸಿ ಮಾತನಾಡಿ ಸ್ವಾತಂತ್ರ್ಯ ಬಂದಾಗಿನಿಂದ ದೇಶದ ಆಡಳಿತದ ಚುಕ್ಕಾಣಿ ಹಿಡಿದ ಕಾಂಗ್ರೆಸ್ ಪಕ್ಷವು ಹಲವಾರು ಬಾರಿ ಸಂವಿಧಾನಕ್ಕೆ ತಿದ್ದುಪಡಿ ಮಾಡಿದೆ. ಸಂವಿಧಾನವನ್ನು ದುರುಪಯೋಗಿಸಿ ದೇಶದಲ್ಲಿ ತುರ್ತು ಪರಿಸ್ಥಿತಿ ಹೇರುವ ಹೇಯ ಕೃತ್ಯ ಕಾಂಗ್ರೆಸ್ ನೇತೃತ್ವದಲ್ಲಾಗಿದೆ ಎಂಬುದನ್ನು ದೇಶ- ರಾಜ್ಯದ ಜನರು ಮರೆತಿಲ್ಲ ಎಂದು ಹೇಳಿದರು.

ಸಂವಿಧಾನಕ್ಕೆ ಗೌರವ ತರುವ ನಿಟ್ಟಿನಲ್ಲಿ ಸಂವಿಧಾನವನ್ನು ಈ ದೇಶದ ಪ್ರತಿಯೊಬ್ಬ ಪ್ರಜೆಯೂ ಗೌರವದಿಂದ ಕಾಣುವ ಮತ್ತು ಪಾಲಿಸುವತ್ತ ಬಿಜೆಪಿ ಮುಂದಾಗಿದೆ. ನವೆಂಬರ್ 21ರಿಂದ ಜನವರಿ 26ರವರೆಗೆ 2 ತಿಂಗಳಕಾಲ ದೇಶಾದ್ಯಂತ ಸಂವಿಧಾನ ಸನ್ಮಾನ ಅಭಿಯಾನ ಆಚರಿಸಲಾಗುತ್ತಿದೆ, ಸಂವಿಧಾನ ಒಂದು ಧರ್ಮ ಗ್ರಂಥ, ಸಂವಿಧಾನಕ್ಕೆ ಅವಹೇಳನ ಮಾಡಿದ ಕಾಂಗ್ರೆಸ್ಸಿಗರು ಸಂವಿಧಾನದ ರಕ್ಷಕರು, ಸಂವಿಧಾನ ಪ್ರತಿಪಾದಕರಂತೆ ಕಪಟ ನಾಟಕವನ್ನು ಹಲವಾರು ದಶಕಗಳಿಂದ ನಿರಂತರವಾಗಿ ಮಾಡುತ್ತ ಬಂದಿದ್ದಾರೆ. ಕಾಂಗ್ರೆಸ್ ಪಕ್ಷದವರು ಸಂವಿಧಾನಕ್ಕೆ ಧಕ್ಕೆ ತರುವ ನಿಟ್ಟಿನಲ್ಲಿ ಕೆಲಸ ಮಾಡಿದ್ದಾರೆ ಎಂದು ಟೀಕಿಸಿದರು. ಕಾಂಗ್ರೆಸ್ ಪಕ್ಷದವರು ಇತಿಹಾಸವನ್ನು ಮರೆಮಾಚಿಸುವ ಕೆಲಸ ನಿರಂತರವಾಗಿ ಮಾಡುತ್ತ ಬಂದಿದ್ದಾರೆ ಅದನ್ನು ತೊಡೆದು ಹಾಕಿ, ಡಾ. ಬಾಬಾಸಾಹೇಬ ಅಂಬೇಡ್ಕರರ ನೇತೃತ್ವದಲ್ಲಿ ರಚಿಸಿದ ಸಂವಿಧಾನಕ್ಕೆ ಸಂಪೂರ್ಣ ಗೌರವ ತಂದು ಕೊಡುವ ಪ್ರಾಮಾಣಿಕ ಕೆಲಸವನ್ನು ಈ ದೇಶದ ಹೆಮ್ಮೆಯ ಪ್ರಧಾನಮಂತ್ರಿ ನರೇಂದ್ರ ಮೋದಿ ಮಾಡಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಡಾ.ಅಂಬೇಡ್ಕರರ ಪರಿಶ್ರಮ, ಬೆವರಿನ ಫಲಶೃತಿಯ ಫಲವಾಗಿ ಸಮಾನತೆ, ಸ್ವಾವಲಂಬನೆ, ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಸಂವಿಧಾನದ ಮೂಲಕ ಕೊಡಲಾಗಿದೆ. ಸಂವಿಧಾನವು ಪ್ರಜಾಪ್ರಭುತ್ವ ವ್ಯವಸ್ಥೆಯ ಪಾಲಿಗೆ ಒಂದು ಧರ್ಮಗ್ರಂಥ ಎಂದು ವಿಶ್ಲೇಷಿಸಿದರು. ನಮ್ಮೆಲ್ಲರ ನೇತೃತ್ವದಲ್ಲಿ ಸಂವಿಧಾನಕ್ಕೆ ಗೌರವ ಕೊಡುವ ಕೆಲಸ ಆಗಬೇಕಿದೆ. ಸಂವಿಧಾನವನ್ನು ರಕ್ಷಿಸುವ ಕರ್ತವ್ಯ ಪ್ರತಿಯೊಬ್ಬ ಭಾರತೀಯರದ್ದು ಎಂದು ಹೇಳಿದರು.

ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಶ್ರೀ ಪಿ. ರಾಜೀವ್ ರವರು ಸಂವಿಧಾನದ ಪೀಠಿಕೆಯನ್ನು ಓದಿದರು. ಪ್ರಕೋಷ್ಠಗಳ ರಾಜ್ಯ ಸಂಯೋಜಕರಾದ ಎಸ್. ದತ್ತಾತ್ರಿ, ಸಂಸದರಾದ ಶ್ರೀ ಬಸವರಾಜ ಬೊಮ್ಮಾಯಿ, ವಿಧಾನಪರಿಷತ್ ಪ್ರತಿಪಕ್ಷ ನಾಯಕರಾದ ಶ್ರೀ ಛಲವಾದಿ ನಾರಾಯಣಸ್ವಾಮಿ, ವಿಧಾನಪರಿಷತ್ತಿನ ಸದಸ್ಯರಾದ ಶ್ರೀ ಎನ್. ರವಿಕುಮಾರ್, ಶ್ರೀ ಬಿ.ಜಿ. ಪಾಟೀಲ್, ವಿಧಾನಪರಿಷತ್ತಿನ ಮಾಜಿ ಸದಸ್ಯರಾದ ಕ್ಯಾ. ಗಣೇಶ್ ಕಾರ್ಣಿಕ್, ಶಾಸಕರಾದ ಶ್ರೀ ಬಸವರಾಜ ಮತ್ತಿಮೂಡ್, ಮಹಿಳಾ ಮೋರ್ಚಾ ರಾಜ್ಯಾಧ್ಯಕ್ಷೆ ಕು. ಸಿ. ಮಂಜುಳಾ, ಬಿಜೆಪಿ ರಾಜ್ಯ ಕಾರ್ಯದರ್ಶಿ ಶ್ರೀಮತಿ ಲಲಿತಾ ಅನಾಪುರ, ಮುಖಂಡರಾದ ಶ್ರೀ ಜಗದೀಶ್ ಹಿರೇಮನಿ, ಉಮೇಶ್ ಕಾರಜೋಳ ಹಾಗೂ ಮುಂತಾದವರು ಉಪಸ್ಥಿತರಿದ್ದರು.

ಸರ್ವರಿಗೂ ಸಮಾನ ಅವಕಾಶ ನೀಡುವ ಸಂವಿಧಾನವನ್ನು ಡಾ. ಬಿ.ಆರ್. ಅಂಬೇಡ್ಕರ್ ರವರು ನೀಡಿದ್ದು, ಅದು ಸಾರ್ವಕಾಲಿಕ ಸದಾ ಪ್ರಸ್ತುತ. ಸಂವಿಧಾನದ ಕುರಿತು ಅಪಸ್ವರ ಬರಬಾರದು.

**- ಛಲವಾದಿ ನಾರಾಯಣಸ್ವಾಮಿ,**

**ವಿಧಾನಪರಿಷತ್ ಪ್ರತಿಪಕ್ಷ ನಾಯಕರು**

ಸ್ವಾತಂತ್ರ್ಯ ನಂತರದಲ್ಲಿ ಸಂವಿಧಾನ ರಚನೆ ದೊಡ್ಡ ಸವಾಲಾಗಿತ್ತು. ಆಗ ಸಂವಿಧಾನ ಸಮಿತಿಯು ಸುದೀರ್ಘ- ಎಲ್ಲ ಆಯಾಮಗಳಲ್ಲಿ ಚರ್ಚೆ ಮಾಡಿ, ಡಾ. ಬಿ.ಆರ್. ಅಂಬೇಡ್ಕರ್ ರವರ ಮಾನವೀಯ ತತ್ವಗಳನ್ನು ಸೇರಿಸಿದ್ದರಿಂದ ನಮ್ಮ ಸಂವಿಧಾನವು ವಿಶ್ವದಲ್ಲೇ ಅತ್ಯಂತ ಶ್ರೇಷ್ಠ ಸಂವಿಧಾನ ಎನಿಸಿದೆ.

**- ಬಸವರಾಜ ಬೊಮ್ಮಾಯಿ, ಸಂಸದರು**



### ಚುನಾವಣಾ ಫಲಿತಾಂಶಗಳ

# ಆತ್ಮಾವಲೋಕನ

### ಹಾಗೂ

# ಸಿಂಹಾವಲೋಕನ

**ಶ್ರೀ ನರೇಂದ್ರ ಮೋದಿಯವರ ನೇತೃತ್ವ, ಏಕನಾಥ ಶಿಂಧೆ ಸರಕಾರದ ಜನಪರ ನಿರ್ಧಾರಗಳು ಹಾಗೂ ಸ್ಥಳೀಯವಾಗಿ ಹಿಂದುತ್ವದ ಪರವಾದ ಸಂಘಟನೆಗಳ ಸಂಘಟಿತ ಚುನಾವಣಾ ಕಾರ್ಯತಂತ್ರಗಳು ಚುನಾವಣೆಯ ಸಕಾರಾತ್ಮಕ ಫಲಿತಾಂಶಕ್ಕೆ ಕಾರಣ ಎನ್ನಬಹುದಾದರೂ, ಶ್ರೀ ನರೇಂದ್ರ ಮೋದಿಯವರ ಏಕ್ ಹೈ ತೊ ಸೇಫ್ ಹೈ ಮತ್ತು ಶ್ರೀ ಯೋಗಿ ಆದಿತ್ಯನಾಥ್‌ರವರ ಬಟೇಂಗೆ ತೊ ಕಟೇಂಗೆ ಘೋಷವಾಕ್ಯಗಳು ಬಿಜೆಪಿಯನ್ನು ಜನರ ಹೃದಯದೊಳಗೆ ತೆಗೆದುಕೊಂಡು ಹೋಗಿ ಬಿಟ್ಟವು. ಇದೆಲ್ಲದರ ಜೊತೆಗೆ ದೇವೇಂದ್ರ ಫಡ್ನವೀಸ್, ಏಕನಾಥ ಶಿಂಧೆ ಮತ್ತು ಅಜಿತ್ ಪವಾರ್ ರವರ ಸಮನ್ವಯತೆಯ ಕಾರ್ಯತಂತ್ರ ಚುನಾವಣಾ ಫಲಿತಾಂಶದ ಮೇಲೇ ಭಾರೀ ಪ್ರಮಾಣದ ಸಕಾರಾತ್ಮಕ ಪರಿಣಾಮ ಬೀರಿರುವುದನ್ನು ಅಲ್ಲಗೆಳೆಯಲು ಯಾರಿಂದಲೂ ಸಾಧ್ಯವಿಲ್ಲ.**

ಎರಡು ರಾಜ್ಯಗಳ ವಿಧಾನಸಭಾ ಚುನಾವಣೆಗಳ ಹಾಗೂ ರಾಜ್ಯದಲ್ಲಿ ನಡೆದ ಮೂರು ವಿಧಾನಸಭಾ ಕ್ಷೇತ್ರದ ಉಪಚುನಾವಣೆಗಳ ಫಲಿತಾಂಶ ಬಿಜೆಪಿಯ ಆತ್ಮಬಲದ ವೃದ್ಧಿಗೂ ಕಾರಣವಾಗಿರುವುದರ ಜೊತೆಗೆ ಆತ್ಮಾವಲೋಕನ ಮಾಡಿಕೊಳ್ಳಬೇಕಾದ ಸಂದರ್ಭವನ್ನೂ ಸೃಷ್ಟಿಸಿ ಬಿಟ್ಟಿದೆ. ಮಹಾರಾಷ್ಟ್ರದಲ್ಲಿ ಆ ರಾಜ್ಯದ ಜನತೆ ನೀಡಿರುವ ಅಭೂತಪೂರ್ವ ಬೆಂಬಲ ಬಿಜೆಪಿ ಮೇಲಿನ ಭರವಸೆಯ ಪ್ರತೀಕ. ಹಾಗೆಯೇ ಜಾರ್ಖಂಡ್ ವಿಧಾನಸಭಾ ಚುನಾವಣೆಯ ಫಲಿತಾಂಶ ಬಿಜೆಪಿಗೆ ಸ್ಥಳೀಯ ಪಕ್ಷಗಳನ್ನು ಎದುರಿಸಲು ಕಾರ್ಯಕತಂತ್ರವನ್ನು ರೂಪಿಸಬೇಕಾದ ಸವಾಲು. ಆದರೆ ಇದೆಲ್ಲಕ್ಕಿಂತ ಮಿಗಿಲಾಗಿ ರಾಜ್ಯದ ಮೂರು ವಿಧಾನಸಭಾ ಕ್ಷೇತ್ರದ ಚುನಾವಣಾ ಫಲಿತಾಂಶ ಮಾತ್ರ ರಾಜ್ಯ ಬಿಜೆಪಿಯನ್ನು ಆತ್ಮಾವಲೋಕನ ಮಾಡಿಕೊಳ್ಳಲೇ ಬೇಕಾದ ಅನಿವಾರ್ಯ ಪರಿಸ್ಥಿತಿಗೆ ತಂದು ನಿಲ್ಲಿಸಿಬಿಟ್ಟಿದೆ.

ಯಾವುದೇ ರಾಜಕೀಯ ಪಂಡಿತರೂ, ಮಾಧ್ಯಮಗಳು ನಿರೀಕ್ಷಿಸದೆ ಇದ್ದ ಫಲಿತಾಂಶವನ್ನು ಮಹಾರಾಷ್ಟ್ರದ ಜನತೆ ನೀಡಿದ್ದಾರೆ. ಬಿಜೆಪಿ ನೇತೃತ್ವದ ಮಹಾಯುತಿ ಮೈತ್ರಿಕೂಟ 236 ಸ್ಥಾನ ಗೆಲ್ಲಿಸುವುದರ ಮೂಲಕ ಅತ್ಯಂತ ದೊಡ್ಡದಾದ ಜವಾಬ್ದಾರಿಯನ್ನು ಹೊರಿಸಿದ್ದಾರೆ. ಏಕನಾಥ ಶಿಂಧೆಯವರ ಆಡಳಿತದ ಅವಧಿಯಲ್ಲಿಯೇ ನಡೆದ ಚುನಾವಣೆ ಇದಾದರೂ, ಹಲವು ರಾಜಕೀಯ ಸ್ಥಿತ್ಯಂತರಗಳ ನಡುವೆ ನಡೆದ ಚುನಾವಣೆಯಾದರೂ ಬಿಜೆಪಿ ಮೈತ್ರಿಕೂಟದ ಮೇಲಿನ ಒಲವು ಮಹಾರಾಷ್ಟ್ರದ ಜನತೆಗೆ ಒಂದಿಷ್ಟೂ ಕಡಿಮೆಯಾಗಿಲ್ಲ ಎಂಬುದಕ್ಕೆ ಈ ಚುನಾವಣೆ ಸಾಕ್ಷಿಯಾಗಿದೆ.

ಕಳೆದ ಲೋಕಸಭಾ ಚುನಾವಣೆಯಲ್ಲಿ ಈ ಪ್ರಮಾಣದ ಯಶಸ್ಸನ್ನು ಇದೇ ಮೈತ್ರಿಕೂಟ ಪಡೆದಿರಲಿಲ್ಲ. ಆದರೆ ಕೆಲವೇ ತಿಂಗಳಿನ ನಂತರ ನಡೆದ ಈ ಚುನಾವಣೆಯಲ್ಲಿ ಮಹಾರಾಷ್ಟ್ರದ ಜನತೆ ತದ್ವಿರುದ್ಧವಾದ ಫಲಿತಾಂಶವನ್ನು ನೀಡುವ ಮೂಲಕ ಉದ್ಧವಠಾಕ್ರೆ, ಶರದ್‌ಪವಾರ್ ಹಾಗೂ ಕಾಂಗ್ರೆಸ್ ನಾಯಕತ್ವವನ್ನು ಸಂಪೂರ್ಣವಾಗಿ ತಿರಸ್ಕರಿಸಿದ್ದಾರೆ. ಶ್ರೀ ನರೇಂದ್ರ ಮೋದಿಯವರ ನೇತೃತ್ವ, ಏಕನಾಥ ಶಿಂಧೆ ಸರಕಾರದ ಜನಪರ ನಿರ್ಧಾರಗಳು ಹಾಗೂ ಸ್ಥಳೀಯವಾಗಿ ಹಿಂದುತ್ವದ ಪರವಾದ ಸಂಘಟನೆಗಳ ಸಂಘಟಿತ ಚುನಾವಣಾ ಕಾರ್ಯತಂತ್ರಗಳು ಚುನಾವಣೆಯ ಸಕಾರಾತ್ಮಕ ಫಲಿತಾಂಶಕ್ಕೆ ಕಾರಣ ಎನ್ನಬಹುದಾದರೂ, ಶ್ರೀ ನರೇಂದ್ರ ಮೋದಿಯವರ 'ಏಕ್ ಹೈ ತೊ ಸೇಫ್ ಹೈ' ಮತ್ತು ಶ್ರೀ ಯೋಗಿ ಆದಿತ್ಯನಾಥ್‌ರವರ 'ಬಟೇಂಗೆ ತೊ ಕಟೇಂಗೆ' ಘೋಷವಾಕ್ಯಗಳು ಬಿಜೆಪಿಯನ್ನು ಜನರ ಹೃದಯದೊಳಗೆ ತೆಗೆದುಕೊಂಡು ಹೋಗಿ ಬಿಟ್ಟವು. ಇದೆಲ್ಲದರ ಜೊತೆಗೆ ದೇವೇಂದ್ರ ಫಡ್ನವೀಸ್, ಏಕನಾಥ ಶಿಂಧೆ ಮತ್ತು ಅಜಿತ್ ಪವಾರ್ ರವರ ಸಮನ್ವಯತೆಯ ಕಾರ್ಯತಂತ್ರ ಚುನಾವಣಾ ಫಲಿತಾಂಶದ ಮೇಲೇ ಭಾರೀ ಪ್ರಮಾಣದ ಸಕಾರಾತ್ಮಕ ಪರಿಣಾಮ ಬೀರಿರುವುದನ್ನು ಅಲ್ಲಗೆಳೆಯಲು ಯಾರಿಂದಲೂ ಸಾಧ್ಯವಿಲ್ಲ.

ಹಲವು ಆರೋಪಗಳ ಸುಳಿಯ ನಡುವೆಯೂ ಹೇಮಂತ್ ಸೂರೇನ್ ಜೆಎಂಎಂ ಮೈತ್ರಿಕೂಟವನ್ನು ಗೆಲುವಿನ ದಡಕ್ಕೆ ಕೊಂಡೊಯ್ಯುವಲ್ಲಿ ಯಶಸ್ವಿಯಾಗಿದ್ದಾರೆ. ಇಲ್ಲಿ ಐಎನ್‌ಡಿಐಎ ಯ ಪ್ರಭಾವಕ್ಕಿಂತ ಹೇಮಂತ್ ಸೂರೇನ್ ಹಾಗೂ ಅವರ ಪತ್ನಿ ಕಲ್ಪನಾರವರ ಮೇಲೆ ಜಾರ್ಖಂಡ್‌ನ ಜನತೆ ಇಟ್ಟ ಅತಿಯಾದ ವಿಶ್ವಾಸ ಬಿಜೆಪಿಯ ದಾರಿಗೆ ಅಡ್ಡವಾಯಿತು. ರಾಷ್ಟ್ರೀಯ ಪಕ್ಷ ಕಾಂಗ್ರೆಸ್ ದೇಶದ ಇನ್ನಿತರ ರಾಜ್ಯಗಳಂತೆ ಇಲ್ಲಿಯೂ ನಗಣ್ಯವಾಗುತ್ತಿರುವುದು

ಜಾರ್ಖಂಡ್ ಫಲಿತಾಂಶ ಸಾಬೀತುಪಡಿಸಿದೆ. ಸ್ಥಳೀಯ ಪಕ್ಷಗಳ ವಿರುದ್ಧ ಇನ್ನಷ್ಟು ಪರಿಣಾಮಕಾರಿಯಾದ ಕಾರ್ಯತಂತ್ರವನ್ನು ರೂಪಿಸಬೇಕಾದ ಸವಾಲು ಬಿಜೆಪಿಯದ್ದಾಗಿದೆ.

ರಾಜ್ಯದಲ್ಲಿ ನಡೆದ ಮೂರು ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆಯಲ್ಲಿ ಮೂರೂ ಕ್ಷೇತ್ರಗಳನ್ನು ಎನ್‌ಡಿಎ ಮೈತ್ರಿ ಕೂಟ ಕಳೆದುಕೊಂಡಿರುವುದು ಅತ್ಯಂತ ಗಂಭೀರದ ವಿಷಯ. ಅದರಲ್ಲೂ ಶಿಗ್ಗಾಂವಿ ಮತ್ತು ಚನ್ನಪಟ್ಟಣಗಳೆರಡೂ ನಮ್ಮದೇ ಸ್ಥಾನಗಳಾಗಿದ್ದವು. ಮಾಜಿ ಮುಖ್ಯಮಂತ್ರಿಗಳು ಗೆದ್ದ ಕ್ಷೇತ್ರಗಳಾಗಿದ್ದವು. ಅದೇ ಮಾಜಿ ಮಾಜಿ ಮುಖ್ಯಮಂತ್ರಿಗಳೇ ತಮ್ಮ ಪುತ್ರರುಗಳನ್ನೇ ಕಣಕ್ಕಿಳಿಸಿದ್ದರು. ಆದರೂ ಈ ಎರಡೂ ಕ್ಷೇತ್ರಗಳಲ್ಲಿ ಎನ್‌ಡಿಎ ಗಣನೀಯ ಅಂತರದಿಂದಲೇ ಸೋಲಬೇಕಾಗಿದೆ. ಹಾಗೆ ನೋಡಿದರೆ ಸಂಡೂರು ಕ್ಷೇತ್ರದಲ್ಲಿ ಕಾಂಗ್ರೆಸ್ ಪರವಾದ ವಾತಾವರಣವೇ ನಿಚ್ಚಳವಾಗಿತ್ತು. ಆದರೂ ಸಂಡೂರು ಕ್ಷೇತ್ರದಲ್ಲಿ ಬಿಜೆಪಿಯ ಶ್ರೀ ಬಂಗಾರು ಹನುಮಂತು ಒಡ್ಡಿದ ಸವಾಲು ಹಾಗೂ ಪಡೆದ ಮತಗಳು ನಿಜಕ್ಕೂ ಪ್ರಶಂಸನೀಯ. ಗೆಲ್ಲಲು ಸಾಧ್ಯವೇ ಇಲ್ಲ ಎನ್ನುವ ಸಂಡೂರು ಕ್ಷೇತ್ರದಲ್ಲಿ ಒಡ್ಡಿದ ಸ್ಪರ್ಧೆಯನ್ನು ಚನ್ನಪಟ್ಟಣ ಹಾಗೂ ಶಿಗ್ಗಾಂವಿ ಕ್ಷೇತ್ರಗಳಲ್ಲಿ ನೀಡುವಲ್ಲಿ ಎನ್‌ಡಿಎ ವಿಫಲವಾಗಿರುವುದನ್ನು ಒಪ್ಪಿಕೊಳ್ಳಲೇ ಬೇಕು.

ರಾಜ್ಯದಲ್ಲಿ ಎನ್‌ಡಿಎ ಮೈತ್ರಿಕೂಟಕ್ಕೆ ಅತ್ಯಂತ ಪೂರಕವಾದ ವಾತಾವರಣವಿತ್ತು. ವಕ್ಫ್ ಹಗರಣ, ವಾಲ್ಮೀಕಿ ನಿಗಮದ ಹಗರಣ, ಸ್ವತಃ ಮುಖ್ಯಮಂತ್ರಿಗಳ ಮೇಲಿದ್ದ ಮೂಡಾ ಸೈಟು ಹಗರಣಗಳೂ ಸೇರಿದಂತೆ ಸಾಲು ಸಾಲು ಹಗರಣಗಳು ಆಡಳಿತಾರೂಢ ಕಾಂಗ್ರೆಸ್ ಮೇಲಿದ್ದವು. ಇವೆಲ್ಲದರ ಲಾಭವನ್ನು ಪಡೆಯುವಲ್ಲಿ ರಾಜ್ಯದ ಎನ್‌ಡಿಎ ಮೈತ್ರಿಕೂಟ ವಿಫಲವಾಗಿರುವುದನ್ನು ಒಪ್ಪಿಕೊಳ್ಳಲೇ ಬೇಕು. ಪಕ್ಕದ ಮಹಾರಾಷ್ಟ್ರದಲ್ಲಿ ಇದ್ದ ಪೂರಕ ಅಂಶಗಳೆಲ್ಲವೂ ರಾಜ್ಯದ ಎನ್‌ಡಿಎ ಮೈತ್ರಿಕೂಟಕ್ಕೆ ಇತ್ತು. ಅಲ್ಲಿ ಮೂರು ಪಕ್ಷಗಳ ಒಕ್ಕೂಟವಿದ್ದರೆ ಇಲ್ಲಿ ಕೇವಲ ಎರಡು ಪಕ್ಷಗಳ ಒಕ್ಕೂಟವಿತ್ತು. ಮಹಾರಾಷ್ಟ್ರಕ್ಕಿಂತ ಹೆಚ್ಚಾಗಿ ರಾಜ್ಯದಲ್ಲಿ ಆಡಳಿತ ವಿರೋಧಿ ಸಂಗತಿಗಳಿತ್ತು. ಹಿಂದುತ್ವದ ವಿರುದ್ಧದ ಅಲೆಯೂ ರಾಜ್ಯ ಕಾಂಗ್ರೆಸ್ ಸರಕಾರದ ಮೇಲಿತ್ತು. ಸ್ವತಃ ಮುಖ್ಯಮಂತ್ರಿಗಳ ಮೇಲೆಯೇ ಮೂಡಾ ಸೈಟುಗಳನ್ನು ಅಕ್ರಮವಾಗಿ ಪಡೆದ ಆರೋಪ ಸಾಕ್ಷಿ ಸಮೇತ ಬಯಲಾಗಿತ್ತು. ವಾಲ್ಮೀಕಿ ಹಗರಣದಲ್ಲಿ ರಾಜ್ಯದ ಒಬ್ಬ ಮಂತ್ರಿಯೇ ಜೈಲು ಪಾಲಾಗಿದ್ದರು. ವಕ್ಫ್ ಆತಂಕ ಇಡೀ ರಾಜ್ಯದ ಜನತೆಯಲ್ಲಿ ಮನೆ ಮಾಡಿತ್ತು. ಇದಾವುಗಳು ಎನ್‌ಡಿಎಗೆ ಪೂರಕವಾಗಲೇ ಇಲ್ಲ ಎಂಬ ಅಂಶವೇ ರಾಜ್ಯದ ಎನ್‌ಡಿಎ ಪರಾಮರ್ಶಿಸಬೇಕಾದ ಅಂಶ.

ಈ ಅಂಶವೇ ಆತ್ಮಾವಲೋಕನ ಮಾಡಿಕೊಳ್ಳಬೇಕಾದ ಸಂಗತಿ. ಆದರೆ ಈ ಆತ್ಮಾವಲೋಕನ ಆತ್ಮ ಸಾಕ್ಷಿಗನುಗುಣವಾಗಿ ಆಗಬೇಕಾಗಿದೆ ಅಷ್ಟೆ.

## ಕರ್ನಾಟಕ ರಾಜ್ಯ ಕಂಡ ಮುತ್ಸದ್ದಿ ರಾಜಕಾರಣಿ ಎಸ್.ಎಂ. ಕೃಷ್ಣ

**01.05.1932 – 10.12.2024**



ಕರ್ನಾಟಕ ರಾಜ್ಯ ಕಂಡ ಮುತ್ಸದ್ದಿ ರಾಜಕಾರಣಿ, ಶಿಸ್ತು ಹಾಗೂ ಪ್ರಬುದ್ಧ ಆಡಳಿತಕ್ಕೆ ಮಾದರಿಯಾಗಿದ್ದ ನಾಡಿನ ಇತಿಹಾಸದಲ್ಲಿ ತಮ್ಮ ಸಜ್ಜನಿಕೆ ಹಾಗೂ ಘನತೆಯ ನಡವಳಿಕೆಯಿಂದ ವಿಶೇಷ ಛಾಪು ಮೂಡಿಸಿದ್ದ ವ್ಯಕ್ತಿ ಎಸ್.ಎಂ ಕೃಷ್ಣ ಅವರು 10 ಡಿಸೆಂಬರ್ 2024ರಂದು ದೈವಾಧೀನರಾಗಿರುವುದು ಅತ್ಯಂತ ದುಃಖದ ಸಂಗತಿ.

ರಾಜ್ಯ ಹಾಗೂ ರಾಷ್ಟ್ರ ರಾಜಕಾರಣದಲ್ಲಿ ಮಹತ್ವದ ಹುದ್ದೆಗಳನ್ನು ಅಲಂಕರಿಸಿ ಇತಿಹಾಸದಲ್ಲಿ ತಮ್ಮ ಶಾಶ್ವತ ಹೆಜ್ಜೆ ಗುರುತು ಮೂಡಿಸಿರುವ ಇವರು ಮುಖ್ಯಮಂತ್ರಿಗಳಾಗಿ ಕರ್ನಾಟಕದ ಅಭಿವೃದ್ಧಿಗೆ ಅದರಲ್ಲೂ ಬೆಂಗಳೂರನ್ನು ಸಿಲಿಕಾನ್ ಸಿಟಿ ಎನಿಸಿಕೊಳ್ಳಲು ಕೊಟ್ಟ ಕೊಡುಗೆ ಎಂದೆಂದಿಗೂ ಮರೆಯಲಾಗದು. ಕೇಂದ್ರ ಸಚಿವ ಸಂಪುಟದಲ್ಲಿ ವಿವಿಧ ಹುದ್ದೆಗಳೊಂದಿಗೆ ಮಹತ್ವದ ವಿದೇಶಾಂಗ ಖಾತೆಯನ್ನು ಸಮರ್ಥವಾಗಿ ನಿಭಾಯಿಸಿ ಮಹಾರಾಷ್ಟ್ರದ ರಾಜ್ಯಪಾಲರು ಆಗಿ ಸೇವೆ ಸಲ್ಲಿಸಿದ್ದ ಮಾನ್ಯ ಕೃಷ್ಣರವರು ನಾಲ್ಕು ತಲೆಮಾರಿನ ರಾಜಕಾರಣದ ಬಹುದೊಡ್ಡ ಕೊಂಡಿಯಾಗಿದ್ದರು.

ಆರೋಗ್ಯಕರ ಮನಸ್ಸು ಕ್ರಿಯಾಶೀಲತೆಯ ಸಂಕೇತ ಎನ್ನುವ ನಿಟ್ಟಿನಲ್ಲಿ ತಮ್ಮ ಬದುಕಿನ ಕೊನೆಯ ಉಸಿರಿರುವವರೆಗೂ ಸಂಸ್ಕಾರ ಹಾಗೂ ಸುಸಂಸ್ಕೃತ ನಡವಳಿಕೆಯನ್ನು ತಮ್ಮ ಜೀವನದ ಭಾಗವಾಗಿಸಿಕೊಂಡಿದ್ದರು. ತಮ್ಮ ಇಡೀ ರಾಜಕಾರಣದ ಜೀವನದಲ್ಲಿ ಕಪ್ಪು ಕಲೆಯನ್ನು ಎಂದೂ ಅಂಟಿಸಿಕೊಳ್ಳದ ಕೃಷ್ಣರವರು ಪರಿಶುಭ್ರತೆಗೆ ಮಾದರಿಯಾಗಿದ್ದರು. ಯುವ ಪೀಳಿಗೆಯ ರಾಜಕಾರಣಿಗಳಿಗೆ ಅವರು ಆದರ್ಶದ ದಾರಿದೀಪ, ಅವರು ಇಂದು ನಮ್ಮೊಂದಿಗೆ ಇಲ್ಲದಿದ್ದರೂ ಅವರ ನಡೆ-ನುಡಿ ನಿತ್ಯವೂ ಜೀವಂತವಾಗಿ ರಾಜಕಾರಣದ ಆಗಸದಲ್ಲಿ ಮಿನುಗುತ್ತಿರುತ್ತದೆ. ಇವರ ರಾಜಕೀಯದ ಕೊನೆಯ ದಿನದ ನಿಲುವುಗಳು ಭಾರತದ ಸುಭದ್ರತೆಗೆ ಪ್ರೇರಣೆಯ ಶಕ್ತಿಯಾಗಿತ್ತು, ಅವರ ಆತ್ಮಕ್ಕೆ ಭಗವಂತ ಚಿರಶಾಂತಿ ಕರುಣಿಸಲಿ.



# ಬೀದರ್ ಜಿಲ್ಲೆಯಲ್ಲಿ ಮೊದಲ ಬಾರಿ ಕಮಲ ಅರಳಿಸಿದ ನಾರಾಯಣರಾವ ಮನ್ನಳ್ಳಿ

**ಜಿಲ್ಲಾ ಕೇಂದ್ರ ಸ್ಥಾನ ಹೊಂದಿರುವ ಬೀದರ್ ವಿಧಾನಸಭಾ ಕ್ಷೇತ್ರ ಅನೇಕ ವೈಶಿಷ್ಟ್ಯತೆ ಹೊಂದಿದೆ. ಇಲ್ಲಿ ಪಕ್ಷದ ಜೊತೆಯಲ್ಲಿದ್ದಂತಹ ವ್ಯಕ್ತಿ, ವೈಯುಕ್ತಿಕ ವರ್ಚಸ್ಸು ಸಹ ಮುಖ್ಯವಾಗಿ ಗಣನೆಗೆ ಬರುತ್ತದೆ. ಲಿಂಗಾಯತ, ದಲಿತರು, ಮುಸ್ಲೀಮರು ನಿರ್ಣಾಯಕರು. ಸಂದರ್ಭಕ್ಕನುಗುಣವಾಗಿ ಇಲ್ಲಿನ ಮತದಾರರು ಅಭ್ಯರ್ಥಿಗೆ ಮಣೆ ಹಾಕಿದ್ದುಂಟು. ಜನಸಂಘ, ಬಿಎಸ್‌ಪಿಗೆ ಮನ್ನಣೆ ನೀಡಿರುವ ಇಲ್ಲಿನ ಮತದಾರರು, ಬಿಜೆಪಿಗೂ ಆರಂಭದಲ್ಲೇ ಬಲವನ್ನು ತುಂಬಿದ್ದಾರೆ. 1983, 1989ರಲ್ಲಿ ಕರ್ನಾಟಕದಲ್ಲಿ ಬಿಜೆಪಿ ಸ್ಪರ್ಧೆಗುಂಟು ಲೆಕ್ಕಕ್ಕಿಲ್ಲ ಎನ್ನುವ ಸ್ಥಿತಿಯಲ್ಲಿತ್ತು. ಅಂಥ ಸಂದರ್ಭದಲ್ಲೇ ಬಿಜೆಪಿಯಿಂದ ನಾರಾಯಣರಾವ್ ಮನ್ನಳ್ಳಿ ಇಲ್ಲಿ ಗೆದ್ದು ವಿಧಾನಸಭೆಗೆ ಪ್ರವೇಶಿಸಿದ್ದು ವಿಶೇಷ. ಬೀದರ್ ಜಿಲ್ಲೆಯಲ್ಲಿ ಮೊದಲ ಬಾರಿ ಕಮಲ ಅರಳಿಸಿದ ದಾಖಲೆಗೆ ಮನ್ನಳ್ಳಿ ಭಾಜನರಾಗಿದ್ದಾರೆ.**



**ಸದಾನಂದ ಜೋಷಿ**
ಹಿರಿಯ ಪತ್ರಕರ್ತರು, ಬೀದರ್

ಬೀದರ್ ಜಿಲ್ಲೆಯ 6 ವಿಧಾನಸಭೆ ಕ್ಷೇತ್ರಗಳ ಪೈಕಿ ಬೀದರ್ ವಿಧಾನಸಭಾ ಕ್ಷೇತ್ರ ಅತ್ಯಂತ ಪ್ರಬುದ್ಧ ಮತದಾರರುಳ್ಳ ಕ್ಷೇತ್ರ ಎನಿಸಿದೆ. ಇಲ್ಲಿಯ ಮತದಾರರು ಯಾರದೇ ಪಾರುಪತ್ಯ ನಿರ್ಮಾಣಕ್ಕೆ ಈವರೆಗೂ ಅವಕಾಶ ನೀಡಿಲ್ಲ. ಪರಿಸ್ಥಿತಿಗನುಗುಣವಾಗಿ ಹೆಜ್ಜೆ ಹಾಕುವ ಜಾಣರು ಇಲ್ಲಿದ್ದಾರೆ. ಹೀಗಾಗಿ ಇಲ್ಲಿ ಐದು ದಶಕದ ಹಿಂದೆಯೇ ಇಲ್ಲಿ ಜನಸಂಘ ಗೆದ್ದು ಬೀಗಿದೆ. ನಾಲ್ಕು ದಶಕದ ಹಿಂದೆ ಸ್ಪರ್ಧೆಗುಂಟು ಲೆಕ್ಕಕ್ಕಿಲ್ಲ ಎಂಬ ಸ್ಥಿತಿಯಲ್ಲಿದ್ದಾಗಲೇ ಬಿಜೆಪಿ ಗೆದ್ದು ರಾಜ್ಯದ, ರಾಷ್ಟ್ರದ ಗಮನ ಸೆಳೆದಿದ್ದು ವಿಶೇಷ.

1967 ರಲ್ಲಿ ಬೀದರ್ ವಿಧಾನಸಭೆ ಕ್ಷೇತ್ರದಿಂದ ಜನಸಂಘ ಅಭ್ಯರ್ಥಿ ಚಂದ್ರಕಾಂತ ಸಿಂದೋಲ್ ಗೆದ್ದಿದ್ದರು. ಇದಾದ ನಂತರ ಇಲ್ಲಿ ಜನಸಂಘಕ್ಕೆ ಹಾಗೂ ಮುಂದೆ ಬಿಜೆಪಿಗೆ ಸಹಜವೇ ಶಕ್ತಿ ಸಿಕ್ಕಿತು. 1980ರಲ್ಲಿ ಜನಸಂಘ ಬಿಜೆಪಿಯಾಗಿ ಬದಲಾಯಿತು. ಆರಂಭದಲ್ಲಿ ಬಿಜೆಪಿ ಪ್ರಭಾವ ಅಷ್ಟೊಂದು ಇರಲಿಲ್ಲ. 1983ರಲ್ಲಿ ಮೊದಲ ಬಾರಿ ಬಿಜೆಪಿ ವಿಧಾನಸಭೆ ಅಖಾಡಕ್ಕೆ ಇಳಿಯಿತು. 224 ಕ್ಷೇತ್ರಗಳಲ್ಲಿ ಬಿಜೆಪಿ 18 ಸ್ಥಾನಗಳಲ್ಲಿ ಗೆದ್ದಿತು. ಇದರಲ್ಲಿ ಬೀದರ್‌ನಿಂದ ನಾರಾಯಣರಾವ್ ಮನ್ನಳ್ಳಿ ಸಹ ಒಬ್ಬರು. ಸಂಘದ ನೆಲೆಗಟ್ಟಿನಿಂದ ಬಂದಿದ್ದ ನಾರಾಯಣರಾವ್ ಮನ್ನಳ್ಳಿ, ಗಡಿ ಜಿಲ್ಲೆಯಲ್ಲಿ ಬಿಜೆಪಿಯನ್ನು ಕಟ್ಟಿ ಬೆಳೆಸಿದ ಬೆರಳೆಣಿಕೆಯ ನಾಯಕರಲ್ಲಿ ಪ್ರಮುಖರು. ಇವರು 1983 ಹಾಗೂ 1989ರಲ್ಲಿ ವಿಧಾನಸಭೆಗೆ ಪ್ರವೇಶಿಸಿ, ಕಾಂಗ್ರೆಸ್ ಪ್ರಾಬಲ್ಯವುಳ್ಳ ಜಿಲ್ಲೆಯಲ್ಲಿ ಬಿಜೆಪಿಗೆ ಭದ್ರ ಬುನಾದಿ ಹಾಕಿಕೊಟ್ಟರು. ಬೀದರ್ ತಾಲೂಕಿನ ಮನ್ನಳ್ಳಿ ಗ್ರಾಮದ ನಾರಾಯಣರಾವ್ ಅವರು ಬಿಜೆಪಿ ನಿಷ್ಠರು. ಜೀವಿತದ ಕೊನೆಯವರೆಗೂ ಬಿಜೆಪಿಗೆ ವಿಧೇಯರಾಗಿ ಪಕ್ಷನಿಷ್ಠೆ ಮೆರೆದಿದ್ದರು.

## ಅಜಾತಶತ್ರು ರಾಜಕಾರಣಿ

**ನಾರಾಯಣರಾವ್ ಮನ್ನಳ್ಳಿ ಬ್ರಾಹ್ಮಣರು. ಸಂಸ್ಕೃತ ಪರಿವಾರ. ರಾಜಕೀಯ ಮನೆತನ ಇವರದ್ದಾಗಿರಲಿಲ್ಲ. ಮನ್ನಳ್ಳಿ ಗ್ರಾಮವೇ ಕೇಂದ್ರ ಸ್ಥಾನ. ಎರಡು ಬಾರಿ ಶಾಸಕರಾದರೂ ಬೀದರ್ ನಗರದಲ್ಲಿ ಮನೆ ಮಾಡಲಿಲ್ಲ. ಸಂಘದಲ್ಲಿ ಸಕ್ರಿಯರಾಗಿದ್ದ ಕಾರಣಕ್ಕೆ ನಾರಾಯಣರಾವ್ ಮನ್ನಳ್ಳಿ ಅವರು ಬಿಜೆಪಿಗೆ ಬಂದರು. ಬಿಜೆಪಿ ಸ್ಥಾಪನೆಯಾದಾಗ ಜಿಲ್ಲಾ ಕೇಂದ್ರ ಬೀದರ್‌ನಲ್ಲಿ ಇದಕ್ಕೆ ನೆಲೆ ಕಂಡುಕೊಳ್ಳಲು ಶ್ರಮಿಸಿದ್ದರು. ನಾರಾಯಣರಾವ್ ಅವರು ಸರಳ, ಸಜ್ಜನ ರಾಜಕಾರಣಿ ಎಂದೇ ಪ್ರಸಿದ್ಧರಾಗಿದ್ದರು. ಬೀದರ್ ರಾಜಕೀಯದಲ್ಲಿ ಇವರು ಅಜಾತಶತ್ರು ಎನಿಸಿಕೊಂಡಿದ್ದರು. ಸರಳ ವ್ಯಕ್ತಿತ್ವ, ಪಕ್ಷದ ನಿಷ್ಠೆ, ಸಮಾಜಪರ ಕಾಳಜಿಯೇ ಇವರು ಎರಡು ಬಾರಿ ಬೀದರ್ ಕ್ಷೇತ್ರ ಪ್ರತಿನಿಧಿಸುವಂತೆ ಮಾಡಿತು.**

ವೀರಶೆಟ್ಟಿ ಕುಶನೂರ ಅವರ ಅಗಲಿಕೆ ಕಾರಣ 1982ರಲ್ಲಿ ಬೀದರ್ ಕ್ಷೇತ್ರಕ್ಕೆ ಉಪ ಚುನಾವಣೆ ನಡೆಯಿತು. ನಾರಾಯಣರಾವ ಮನ್ನಳ್ಳಿ ಅವರಿಗೆ ಈ ಚುನಾವಣೆಯಲ್ಲಿ ಬಿಜೆಪಿಯು ತನ್ನ ಅಭ್ಯರ್ಥಿಯಾಗಿ ಕಣಕ್ಕಿಳಿಸಿತ್ತು. ಆದರೆ ಇದರಲ್ಲಿ ಮನ್ನಳ್ಳಿ ಅವರು ಕಾಂಗ್ರೆಸ್ ಅಭ್ಯರ್ಥಿ ಮೊಹಸಿನ್ ಕಮಾಲ್ ಎದುರು 4385 ಮತಗಳಿಂದ ಸೋತರು. ವರ್ಷದ ಬಳಿಕ ಅಂದರೆ, 1983ರಲ್ಲಿ ವಿಧಾನಸಭೆ ಚುನಾವಣೆ ನಡೆದವು. ಮತ್ತೆ ಬಿಜೆಪಿ ಮನ್ನಳ್ಳಿ ಅವರನ್ನು ಕಣಕ್ಕಿಳಿಸಿತು. ಇದರಲ್ಲಿ ಮನ್ನಳ್ಳಿ ಅವರು ಭರ್ಜರಿ ಜಯಭೇರಿ ಬಾರಿಸಿ ಮೊದಲ ಸಲ ಬೀದರ್ ಜಿಲ್ಲೆಯಲ್ಲಿ ಕಮಲ ಅರಳಿಸಿದರು. ಮನ್ನಳ್ಳಿ ಅವರು 27,756 ಮತಗಳು ಗಳಿಸಿ, ಪಕ್ಷೇತರ ಅಭ್ಯರ್ಥಿ ಮೊಹಸಿನ್ ಕಮಾಲ್‌ರನ್ನು 6154 ಮತಗಳಿಂದ ಸೋಲಿಸಿ ಸೇಡು ತೀರಿಸಿಕೊಂಡರು.

1983ರ ಚುನಾವಣೆಯಲ್ಲಿ ಯಾವ ಪಕ್ಷಕ್ಕೂ ಸರಳ ಬಹುಮತ ಸಿಗದ ಕಾರಣ ಅತಂತ್ರ ವಿಧಾನಸಭೆ ರಚನೆಯಾಗಿತ್ತು. ಜನತಾ ಪಾರ್ಟಿ 95 ಸ್ಥಾನ ಪಡೆದರೆ, ಕಾಂಗ್ರೆಸ್ 82ರಲ್ಲಿ ಗೆದ್ದಿತ್ತು. ಸ್ಥಾಪನೆ ಬಳಿಕ ಮೊದಲ ಸಲ ಕಣಕ್ಕಿಳಿದಿದ್ದ ಬಿಜೆಪಿ 18 ಸ್ಥಾನಗಳಲ್ಲಿ ಗೆದ್ದಿತ್ತು. ಜನತಾ ಪಾರ್ಟಿಗೆ ಬಿಜೆಪಿ ಬೆಂಬಲ ನೀಡಿದ್ದ ಕಾರಣ ರಾಜ್ಯದಲ್ಲಿ ಮೊದಲ ಬಾರಿಗೆ ಕಾಂಗ್ರೆಸ್ಸೇತರ ಸರ್ಕಾರ ಅಸ್ತಿತ್ವಕ್ಕೆ ಬಂದಿತ್ತು. ಬಿಜೆಪಿ ಸಾಥ್‌ನಿಂದ ರಾಮಕೃಷ್ಣ ಹೆಗಡೆ ರವರು ಮೊದಲ ಕಾಂಗ್ರೆಸ್ಸೇತರ ಮುಖ್ಯಮಂತ್ರಿಯಾಗಿದ್ದರು. ಮನ್ನಳ್ಳಿ ಅವರು ಮೊದಲ ಬಾರಿ ಗೆದ್ದು ಆಡಳಿತಾರೂಢ ಸರ್ಕಾರದಲ್ಲಿದ್ದು, ಜಿಲ್ಲೆಯ ಅಭಿವೃದ್ಧಿಗೆ ಶ್ರಮಿಸಿದರು.

ಎರಡು ವರ್ಷದಲ್ಲೇ ಹೆಗಡೆ ಸರ್ಕಾರ ಪತನವಾದ ಬಳಿಕ 1985ರಲ್ಲಿ ಮತ್ತೆ ಚುನಾವಣೆ ಎದುರಾಯಿತು. ಆಗ ಬಿಜೆಪಿ ಮತ್ತೆ ಮನ್ನಳ್ಳಿ ಅವರಿಗೆ ಕಣಕ್ಕಿಳಿಸಿತ್ತು. ಆದರೆ ಇದರಲ್ಲಿ ಕಾಂಗ್ರೆಸ್ನ ಮಹಮದ್ ಲೈಕೋದ್ದೀನ್ ಅವರು ಮನ್ನಳ್ಳಿಗೆ 3154 ಮತಗಳ ಅಂತರದಿಂದ ಸೋಲಿಸಿದರು. ಸೋಲಿನ ಬಳಿಕ ಮನ್ನಳ್ಳಿ ಅವರು ಪಕ್ಷದ ಸಂಘಟನೆಯಲ್ಲಿ ತೊಡಗಿಕೊಂಡರು. 1989ರಲ್ಲಿ ಮನ್ನಳ್ಳಿ ಅವರು ಬಿಜೆಪಿಯಿಂದ ಅಖಾಡಕ್ಕಿಳಿದು ಕಾಂಗ್ರೆಸ್ನ ಮಹ್ಮದ್ ಲೈಕೋದ್ದೀನ್ ಅವರನ್ನು 1592 ಮತಗಳಿಂದ ಸೋಲಿಸಿ, ಮತ್ತೊಮ್ಮೆ ಸೇಡು ತೀರಿಸಿಕೊಂಡರು. 1989ರಲ್ಲಿ ಕಾಂಗ್ರೆಸ್ ಎದುರು ಬಿಜೆಪಿ ಬಲ ಕುಗ್ಗಿತ್ತು. ಕಾಂಗ್ರೆಸ್ 178 ಸ್ಥಾನದಲ್ಲಿ ಗೆದ್ದು ಬೀಗಿದರೆ, ಬಿಜೆಪಿ ಕೇವಲ 4ರಲ್ಲಿ ಗೆದ್ದಿತ್ತು. ಶಿಕಾರಿಪುರದಿಂದ ಯಡಿಯೂರಪ್ಪ, ಶಿವಮೊಗ್ಗದಿಂದ ಈಶ್ವರಪ್ಪ, ವಿಟ್ಲ ಕ್ಷೇತ್ರದಿಂದ ರುಕ್ಮಯ್ಯ ಪೂಜಾರಿ ಬಿಟ್ಟರೆ ಬೀದರ್ ಕ್ಷೇತ್ರದಿಂದ ಮನ್ನಳ್ಳಿ ಮಾತ್ರ ಗೆದ್ದಿದ್ದರು.

1989ರ ಜಯದ ಬಳಿಕ ಮನ್ನಳ್ಳಿ ಅವರಿಗೆ ಮತ್ತೆ ಚುನಾವಣೆಗೆ ನಿಲ್ಲುವ ಅವಕಾಶ ಸಿಗಲಿಲ್ಲ. ನನಗೆ ಟಿಕೆಟ್ ಕೊಡಿ ಎಂದು ಮನ್ನಳ್ಳಿ ಯಾವತ್ತೂ ಕೇಳಲಿಲ್ಲ, ಟಿಕೆಟ್ ಕೊಡದಿದ್ದಾಗ ಯಾಕೆ ಕೊಟ್ಟಿಲ್ಲ ಎಂದು ಪ್ರಶ್ನಿಸಿದವರಲ್ಲ. ಪಕ್ಷದ ನಿರ್ಧಾರಕ್ಕೆ ಸದಾ ಬದ್ಧ. ಮಾತು ಬೆಳ್ಳಿಯಾದರೆ, ಮೌನ ಬಂಗಾರ ಎಂಬಂತೆ ಕಮ್ಮಿ ಮಾತನಾಡುವ ಹಾಗೂ ಹೆಚ್ಚು ಕೆಲಸ ಮಾಡುವ ಸ್ವಭಾವ ಇವರದ್ದಾಗಿತ್ತು. ಈ ವ್ಯಕ್ತಿತ್ವವೇ ಇವರಿಗೆ ಜಿಲ್ಲೆಯ ರಾಜಕಾರಣದಲ್ಲಿ ವಿಶಿಷ್ಟ ಛಾಪನ್ನು ಕೊಟ್ಟಿತ್ತು. ಇವರು ಅನೇಕ ಯುವಕರನ್ನು ಬಿಜೆಪಿಗೆ ಸೆಳೆದು, ಸಂಘಟನೆಗೆ ಶಕ್ತಿ ತುಂಬಲು ಪ್ರಯತ್ನಿಸಿದ್ದರು. ಐದು ದಶಕದ ಸಾಮಾಜಿಕ, ರಾಜಕೀಯ ಜೀವನ ಸಾರ್ಥಕ ನಡೆಸಿದ ಮನ್ನಳ್ಳಿ, 2015ರ ಜನವರಿ 28ರಂದು ತಮ್ಮ 85ನೇ ವರ್ಷದಲ್ಲಿ ನಿಧನ ಹೊಂದಿದರು.

### ಸಹಕಾರ ಸೇವೆಗೂ ಸೈ...

ನಾರಾಯಣರಾವ ಮನ್ನಳ್ಳಿ ಅವರು ರಾಜಕೀಯದ ಜೊತೆಗೆ ಸಹಕಾರ ಕ್ಷೇತ್ರದಲ್ಲೂ ಸೈ ಎನಿಸಿಕೊಂಡರು. ಬೀದರ್ ಡಿಸಿಸಿ ಬ್ಯಾಂಕ್‌ನ ಅಲ್ಪಕಾಲೀನ ಅಧ್ಯಕ್ಷರಾಗಿದ್ದರು. ಸುಮಾರು 20 ವರ್ಷ ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. ಡಿಸಿಸಿ ಬ್ಯಾಂಕ್‌ನ್ನು ರಾಷ್ಟ್ರಮಟ್ಟದಲ್ಲಿ ಬೆಳೆಸಿದ ಶ್ರೇಯಸ್ಸು ದಿ.ಗುರುಪಾದಪ್ಪ ನಾಗಮಾರಪಳ್ಳಿ ಅವರಿಗೆ ಸಲ್ಲುತ್ತದೆ. ಅವರ ಜೊತೆ ನಿಂತು ಮನ್ನಳ್ಳಿ ಅವರು ಬ್ಯಾಂಕ್ ಬೆಳವಣಿಗೆಯಲ್ಲಿ ಶ್ರಮಿಸಿದ್ದರು. ಮನ್ನಳ್ಳಿ ಅವರು ಬಿಜೆಪಿ ಬಿಟ್ಟು ಯಾವತ್ತೂ ಸಹ ಬೇರೆಡೆ ಮುಖ ಮಾಡಿಲ್ಲ. ಆದರೆ ಬದಲಾದ ಸನ್ನಿವೇಶಗಳಲ್ಲಿ ನಾಗಮಾರಪಳ್ಳಿ ಜನತಾ ದಳ, ಕಾಂಗ್ರೆಸ್, ಬಿಜೆಪಿ, ಕೆಜೆಪಿಗೂ ಜೈ ಎಂದಿದ್ದರು. ನಾಗಮಾರಪಳ್ಳಿ ಯಾವ ಪಕ್ಷದಲ್ಲಿದ್ದರೂ ಮನ್ನಳ್ಳಿ ಅವರ ಮಿತ್ರತ್ವ ಬಿಡಲಿಲ್ಲ. ಇಬ್ಬರೂ ಕೊನೆವರೆಗೂ ಸಹೋದರರಂತೆಯೇ ಇದ್ದರು. ಬೀದರ್ ಜಿಲ್ಲೆಯಲ್ಲಿ ಸಹಕಾರ ಕ್ಷೇತ್ರ ಗಟ್ಟಿಗೊಳ್ಳುವಲ್ಲಿ ಮನ್ನಳ್ಳಿ ಕೊಡುಗೆ ಸಹ ಅಪಾರವಾದುದು.

# ಮಾಸದ ಮಾಧುರ್ಯ 92ನೇ ಕಾರ್ಯಕ್ರಮದಲ್ಲಿ

# ಏಕ ವ್ಯಕ್ತಿ ನಾಟಕ ದೀಪಧಾರಿಣಿ





ಜಗನ್ನಾಥ ಬಳಗದ 92ನೇ ಕಾರ್ಯಕ್ರಮ '**ದೀಪಧಾರಿಣಿ**' ದಿನಾಂಕ 01-12-2024ರಂದು ಸಾಯಂಕಾಲ 5.30ಕ್ಕೆ ಜಗನ್ನಾಥ ಭವನದ ಮಂಥನ ಸಭಾಂಗಣದಲ್ಲಿ **ಶ್ರೀಮತಿ ಶ್ರೀವಿದ್ಯಾ ಕಾಮತ್** ರವರ ಏಕವ್ಯಕ್ತಿ ನಾಟಕದ ಮುಖಾಂತರ ಒಂದು ದಿವ್ಯ ಸಂದೇಶವನ್ನು ಸಮಾಜಕ್ಕೆ ನೀಡುವ ಮೂಲಕ ಮಾಸದೇ ಇರುವ ಒಂದು ಕಾರ್ಯಕ್ರಮಕ್ಕೆ ತಮ್ಮ ಕೊಡುಗೆ ನೀಡುವಲ್ಲಿ ಕಲಾವಿದೆಯ ಪ್ರಯತ್ನ ಸಾರ್ಥಕ.

ಸ್ವಾವಲಂಬಿ ಬದುಕಿನ ಸಂತೋಷಕ್ಕೆ ಒಂದು ಉದಾಹರಣೆಯಾಗಿ ತಾವು **ಬದುಕಿನಲ್ಲಿ ಕಂಡ ಸತ್ಯದ ಅನಾವರಣವನ್ನು ಸಮಾಜದ ಒಳಿತು ಮತ್ತು ಸುಧಾರಣೆಗೆ ಕಿರು ಕಾಣಿಕೆ** ಸಲ್ಲಿಸುವಲ್ಲಿ ಅತ್ಯಂತ ಯಶಸ್ವಿಯಾದರು. ಶ್ರೀವಿದ್ಯಾರವರು ತಿಂಗಳಿಗೆ ಲಕ್ಷ ಸಂಪಾದನೆಯ ಒಳ್ಳೆಯ ಹುದ್ದೆಗೆ ರಾಜೀನಾಮೆ ಸಲ್ಲಿಸಿ '**ನನ್ನ ಬದುಕು ನನಗೆ, ನನ್ನ ಕುಟುಂಬಕ್ಕೆ ಸೀಮಿತವಾದರೆ ಏನು ಪ್ರಯೋಜನ, ನನ್ನ ಜೀವನ ಹಲವರ ಬದುಕಿಗೆ ಬೆಳಕಾಗಬೇಕು**' ಎನ್ನುವ ತುಡಿತದಿಂದ ಮೇಣದ ಬತ್ತಿ ತಯಾರಿಕಾ ಘಟಕವನ್ನು ಆರಂಭಿಸಿ ಅದರಲ್ಲಿ ಹೊಸ ಹೊಸ ಆವಿಷ್ಕಾರ ಮಾಡಿ ಇಂದು ನೂರಾರು ಬಗೆಯ ಮೇಣದ ಬತ್ತಿ ತಯಾರಿಸುತ್ತಿದ್ದು ಹಲವು ದುಡಿಯುವ ಕೈಗಳಿಗೆ ಕೆಲಸವನ್ನು ಕೊಟ್ಟಿದ್ದಾರೆ.

ಮದುವೆ, ಮುಂಜಿ, ಹಬ್ಬ, ಆಸ್ಪತ್ರೆ, ಸಾರ್ವಜನಿಕ ಸಮಾರಂಭಗಳಿಗೆ ಇವರು ತಯಾರಿಸುತ್ತಿರುವ ಮೇಣದ ಬತ್ತಿಗಳು ದೇಶ ವಿದೇಶಗಳಿಗೂ ರಫ್ತಾಗುತ್ತಿದ್ದು, ಹಲವು ಸುಗಂಧದಲ್ಲಿಯೂ ಜನರ ಮನಸ್ಸಿನ ಉಲ್ಲಾಸಕ್ಕೆ ಕೊಡುಗೆ ಸಲ್ಲಿಸುತ್ತಿದ್ದಾರೆ.

'**ಒಂದು ದೀಪಕ್ಕೆ ಇರುವ ಭರವಸೆ ಹಲವು ದೀಪವನ್ನು ಬೆಳಗಿಸುವ ಸಾಮರ್ಥ್ಯವಿರುವುದಾದರೆ ನೀನೇಕೆ ಒಂದು ದೀಪವಾಗಿ ನನ್ನೊಂದಿಗೆ ಹಲವು ದೀಪವನ್ನು ಬೆಳಗಿಸಿದರೆ ಅದರ ತೃಪ್ತಿಯೇ ಬೇರೆ, ಅದರಲ್ಲಿ ಸಿಗುವ ಆನಂದವನ್ನು ಶಬ್ದಗಳಲ್ಲಿ ವರ್ಣಿಸಲು ಸಾಧ್ಯವಿಲ್ಲ**' ಎಂದು ಹೇಳುತ್ತ ಕಾರ್ಯಕ್ರಮದ ಕೊನೆಯಲ್ಲಿ ಪ್ರೇಕ್ಷಕರು ಕೇಳಿದ ಪ್ರಶ್ನೆಗಳಿಗೆ ಉತ್ತರಿಸಿ ಸ್ವಂತ ಕಾಲಮೇಲೆ ನಿಂತು ತಾವು ಸಮಾಜಮುಖಿಯಾದರೆ ಸ್ವಾಭಿಮಾನಿ ಬದುಕು ನಮ್ಮದಾಗಬೇಕು ಎಂಬು ಬಯಕೆ ನಿಮಗಿದ್ದರೆ ಅದಕ್ಕೆ ಬೇಕಾದ ಸಲಹೆ, ಸಹಕಾರ ಕೊಡುವ ಭರವಸೆಯನ್ನು ಕೊಟ್ಟರು. ಆಗಮಿಸಿದ್ದ ಎಲ್ಲ ಕಲಾಭಿಮಾನಿಗಳಿಗೂ ಒಂದೊಂದು ವಿದಧ ಮೇಣದ ಬತ್ತಿಯನ್ನು ಉಡುಗೊರೆಯಾಗಿ ನೀಡಿದರು.

ಆರು ಭಾಷೆಗಳಲ್ಲಿ ನಿರರ್ಗಳವಾಗಿ ಈ ನಾಟಕವನ್ನು ರಂಗದ ಮೇಲೆ ಪ್ರದರ್ಶಿಸಿರುವ ಸಾಮರ್ಥ್ಯವನ್ನು ಶ್ರೀಮತಿ ಶ್ರೀವಿದ್ಯಾ ಕಾಮತ್ ರವರು ಹೊಂದಿದ್ದಾರೆ. ಈ ನಾಟಕದ ರಚನೆ ಶ್ರೀಮತಿ ಸುಧಾ ಆಡುಕುಳ, ಪರಿಕಲ್ಪನೆ, ವಿನ್ಯಾಸ, ನಿರ್ದೇಶನ ಡಾ. ಶ್ರೀಪಾದ ಭಟ್, ಸಹಾಯ ಕಲೊಮ್ ಸನ್ನುತ ಮತ್ತು ಸಂಗೀತ ಶ್ರೀಮತಿ ಅನುಷಾ ಶೆಟ್ಟಿ ರವರು ನಿರ್ವಹಿಸಿದರು.



ಮನ್ ಕಿ ಬಾತ್

# ಯುವ ರಾಜಕಾರಣ

## ಜನವರಿ 11,12 ರಂದು ವಿಕಸಿತ ಭಾರತ ಯುವ ನಾಯಕರ ಸಂವಾದ

ರಾಜಕಾರಣದ ಯಾವುದೇ ಹಿನ್ನೆಲೆ ಇರದ ಯುವ ಪ್ರತಿಭೆಗಳ ಯುವಶಕ್ತಿಯನ್ನು ರಾಷ್ಟ್ರದ ಸಕ್ರಿಯ ರಾಜಕಾರಣಕ್ಕೆ ಜೋಡಿಸುವ ಉಪಕ್ರಮದ ಅಂಗವಾಗಿ ದೆಹಲಿಯಲ್ಲಿ ಜನವರಿ 11,12 ರಂದು ವಿಕಸಿತ ಭಾರತ ಯುವ ನಾಯಕರ ಸಂವಾದ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ಪ್ರಧಾನಿ ಶ್ರೀ ನರೇಂದ್ರ ಮೋದಿ ರವರು 116ನೇ 'ಮನ್ ಕೀ ಬಾತ್' ಬಾನುಲಿ ಕಾರ್ಯಕ್ರಮದಲ್ಲಿ ಹೇಳಿದ್ದಾರೆ.

ಮುಂದಿನ ವರ್ಷ ಜನವರಿ 12ರಂದು ಸ್ವಾಮಿ ವಿವೇಕಾನಂದರ 162ನೇ ಜಯಂತಿಯನ್ನು ಬಲು ವಿಶೇಷವಾಗಿ ಆಚರಿಸುವ ಸಂದರ್ಭದಲ್ಲಿ ಜನವರಿ 11 ಹಾಗೂ 12ರಂದು ಯುವ ಪ್ರತಿಭೆಗಳ **'ಮಹಾ ಕುಂಭ' - ವಿಕಸಿತ ಭಾರತ ಯುವ ನಾಯಕರ ಸಂವಾದ** ಕಾರ್ಯಕ್ರಮವನ್ನು ದೆಹಲಿಯ ಭಾರತಿ ಮಂಡಪಮ್‌ನಲ್ಲಿ ಆಯೋಜಿಸಲಾಗುವುದು ಎಂದು ಹೇಳಿದ್ದಾರೆ. ಆಯ್ದ ಹಳ್ಳಿಗಳು, ಬ್ಲಾಕ್‌ಗಳು, ಜಿಲ್ಲೆಗಳು ಹಾಗೂ ರಾಜ್ಯಗಳಿಂದ ಆಯ್ಕೆಯಾಗಿರುವ ಸುಮಾರು 2 ಸಾವಿರ ಯುವ ಪ್ರತಿಭೆಗಳು ವಿಕಸಿತ ಭಾರತ ಯುವ ನಾಯಕರ ಸಂವಾದದಲ್ಲಿ ಪಾಲ್ಗೊಳ್ಳುವರು ಎಂದು ತಿಳಿಸಿದ್ದಾರೆ.

**ಸಾಧನೆ ಸ್ಫೂರ್ತಿದಾಯಕ :** ಸ್ವಾತಂತ್ರ್ಯ ಹೋರಾಟಕ್ಕೆ ಅಪೂರ್ವ ಕೊಡುಗೆ ನೀಡಿದ, ಪರಂಪರೆಗಳನ್ನು ಸಂರಕ್ಷಿಸಿದ ಹಾಗೂ ವಿಶೇಷ ಸಾಧನೆಗಳಿಂದಲೇ ಜಾಗತಿಕವಾಗಿ ವಿಶೇಷ ಛಾಪು ಮೂಡಿಸಿರುವ ಭಾರತೀಯ ನಾಯಕರ ಸ್ಫೂರ್ತಿದಾಯಕ ಯಶೋಗಾಥೆಗಳಿಂದ ಪ್ರೇರಿತರಾಗುವಂತೆ, ಪ್ರಧಾನಿ ಶ್ರೀ ಮೋದಿ ಕರೆ ನೀಡಿದ್ದಾರೆ.

**ಅಂದೇ ಕರೆ ನೀಡಿದ್ದೆ:** ಯಾವುದೇ ರಾಜಕೀಯ ಹಿನ್ನೆಲೆ ರಹಿತ ಕುಟುಂಬದ ಯುವಕರು ರಾಜಕೀಯ ಕಣಕ್ಕೆ ಬನ್ನಿ ಎಂದು ನಾನು ಈ ಹಿಂದೆಯೇ ಕೆಂಪು ಕೋಟೆಯಿಂದ ದೇಶದ ಯುವಜನತೆಗೆ ಕರೆ ನೀಡಿದ್ದೆ. ಒಂದು ಲಕ್ಷ ಯುವಕರನ್ನು ರಾಜಕೀಯ ರಂಗಕ್ಕೆ ಜೋಡಿಸುವ ನಿಟ್ಟಿನಲ್ಲಿ ವಿಶೇಷ ಅಭಿಯಾನಗಳು ನಡೆಯಲಿವೆ. ನಾಳಿನ ವಿಕಸಿತ ಭಾರತದ ಯುವ ನಾಯಕರ ಸಂವಾದ ಕಾರ್ಯಕ್ರಮ ಈ ಅಭಿಯಾನದ ಭಾಗ ಎಂದು ಪ್ರಧಾನಿ ಶ್ರೀ ಮೋದಿ ತಿಳಿಸಿದ್ದಾರೆ. ದೇಶ ವಿದೇಶಗಳ ತಜ್ಞರು, ರಾಷ್ಟ್ರೀಯ -ಅಂತಾರಾಷ್ಟ್ರೀಯ ಶ್ರೇಷ್ಠ ವ್ಯಕ್ತಿಗಳು ಕೂಡ ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

**ಎನ್‌ಸಿಸಿ ಯಿಂದ ಅನುಶಾಸನ ಪಾಠ :** ಎನ್‌ಸಿಸಿಯನ್ನು ಪ್ರಧಾನಿ ಶ್ರೀ ಮೋದಿ ರವರು ಪ್ರಶಂಸಿಸಿ ನಾನೂ ಕೂಡ ಎನ್‌ಸಿಸಿ ಕೆಡೆಟ್ ಆಗಿದ್ದೆ, ಅದು ನನಗೆ ನೀಡಿದ ಅನುಭವ ಅನನ್ಯವೆಂದು ವಿಶ್ವಾಸದಿಂದ ಹೇಳಬಲ್ಲೆ. ಅನುಶಾಸನ, ನಾಯಕತ್ವ ಮತ್ತು ಯುವಕರಲ್ಲಿ ಸೇವಾಭಾವ ಮೂಡಿಸಲು ಎನ್‌ಸಿಸಿ ಸಹಕಾರಿಯಾಗಿದೆ ಎಂದು ಪ್ರಧಾನಿ ಶ್ರೀ ಮೋದಿ ತಿಳಿಸಿದ್ದಾರೆ.

**ಮಕ್ಕಳಲ್ಲಿ ಪಕ್ಷಿಗಳ ಬಗ್ಗೆ ಅರಿವು ಮೂಡಿಸಿ :** ಇಂದಿನ ಪೀಳಿಗೆಯ ಮಕ್ಕಳು ಗುಬ್ಬಚ್ಚಿಯನ್ನು ಚಿತ್ರಗಳಲ್ಲಿ ಮಾತ್ರ ನೋಡಿದ್ದಾರೆ. ಈಗ ಈ ಹಕ್ಕಿಯ ವಾಪಸಾತಿಗೆ ಹಲವು ಪ್ರಯತ್ನಗಳು ನಡೆಯುತ್ತಿದೆ. ನೀವೂ ಸಹ ನಿಮ್ಮ ಸುತ್ತ ಪ್ರಯತ್ನ ಮಾಡಿದರೆ, ಗುಬ್ಬಚ್ಚಿಗಳು ನಮ್ಮ ಜೀವನದ ಭಾಗವಾಗುತ್ತವೆ ಎಂದರು ಪ್ರಧಾನಿ ಶ್ರೀ ಮೋದಿ ಕರೆ ನೀಡಿದ್ದಾರೆ.

**ಸದವಕಾಶವಿದು:** ಸಂವಾದದಲ್ಲಿ ಪಾಲ್ಗೊಳ್ಳುವ ಯುವಕರು ದೇಶದ ಭವಿಷ್ಯಕ್ಕೆ ಸಂಬಂಧಿಸಿದ ತಮ್ಮ ಚಿಂತನೆಗಳನ್ನು ನೇರ ನಮ್ಮ ಮುಂದಿಡಲು ಅವಕಾಶವಿದೆ. ರಾಷ್ಟ್ರವು ಪ್ರಸ್ತುತ ಚಿಂತನೆಗಳೊಂದಿಗೆ ಮುನ್ನಡಿ ಇಡುವ ಮಾರ್ಗೋಪಾಯಗಳ ಬಗ್ಗೆ ಚಿಂತನ ಮಂಥನ ನಡೆಸಲಾಗುವುದು, ಈ ಬಗ್ಗೆ ಸದೃಢ ದಿಕ್ಸೂಚಿ ಜತೆ ನೀಲಿನಕಾಶೆಯನ್ನು ಕೂಡ ಸಿದ್ಧಪಡಿಸಲಾಗುವುದು ಎಂದು ಪ್ರಧಾನಿ ಶ್ರೀ ಮೋದಿ ತಿಳಿಸಿದ್ದಾರೆ.

ರಾಜ್ಯದ ಭವ್ಯ ಭವಿಷ್ಯವನ್ನು ನಿರ್ಮಿಸಲು ಶಕ್ತರಾದ ಎಲ್ಲಾ ಯುವಜನತೆಗಿದೊಂದು ಮಹಾನ್ ಅವಕಾಶ, ಬನ್ನಿ, ಐಕ್ಯಮತ್ಯದೊಂದಿಗೆ ರಾಷ್ಟ್ರ ನಿರ್ಮಾಣ ಮಾಡೋಣ, ದೇಶವನ್ನು ಸಂಪನ್ನ ರಾಷ್ಟ್ರವಾಗಿ ಪರಿವರ್ತಿಸೋಣ ಎಂದು ಪ್ರಧಾನಿ ಶ್ರೀ ಮೋದಿ ರವರು ಕರೆ ನೀಡಿದ್ದಾರೆ.

**ಮೈಸೂರಿನ ಅರ್ಲಿ ಬರ್ಡ್ ಸಂಸ್ಥೆಗೆ ಶ್ಲಾಘನೆ :** ಮೈಸೂರಿನ ಅರ್ಲಿ ಬರ್ಡ್ ಸಂಸ್ಥೆಯು ಮಕ್ಕಳಿಗೆ ಪಕ್ಷಿ, ಪ್ರಕೃತಿಯ ಮಹತ್ವವನ್ನು ತಿಳಿಸುವ ಕೆಲಸ ಮಾಡುತ್ತಿದೆ. ಮಕ್ಕಳಿಗೆ ಪ್ರಕೃತಿಯ ಕುರಿತು ಶಿಕ್ಷಣ ನೀಡುತ್ತಿರುವ ಸಂಸ್ಥೆ ಇದಾಗಿದ್ದು, ಮೈಸೂರು ನಗರದಲ್ಲಿರುವ ಮಕ್ಕಳನ್ನು ಹಳ್ಳಿಗಳಿಗೆ ಕರೆದೊಯ್ದು ಪಕ್ಷಿಸಂಕುಲದ ಪರಿಚಯ ಮಾಡಿಕೊಡುವುದಷ್ಟೇ ಅಲ್ಲದೆ, ಅದರಿಂದಾಗುವ ಪ್ರಯೋಜನಗಳ ಬಗ್ಗೆಯೂ ತಿಳಿ ಹೇಳುತ್ತಿದ್ದು, ಉತ್ತಮ ನಾಗರಿಕರನ್ನಾಗಿ ಮಾಡಲು ಶ್ರಮ ಪಡುತ್ತಿದ್ದಾರೆ, ಅರ್ಲಿ ಬರ್ಡ್ ಸಂಸ್ಥೆಯು ವಿಶೇಷ ಗ್ರಂಥಾಲಯದಲ್ಲಿ ಕಥೆ ಪುಸ್ತಕಗಳನ್ನು ಇಟ್ಟಿದ್ದಾರೆ ಎಂದು ತಿಳಿಸಿದ್ದಾರೆ. ಈ ಸಂಸ್ಥೆಯು ಮಕ್ಕಳಿಗೆ ಶಕ್ತಿಗಳನ್ನು ಪರಿಚಯಿಸಲು ಶಿಕ್ಷಣ ತಜ್ಞರು ಮತ್ತು ಹವ್ಯಾಸಿ ಪಕ್ಷಿವೀಕ್ಷಕರಿಗೆ ತರಬೇತಿ ನೀಡುತ್ತಿದೆ. ನಮ್ಮ ಸುತ್ತಲಿನ ಜೀವವೈವಿಧ್ಯವನ್ನು ಕಾಪಾಡುವಲ್ಲಿ ಗುಬ್ಬಚ್ಚಿಗಳು ಪ್ರಮುಖ ಪಾತ್ರವಹಿಸಿವೆ ಆದರೆ ಹೆಚ್ಚುತ್ತಿರುವ ನಗರೀಕರಣದಿಂದಾಗಿ ಗುಬ್ಬಚ್ಚಿಗಳು ನಮ್ಮಿಂದ ದೂರವಾಗಿದೆ ಎಂದು ಪ್ರಧಾನಿ ಶ್ರೀ ಮೋದಿ ವಿಶಾದ ವ್ಯಕ್ತಪಡಿಸಿದ್ದಾರೆ.

# ನೂತನ ಬೂತ್ ಸಮಿತಿ ರಚನೆ



ಚಿಕ್ಕಮಗಳೂರು



ಗದಗ



ಮಂಗಳೂರು



ಮೈಸೂರು ನಗರ



ಶಿವಮೊಗ್ಗ



ವಿಜಯನಗರ



ತುಮಕೂರು

ಸಮಷ್ಟಿ



ಕಾಲೇ ವರ್ಷತು ಪರ್ಜನ್ಯಃ

# ಸಂಘಟನೆ ಕಟ್ಟುವವರಿಗೂ ಬೇಕು, ಆಳುವವರಿಗೂ ಬೇಕು ಅಭ್ಯಾಸ ವರ್ಗ ...!!

ಮಹಾಭಾರತ ಯುದ್ದ ಅಂತಿಮ ಹಂತ ತಲುಪಿತ್ತು. ಪಾಂಡವರ ವಿಜಯ ಬಹುತೇಕ ನಿಶ್ಚಯವಾಗಿತ್ತು. ಪ್ರತಿ ನಿತ್ಯದ ಯುದ್ದದ ಅವಲೋಕನಕ್ಕಾಗಿ ರಾತ್ರಿ ಪಾಂಡವರ ಶಿಬಿರದಲ್ಲಿ ಎಲ್ಲರೂ ಸೇರಿದ್ದರು. ಎಲ್ಲರಲ್ಲೂ ಗೆಲುವಿನ ಆತ್ಮವಿಶ್ವಾಸವಿತ್ತು. ಈ ಸಂದರ್ಭದಲ್ಲಿ ಶ್ರೀಕೃಷ್ಣ ಯುದ್ಧದ ವಸ್ತುಸ್ಥಿತಿಯನ್ನು ಪರಾಮರ್ಶಿಸುತ್ತಿದ್ದ. ಯುದ್ಧದಲ್ಲಿ ಗೆಲವು ಶತಃಸಿದ್ದ ಎಂಬ ಉತ್ತರ ಸಾಮಾನ್ಯವಾಗಿತ್ತು. ಕೂಡಲೇ ಕೃಷ್ಣ ಒಂದು ಪ್ರಶ್ನೆಯನ್ನು ಮುಂದಿಟ್ಟ. 'ಯುದ್ದದಲ್ಲಿ ಗೆಲುವು ನಮ್ಮದಾಗಲಿರುವುದು ನಿಶ್ಚಿತ. ಆದರೆ ನಂತರ ರಾಜನಾಗುವವನು ಯಾರು?' ಸಭೆ ಒಂದು ಕ್ಷಣ ಸ್ತಬ್ಧವಾಯಿತು. ಇಲ್ಲಿಯವರೆಗೂ ಈ ಪ್ರಶ್ನೆ ಯಾರಲ್ಲೂ ಉದ್ಭವವಾಗಿಯೇ ಇರಲಿಲ್ಲ. ಏಕೆಂದರೆ ಎಲ್ಲರಿಗೂ ಹಿರಿಯ ಮಗ ಧರ್ಮರಾಯನೇ ಮುಂದಿನ ರಾಜ ಎಂಬುದು ಅಘೋಷಿತ ಅನಿಸಿಕೆಯಾಗಿತ್ತು.

ಪದ್ಧತಿಯ ಪ್ರಕಾರ ಹಿರಿಯ ಮಗನೇ ರಾಜನಾಗಬೇಕು. ಪಾಂಡವರಲ್ಲಿ ಹಿರಿಯ ಧರ್ಮರಾಯನೇ ರಾಜನಾಗಬೇಕು. ಆದರೂ ಕೃಷ್ಣ ಏಕೆ ಈ ಪ್ರಶ್ನೆ ಕೇಳುತ್ತಿದ್ದಾನೆ ಎಂಬುದು ಯಾರಿಗೂ ಅರ್ಥವಾಗಲಿಲ್ಲ. ಕೃಷ್ಣ ಮುಂದುವರೆದು ಒಬ್ಬೊಬ್ಬರಲ್ಲೂ ಈ ಪ್ರಶ್ನೆಯನ್ನು ಕೇಳುತ್ತಾ ಬಂದ. ಅರ್ಜುನ, 'ಮತ್ತಿನ್ಯಾರು? ಧರ್ಮರಾಯನೇ' ಎಂದ. ಭೀಮನಿಗೆ ಕೃಷ್ಣನ ಪ್ರಶ್ನೆಯಿಂದ ಸಿಟ್ಟು ಬಂತು. 'ಈ ಪ್ರಶ್ನೆಯನ್ನು ಏಕೆ ಕೇಳುತ್ತೀಯಾ ಕೃಷ್ಣ?, ಧರ್ಮರಾಯನೇ ಮುಂದಿನ ರಾಜ' ಎಂದು ಸಿಟ್ಟಿನಿಂದಲೇ ಉತ್ತರಿಸಿದ. ಕುಂತಿ, ನಕುಲ, ಸಹದೇವರಿಂದಲೂ ಇದೇ ತೆರನಾದ ಉತ್ತರ ಬಂದಿತು.

ಮುಂದಿನ ಸರದಿ ಧರ್ಮರಾಯನದ್ದು. ಧರ್ಮರಾಯನಿಗೇ ಕೃಷ್ಣನ ಪ್ರಶ್ನೆಯಿಂದ ಸ್ವಲ್ಪ ಕಸಿವಿಸಿಯಾಯಿತು. ಕೃಷ್ಣನಿಂದ ಈ ಪ್ರಶ್ನೆ ಬಂದಿದೆ ಎಂದರೆ ತನ್ನ ಅರ್ಹತೆಯ ಬಗ್ಗೆ ಕೃಷ್ಣನಿಗೆ ಅನುಮಾನವಿರಬಹುದೆಂಬ ಸಂಶಯವೂ ಕಾಡತೊಡಗಿತು. ತಕ್ಷಣ ಕೃಷ್ಣನ ಪ್ರಶ್ನೆಗೆ ಧರ್ಮರಾಯ, 'ನಾನೇ ರಾಜ ಆಗುವವನು ಎಂದು ಗೊತ್ತಿದ್ದೂ ಈ ಪ್ರಶ್ನೆ ಮಾಡುತ್ತಿದ್ದಿಯಾ ಅಂದರೆ, ನಿನಗೆ ನನ್ನ ಸಾಮರ್ಥ್ಯದ ಬಗ್ಗೆಯೇ ಶಂಕೆಯಿರಬಹುದು, ನೀನೇ ನನ್ನ ಬಗ್ಗೆ ಅನುಮಾನ ಪಟ್ಟಮೇಲೆ, ನಾನು ರಾಜನಾಗಲಾರೆ' ಎಂದು ಬಿಡುತ್ತಾನೆ. ಆಗ ಕೃಷ್ಣ, 'ಸರಿ, ನೀನೆ ರಾಜ, ಈ ಬಗ್ಗೆ ಪ್ರಶ್ನೆಯೇ ಇಲ್ಲ, ಆದರೆ ನಿನಗೆ ರಾಜನಾಗುವುದಕ್ಕೆ ಪಾಂಡು ರಾಜನ ಹಿರಿಯಮಗ ಎನ್ನುವುದನ್ನು ಬಿಟ್ಟರೆ ಮತ್ತಿನ್ಯಾವ ಅರ್ಹತೆಯಿದೆ?, ಆಡಳಿತ ಮಾಡಿ ಅನುಭವವಿಲ್ಲದ ನೀನೂ ಒಂದಿಷ್ಟು ರಾಜನೀತಿಯ ಪಾಠಗಳನ್ನು ಕಲಿಯಬೇಕಲ್ಲವೇ?' ಎನ್ನುತ್ತಾನೆ. ಆಗ ಧರ್ಮರಾಯನಿಗೂ ಸರಿ ಎನಿಸುತ್ತದೆ. ಇದಕ್ಕಾಗಿ ಏನು ಮಾಡಬೇಕು ಎಂದು ಕೃಷ್ಣನ್ನು ಕೇಳುತ್ತಾನೆ, ಅದಕ್ಕೆ ಕೃಷ್ಣ, ಈ ಕಾಲ ಕಂಡ ಶ್ರೇಷ್ಠ ರಾಜ, ಅನುಭವಿ ಆಡಳಿತಗಾರ ಭೀಷ್ಮ. ಅವನೀಗ ಶರ ಶಯನದಲ್ಲಿ ಮಲಗಿ ತನ್ನ ಕೊನೆಯ ದಿನವನ್ನು ಎದುರು ನೋಡುತ್ತಿದ್ದಾನೆ. ಅವನ ಬಳಿ ನೀವು ಹೋಗಿ ಕುಳಿತು ಆಡಳಿತದ ಕಾರ್ಯತಂತ್ರ, ಅನುಭವಗಳನ್ನು ಕೇಳಿ ತಿಳಿದುಕೊಳ್ಳಿ ಎನ್ನುತ್ತಾನೆ. ಅದರಂತೆ ಪಾಂಡವರು ಕೃಷ್ಣನೊಂದಿಗೆ ಭೀಷ್ಮನ ಬಳಿ ಹೋಗಿ ಆಡಳಿತದ ಪಟ್ಟುಗಳನ್ನು, ಸೂಕ್ಷ್ಮಗಳನ್ನು, ಅನುಭವಗಳ ಸಾರವನ್ನು ಕೇಳಿ ತಿಳಿದು ಕೊಳ್ಳುತ್ತಾರೆ.

ಬಿಜೆಪಿಯಲ್ಲಿ ಅಂದು ಪಂಡಿತ್ ದೀನದಯಾಳ್‌ಜೀಯವರು ಸಂಘಟನೆಯಲ್ಲಿ ಅಳವಡಿಸಿಕೊಂಡ ಪ್ರಶಿಕ್ಷಣವರ್ಗದ ಕಲ್ಪನೆ, ಈ ಮಹಾಭಾರತದಿಂದ ಹುಟ್ಟಿಕೊಂಡ ಕೂಸೇ. ಯಾವುದೇ ರಾಜಕೀಯ ಪಕ್ಷದಲ್ಲಿ ಇಲ್ಲದ ಪ್ರಶಿಕ್ಷಣ ವರ್ಗದ ಕಲ್ಪನೆ ಜನಸಂಘದ ಕಾಲದಿಂದಲೂ ಇದೆ. ಪಂಡಿತ್ ದೀನದಯಾಳ್‌ಜೀಯವರು 1961 ರಲ್ಲಿಯೇ 26 ಚುನಾಯಿತ ಪ್ರತಿನಿಧಿಗಳಿಗೆ ಪ್ರಶಿಕ್ಷಣ ವರ್ಗವನ್ನು ಆಯೋಜಿಸಿದ್ದರು. ಸಂಘಟನೆಯನ್ನು ಸಶಕ್ತಗೊಳಿಸುವುದರಲ್ಲಿ ಹಾಗೂ ಕಾರ್ಯಕರ್ತನ ಕ್ಷಮತೆ ಹೆಚ್ಚಿಸುವಲ್ಲಿ ಈ ಪ್ರಶಿಕ್ಷಣ ವರ್ಗಗಳ ಪಾತ್ರ ಅತ್ಯಂತ ಮಹತ್ವವಾದುದು. ಸಂಘಟನೆಯ ವೈಚಾರಿಕ ಸಿದ್ಧಾಂತದ ಅರಿವಿನ ಜೊತೆಗೆ, ಸಂಘಟನೆ ಮತ್ತು ಸರ್ಕಾರಗಳ ಸಮನ್ವಯತೆಯ ಪಾಠವೂ ಇಂತಹ ಪ್ರಶಿಕ್ಷಣ ವರ್ಗದಲ್ಲಿ ಕಾರ್ಯಕರ್ತನಿಗೆ ದೊರೆಯುತ್ತದೆ. ಜವಾಬ್ದಾರಿಗಳನ್ನು ಸ್ವೀಕರಿಸಿದವರಿಗೆ, ಚುನಾಯಿತರಾದ ಜನಪ್ರನಿಧಿಗಳಿಗೆ ನಮ್ಮ ಸಿದ್ಧಾಂತದ ಪಾಲನೆ, ಸಾಂವಿಧಾನಿಕವಾಗಿ ಆಡಳಿತ ನಡೆಸಬೇಕಾದ ರೀತಿ ನೀತಿಗಳ ಅರಿವಿಗೆ ನಡೆಯುವ ಪ್ರಶಿಕ್ಷಣ ವರ್ಗಗಳು ಬಿಜೆಪಿ ಅಳವಡಿಸಿಕೊಂಡಂತಹ ಕಾರ್ಯಪದ್ಧತಿ. ಅಂದು ಮಹಾಭಾರತದಲ್ಲಿ ಶ್ರೀಕೃಷ್ಣನ ಈ ಚಿಂತನೆಯನ್ನು, ಸಂಘಟನೆಯಲ್ಲೂ ಕಾರ್ಯರೂಪಕ್ಕಿಳಿಸಿದ್ದು ಮಹಾನ್ ಚಿಂತಕ, ದಾರ್ಶನಿಕ ದೂರದೃಷ್ಟಿತ್ವವುಳ್ಳ ಪಂಡಿತ್ ದೀನದಯಾಳ್‌ಜೀಯವರು.

– ಸ್ವಯಂಭೂ

**KAMALA PATHA** Monthly in Kannada
Date of Publication : 8th of Every Month
Price : ₹ 10/- Pages : 36

**RNI No.:KARKAN/2023/84034 REGISTERED NEWSPAPER UNDER No. KRNA/BGE/1173/2023-25**
**LICENCED TO POST WITHOUT PAYMENT - LICENCE No. PMG BG/WPP-408/2023-2025**
**OFFICE OF POSTING : BENGALURU PSO - 560 026 DATE OF POSTING : 10th / 15th / 20th OF EVERY MONTH**

**KAMALA PATHA** – Printed and Published by **H.S. GOPINATH** on behalf of **SAMAGRA VIKASA TRUST**, Printed at **RASHTROTTHANA MUDRANALAYA,** No. 8 & 8/1, Satya Pramoda Teertha, Building, 3rd Main, 9th Cross, Chamrajpet, BENGALURU – 560 018. Published At # 7/6, 4TH Cross, CC Road, Sarvagna Nagar, Cox Town, BENGALURU – 560 005. Editor: **B. V. PRAKASH (Bidare Prakash)**